# ಭಾರತದ ಸಂವಿಧಾನ ರಚನಾಸಭೆಯ ಚರ್ಚೆಗಳು (ನಡವಳಿಗಳು)

## ಸಂಪುಟ ೨

### ಮಂಗಳವಾರ, ೨೨ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು, ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ, ಬೆಳಗ್ಗೆ ೧೦ ಗಂಟೆಗೆ, ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪರಿಚಯಪತ್ರಗಳ ಸಲ್ಲಿಕೆ ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು

ಈ ಮುಂದಿನ ಸದಸ್ಯರು ತಮ್ಮ ಪರಿಚಯಪತ್ರಗಳನ್ನು ಸಲ್ಲಿಸಿ ದಾಖಲೆ ಪುಸ್ತಕದಲ್ಲಿ ಸಹಿ ಮಾಡಿದರು

ಶ್ರೀ ಜೈ ಸುಖಲಾಲ್ ಹಾಥಿ (ಉಳಿದ ರಾಜ್ಯಗಳ ಸಮೂಹ)

**ಶ್ರೀ ರಾಮ್ ನಾರಾಯಣ ಸಿಂಗ್** (ಬಿಹಾರ : ಸಾಮಾನ್ಯ) : ಮಾನ್ಯರೆ, ಅತ್ಯಂತ ಮುಖ್ಯವಾದ ಸಂವಿಧಾನ ವಿಷಯ ಕುರಿತು ತಮ್ಮ ಗಮನ ಸೆಳೆಯಬಯಸುತ್ತೇನೆ. ನಾವು ಇಲ್ಲಿ ಒಂದು ಸೌರ್ವಭೌಮ ಸಂಸ್ಥೆಯಾಗಿ ಸಭೆ ಸೇರಿ ಭಾವೀ ಸ್ವತಂತ್ರ ಭಾರತದ ಸಂವಿಧಾನವನ್ನು ರಚಿಸುವ ಕಾರ್ಯದಲ್ಲಿ ತೊಡಗಿದ್ದೇವೆ ಎಂದು ನಾನು ಭಾವಿಸಿದ್ದೇನೆ ಅದು ಪ್ರತಿಯೊಬ್ಬರಿಗೂ ತಿಳಿದಿದೆ. ಆದರೆ, ಸಭೆಯ ಕಚೇರಿಯು ಬಳಸಿದ ಲಕೋಟೆಯ ಮೇಲ್ಭಾಗದಲ್ಲಿ 'ಆನ್ ಹಿಸ್ ಮೆಜೆಸ್ಟೀಸ್ ಸರ್ವೀಸ್' ಎಂಬ ಪದಗಳು ಇರುವುದು ಕಂಡುಬರುತ್ತದೆ. ಇದು ಸೂಕ್ತವಾದುದಲ್ಲ ಮತ್ತು ಈ ವಿಷಯವನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಇನ್ನು ಮುಂದೆ ಸಭೆಯ ಕಚೇರಿಯವರು ನಡೆಸುವ ಪತ್ರವ್ಯವಹಾರದಲ್ಲಿ ಲಕೋಟೆಯ ಮೇಲಿರುವ ಈ ಪದಗಳನ್ನು ತೆಗೆದುಹಾಕುತ್ತಾರೆಂದು ನಾನು ನಂಬಿದ್ದೇನೆ.

### ರಾಷ್ಟ್ರಧ್ವಜಕ್ಕೆ ಸಂಬಂಧಿಸಿದ ನಿರ್ಣಯ

**ಮಾನ್ಯ ಸಭಾಧ್ಯಕ್ಷರು** : ನಾವು, ಸಭೆಯ ಕಾರ್ಯಸೂಚಿಯ ಪ್ರಕಾರ ಮುಂದುವರಿಯೋಣ. ಕಾರ್ಯಸೂಚಿಯಲ್ಲಿರುವ ಮೊದಲನೇ ಅಂಶವು ಪಂಡಿತ್ ಜವಾಹರಲಾಲ್ ನೆಹರು ಅವರು ಧ್ವಜ ಕುರಿತು ಮಾಡಿದ ಪ್ರಸ್ತಾವ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಮುಂದಿನ ನಿರ್ಣಯವನ್ನು ಮಂಡಿಸುವುದು ನನಗೆ ದೊರೆತ ಹೆಮ್ಮೆಯ ಅವಕಾಶವೆಂದು ಭಾವಿಸುತ್ತೇನೆ:

"ಭಾರತದ ರಾಷ್ಟ್ರಧ್ವಜವು, ತ್ರಿವರ್ಣಗಳಿಂದ ಕೂಡಿದೆ, ಅದರಲ್ಲಿ ಸಮಾಂತರವಾಗಿ ಕಡುಕೇಸರಿ, ಬಿಳಿ ಮತ್ತು ಕಡು ಹಸಿರು ಬಣ್ಣಗಳಿದ್ದು ಅದು ಸಮಪ್ರಮಾಣ ಅಳತೆಯದ್ದಾಗಿರುತ್ತದೆ. ಬಿಳಿ ಬಣ್ಣದ ಬ್ಯಾಂಡ್‌ನಲ್ಲಿ (ಪಟ್ಟಿಯಲ್ಲಿ) ನೆವಿಬ್ಲ್ಯೂ (ಕಡುನೀಲಿ) ಬಣ್ಣದ ಚಕ್ರದ ಚಿಹ್ನೆಯು ಇರತಕ್ಕದ್ದು. ಚಕ್ರದ ವಿನ್ಯಾಸವು, ಅಶೋಕನ ಸಾರನಾಥ ಸ್ತಂಭಾಗ್ರದ ಬೋದಿಗೆಯ ಮೇಲೆ ಕಾಣಿಸುವ ಚಕ್ರದಂತೆ ಇರಬೇಕು.

ಚಕ್ರದ ವ್ಯಾಸವು, ಸುಮಾರು ಬಿಳಿ ಪಟ್ಟಿಯ ಅಗಲದಷ್ಟು ಆಗಿರತಕ್ಕದ್ದು.

ಧ್ವಜದ ಅಗಲ ಮತ್ತು ಉದ್ದದ ದಾಮಾಷಾ ಅಳತೆಯು, ಸಾಮಾನ್ಯವಾಗಿ ೨:೩ ಆಗಿರತಕ್ಕದ್ದು."

ಮಾನ್ಯರೇ, ಈ ನಿರ್ಣಯವು ಸರಳ ಭಾಷೆಯಲ್ಲಿದ್ದು ಹಾಗೂ ಸ್ವಲ್ಪ ತಾಂತ್ರಿಕ ಪದಗಳಿಂದ ಕೂಡಿದ್ದು, ನಾನು ಈಗ ಓದಿ ಹೇಳಿದಂತೆ, ವಿವರಣೆಯ ಪದಗಳು ಭಾವಾವೇಶದಿಂದ ಅಥವಾ ಉದ್ರೇಕಗೊಳಿಸುವಂಥ ಪದಗಳಿಂದ ಕೂಡಿರುವುದಿಲ್ಲ. ಈ ಸದನದಲ್ಲಿ ಇರುವ ಅನೇಕರಿಗೆ, ಈ ಕ್ಷಣದಲ್ಲಿ ನಾನು ಹೇಳಿರುವ, ಭಾವಾವೇಶ ಹಾಗೂ ಉದ್ರೇಕಕಾರಿ ಎಂಬ ಪದಗಳು ಮತ್ತು ಅಂಗೀಕಾರಕ್ಕಾಗಿ ಗೌರವದಿಂದ ಮಂಡಿಸಿರುವ ರಾಷ್ಟ್ರಧ್ವಜ ಕುರಿತ ನಿರ್ಣಯಕ್ಕೆ ಎಷ್ಟೂ ಸಂಬಂಧವಿಲ್ಲವೆಂದು ಭಾವಿಸಬಹುದು, ಆದರೆ ಇದಕ್ಕೆ ಇತಿಹಾಸ ಇದೆ. ರಾಷ್ಟ್ರದ ಅಸ್ತಿತ್ವಕ್ಕೆ ಸಂಬಂಧಿಸಿದಂತೆ, ಇರುವ ಸುದೀರ್ಘ ಇತಿಹಾಸದ ಸಾರದಲ್ಲಿ ಸ್ವಲ್ಪ ಭಾಗದಲ್ಲಿ ಅದು ಇದೆ. ಆದರೆ ಅನೇಕ ಸಲ ಸ್ವಲ್ಪ ಸಮಯದಲ್ಲಿಯೇ, ಶತಮಾನಗಳ ಬೆಳವಣಿಗೆಯನ್ನು ನಾವು ಗಮನಿಸಬೇಕಾಗುತ್ತದೆ. ಅದೇನೂ ವಿಶೇಷವಲ್ಲದಿದ್ದರೂ, ಅದು ಕೇವಲ ಬದುಕಿನ ಪಾತ್ರವಾಗಿರದೇ ಮನುಷ್ಯ ಈ ಅತ್ಯಲ್ಪ ಜೀವಿತಾವಧಿಯಲ್ಲಿ ಏನು ಸಾಧನೆ ಮಾಡುತ್ತಾನೆ ಎಂಬುದೇ ಆಗಿದೆ. ಅದೇ ನಮ್ಮಲ್ಲಿ ಉಳಿಯುತ್ತದೆ. ಅದು ರಾಷ್ಟ್ರದ ಅಸ್ತಿತ್ವವನ್ನು ಬಿಟ್ಟು ಬೇರೇನೂ ಅಲ್ಲ. ರಾಷ್ಟ್ರವು ತನ್ನ ಅಸ್ತಿತ್ವದ ವಿವಿಧ ಕಾಲಗಳಲ್ಲಿ ಏನು ಮಾಡುತ್ತದೆ ಎಂಬುದು ಮುಖ್ಯವಾಗುತ್ತದೆ; ಕಳೆದ ಕಾಲು ಶತಮಾನದಲ್ಲಿ ಅಥವಾ ಅದರ ಆಸುಪಾಸಿನಲ್ಲಿ, ರಾಷ್ಟ್ರವು ಒಗ್ಗೂಡಿ ಸಾಧನೆ ಮಾಡಿತು ಹಾಗೂ ಆ ಅತ್ಯಲ್ಪ ಕಾಲದಲ್ಲಿ ಭಾರತದ ಜನತೆಯಲ್ಲಿ ದೇಶನಿಷ್ಠೆಯ ಭಾವನೆಗಳನ್ನು ತುಂಬಿದ್ದಷ್ಟೇ ಅಲ್ಲದೆ, ಅನಂತ ಕಾಲದವರೆಗೂ ಉಳಿಯುವಂತೆ ಮಾಡಿತು ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಇತಿಹಾಸ ಹಾಗೂ ಪರಂಪರೆಯನ್ನು ಆಳದವರೆಗೂ ಬೇರು ಬಿಡುವಂತೆ ಮಾಡಿ, ಸುದೀರ್ಘ ಇತಿಹಾಸಕ್ಕೆ ಹಾಗೂ ಪರಂಪರೆಗೆ ಕೊಡುಗೆ ನೀಡಿತು. ಅದೇ ಈ ದೇಶದ ನಮ್ಮ ಪರಂಪರೆ. ಆದ್ದರಿಂದ, ನಾನು ಈ ನಿರ್ಣಯವನ್ನು ಮಂಡಿಸುವಾಗ, ದೇಶವು ಈ ಕಾಲು ಶತಮಾನದ ಅವಧಿಯಲ್ಲಿ ಒಗ್ಗೂಡಿದ ಇತಿಹಾಸವು ನನ್ನ ನೆನಪಿಗೆ ಬರುತ್ತದೆ. ಆ ನೆನಪುಗಳು ನನ್ನನ್ನು ಆವರಿಸಿಬಿಡುತ್ತವೆ. ಈ ಮಹಾನ್ ರಾಷ್ಟ್ರದ ಮಹಾ ಸ್ವಾತಂತ್ರ್ಯ ಸಂಗ್ರಾಮದ ಏಳುಬೀಳುಗಳನ್ನು ನಾನು ನೆನಪಿಸಿಕೊಳ್ಳುತ್ತೇನೆ. ನಾವು ಈ ರಾಷ್ಟ್ರಧ್ವಜವನ್ನು ನೋಡಿದ ಕೂಡಲೇ ನಮಗೆ ಹೆಮ್ಮೆ ಎನಿಸುವುದಷ್ಟೇ ಅಲ್ಲದೇ ಉತ್ಸಾಹ ತುಂಬಿ ಮೈ ರೋಮಾಂಚನವಾಗುತ್ತದೆ; ಹಾಗೆಯೇ ನಮಗೆ ಹಿನ್ನಡೆಯಾದಾಗ ಈ ಧ್ವಜವನ್ನು ನೋಡಿದ ಕೂಡಲೇ ಧೈರ್ಯದಿಂದ ಮುನ್ನಡೆದಿರುವುದು ನನಗೆ ಹಾಗೂ ಈ ಸದನದಲ್ಲಿರುವ ಅನೇಕರಿಗೆ ನೆನಪಾಗುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದವರಲ್ಲಿ ಅನೇಕ ಜನ ಇಲ್ಲಿ ಉಪಸ್ಥಿತರಿಲ್ಲ, ಆ ಅನೇಕ ಸ್ನೇಹಿತರು ಮೃತರಾಗಿದ್ದಾರೆ, ಈ ಧ್ವಜವನ್ನು ಎತ್ತಿ ಹಿಡಿದವರಲ್ಲಿ ಅನೇಕರು ವೀರಮರಣ ಹೊಂದಿ ಬೇರೆಯವರಿಗೆ ಧ್ವಜವನ್ನು ವಹಿಸಿಕೊಟ್ಟಿದ್ದಾರೆ. ಅವರು ಇನ್ನೂ ಉನ್ನತ ಮಟ್ಟದಲ್ಲಿ ಎತ್ತಿ ಹಿಡಿದಿದ್ದಾರೆ. ಇದನ್ನೇ ಅತ್ಯಂತ ಸರಳ ಮಾತುಗಳಲ್ಲಿ ಹೇಳಬೇಕೆಂದರೆ, ಮನಸ್ಸಿಗಿಂತ ದೊಡ್ಡದಾದುದೇನೂ ಇಲ್ಲ ಸ್ವಾತಂತ್ರ್ಯಕ್ಕಾಗಿ ಜನತೆ ನಡೆಸಿದ ಹೋರಾಟ ಇದಾಗಿದ್ದು, ಅನೇಕ ಏಳುಬೀಳುಗಳನ್ನು ಕಂಡರೂ ಅಪಾಯಕ್ಕೆ ಸಿಲುಕಿದರೂ ಕೊನೆಗೆ ವಿಜಯ ಸಾಧಿಸಿದ್ದು, ಈ ದಿನ ನಾನು ಈ ನಿರ್ಣಯವನ್ನು ಮಂಡಿಸಲು ಕಾರಣ. ಈ ಹೋರಾಟದ ಫಲವಾಗಿಯೇ ವಿಜಯವನ್ನು ಸಾಧಿಸಲಾಯಿತು.

ಈಗ, ಸದನಕ್ಕೆ ಸಂಪೂರ್ಣ ಮನವರಿಕೆಯಾಗಿರಬಹುದು. ನಮ್ಮ ಈ ವಿಜಯಕ್ಕೆ ಅನೇಕ ರೀತಿಯಲ್ಲಿ

ಕಳಂಕ ತರಲಾಗಿದೆ. ಕೆಲವು ತಿಂಗಳುಗಳ ಹಿಂದೆ ನಡೆದ ಅನೇಕ ಘಟನೆಗಳು ದುಃಖಕ್ಕೆ ಕಾರಣವಾಗಿದ್ದು, ನಮ್ಮ ಹೃದಯವನ್ನು ಕಲಕಿವೆ. ನಮ್ಮ ಈ ಪ್ರೀತಿಯ ಮಾತೃಭೂಮಿಯನ್ನು ತುಂಡುಮಾಡಿರುವುದು ದುಃಖಕರ ಸಂಗತಿಯೇ ಆಗಿದೆ. ಅಸಂಖ್ಯಾತ ಜನರು, ಭಯಂಕರ ತೊಂದರೆಗೊಳಗಾಗಿದ್ದಾರೆ, ಅನೇಕ ಜನರು ನಿರ್ವಸಿತರಾಗಿ, ಬಂಧುಗಳನ್ನು ಕಳೆದುಕೊಂಡು ಅಲೆದಾಡುವಂತಾಗಿದೆ. ಇನ್ನೂ ಇಂಥ ಅನೇಕ ದುಃಖಕರ ಸಂಗತಿಗಳಿವೆ. ಅವುಗಳನ್ನು ಈ ಸದನದಲ್ಲಿ ಮತ್ತೆ ಮತ್ತೆ ಹೇಳುವ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ. ಆದರೆ ನಾವು ಅವುಗಳನ್ನು ಮರೆಯಲು ಸಾಧ್ಯವಿಲ್ಲ. ಈ ಎಲ್ಲ ದುಃಖದುಮ್ಮಾನಗಳು ನಮ್ಮ ಪಾದದಡಿಯಲ್ಲಿಯೇ ಸ್ಥಳ ಊರಿಬಿಟ್ಟಿದೆ. ನಾವು ವಿಜಯವನ್ನು ಸಾಧಿಸಿದ್ದರೂ, ಅದು ನಮ್ಮನ್ನು ತಡೆದು ನಿಲ್ಲಿಸುತ್ತದೆ ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಹಾಗೂ ಮುಂಬರುವ ದಿನಗಳಲ್ಲಿ ಭಾರಿ ದೊಡ್ಡ ದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಆದಾಗ್ಯೂ, ಈ ಕ್ಷಣವು ನಮ್ಮ ವಿಜಯದ ಗುರುತಾಗಿದೆ. ಹಾಗೆಯೇ ಇದು ನಮ್ಮ ಹೋರಾಟಕ್ಕೆ ಸಂದ ವಿಜಯ ಎಂಬುದು ನಿಜ ಎಂದು ನಾನು ಭಾವಿಸಿದ್ದೇನೆ (ಕೇಳಿ, ಕೇಳಿ).

ನಡೆದು ಹೋದ ಅನೇಕ ಘಟನೆಗಳಿಂದಾಗಿ ಬಹಳಷ್ಟು ಸಂಕಟ-ನೋವುಗಳನ್ನು ಅನುಭವಿಸುವಂತಾಗಿದೆ. ಈ ಘಟನೆಗಳಿಂದಾಗಿ ನಮ್ಮೆಲ್ಲರಿಗೂ ಅತೀವ ದುಃಖ ಉಂಟಾಗಿದೆ. ಆದರೆ, ಈ ವಿಜಯದ ಸಂಭ್ರಮದ ಕಾಲದಲ್ಲಿ, ಆ ದುಃಖ ನೋವುಗಳನ್ನು ಬದಿಗಿಡಬೇಕಾಗಿದೆ. ನಮ್ಮ ದೇಶದಲ್ಲಿದ್ದ ಬಹುದೊಡ್ಡ ಹಾಗೂ ಬಲಿಷ್ಠ ಸಾಮ್ರಾಜ್ಯವೊಂದು ತನ್ನ ಆಳ್ವಿಕೆಯನ್ನು ಕೊನೆಗೊಳಿಸುವಂತೆ ಮಾಡಿದ ಕಾರ್ಯ ಸಾಧಾರಣವಾದುದೇನೂ ಅಲ್ಲ. ನಮ್ಮ ಸಾಧನೆಯ ಗುರಿಯೂ ಅದೇ ಆಗಿತ್ತು.

ನಾವು ಗುರಿಯನ್ನು ಸಾಧಿಸಿದ್ದೇವೆ ಅಥವಾ ಶೀಘ್ರದಲ್ಲಿಯೇ ಸಾಧಿಸಲಿದ್ದೇವೆ. ಅದನ್ನು ಸಾಧಿಸುವುದರಲ್ಲಿ ಸಂದೇಹವೇ ಇಲ್ಲ. ಗುರಿ ಸಾಧನೆ ಯಾವ ರೀತಿಯಲ್ಲಿ ಇರಬೇಕೆಂದು ನಾವು ಅಪೇಕ್ಷಿಸಿದ್ದೇವೋ ಅದೇ ರೀತಿಯಲ್ಲಿಯೇ ಗುರಿ ಸಾಧಿಸಿಲ್ಲದಿರಬಹುದು. ನಮ್ಮ ಸಾಧನೆಯ ಜೊತೆಯಲ್ಲೇ ಇರುವ ತೊಂದರೆಗಳು ಮತ್ತು ಅಡೆ ತಡೆಗಳು, ನಾವು ಇಷ್ಟಪಟ್ಟವುಗಳಲ್ಲ. ಆದರೆ, ಜನತೆ ತಾವು ಕಂಡ ಕನಸು ಎಲ್ಲವೂ ನನಸಾಗುವುದು ಬಹಳ ವಿರಳ. ನಮ್ಮ ಇಡೀ ಜೀವನದಲ್ಲಿ, ಅದು ವೈಯಕ್ತಿಕ ಜೀವನವಾಗಿರಲಿ, ರಾಷ್ಟ್ರ ಜೀವನವಾಗಿರಲಿ ನಾವು ಹಮ್ಮಿಕೊಂಡ ದ್ಯೇಯೋದ್ದೇಶಗಳೆಲ್ಲವನ್ನೂ, ನಾವು ಸಾಧಿಸುತ್ತೇವೆ ಎನ್ನುವುದು ಕೂಡಾ ಅಷ್ಟೇ ಅಸಾಧ್ಯ.

ನಮ್ಮ ಮುಂದೆ ಇಂಥ ಅನೇಕ ಉದಾಹರಣೆಗಳು ಇವೆ. ನಾವು ಬಹುದೂರ ಹಿಂದೆ ಹೋಗಬೇಕಾಗಿಲ್ಲ. ವರ್ತಮಾನದಲ್ಲಿ ಅಥವಾ ಇತ್ತೀಚಿನ ಕೆಲವು ವರ್ಷಗಳ ಹಿಂದೆ ನಡೆದ ವಿಶ್ವ ಸಮರವು ಮಾನವಜನಾಂಗಕ್ಕೆ ಭಾರಿ ದುಃಖ ನೋವುಗಳನ್ನು ತಂದಿತು. ಆ ಯುದ್ಧವು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಮುಂತಾದ ಕಾರಣಗಳಿಂದಾಗಿ ನಡೆದ ಯುದ್ಧವಾಗಿತ್ತು. ಹೋರಾಡಿದವರು ಹೇಳಿದ ಮಾತೆಂದರೆ ಇದು, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಸಂದ ಜಯ. ಆದರೆ, ಕೆಲವೇ ಕೆಲವರು, ಇದು ಹೊಸ ಯುದ್ಧಗಳ ಹಾಗೂ ಹೊಸ ಸಂಘರ್ಷಗಳ ಪ್ರಾರಂಭ ಎಂಬ ವದಂತಿಯನ್ನು ಹರಡಿದರು.

ಮೂರು ದಿನಗಳ ಹಿಂದೆಯಷ್ಟೇ ನೆರೆಹೊರೆಯ ರಾಷ್ಟ್ರದ ನೇತಾರರ ಭೀಕರ ಕೊಲೆಯ ಸುದ್ದಿ ಈ ಸದನಕ್ಕೆ ಹಾಗೂ ದೇಶಕ್ಕೆ ಹಾಗೂ ಜಗತ್ತಿಗೆ ಆಘಾತ ಉಂಟುಮಾಡಿತ್ತು. ಸಾಮ್ರಾಜ್ಯಶಾಹಿ ದೇಶವೊಂದು, ಆಗ್ನೇಯ ಏಷ್ಯಾದ ದೇಶದ ಮೇಲೆ ದಾಳಿ ಮಾಡಿದ ಆಘಾತಕಾರಿ ಸುದ್ದಿಯನ್ನು ಯಾರಾದರೂ ಪತ್ರಿಕೆಗಳಲ್ಲಿ ಓದಿರಬಹುದು. ಈ ಜಗತ್ತಿನಲ್ಲಾಗಲೀ ಅಥವಾ ರಾಷ್ಟ್ರಗಳಲ್ಲಾಗಲೀ ಸ್ವಾತಂತ್ರ್ಯ ಇನ್ನೂ ದೂರವೇ ಉಳಿದಿದ್ದು, ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಸ್ವಾತಂತ್ರ್ಯಕ್ಕಾಗಿ, ಭಾರಿ ಪ್ರಮಾಣದಲ್ಲಾಗಲೀ ಅಥವಾ ಅಲ್ಪ ಪ್ರಮಾಣದಲ್ಲಾಗಲೀ ಹೋರಾಟ ನಡೆಸಿವೆ. ಈ ದಿನ, ಪ್ರಸ್ತುತ ನಾವು ಏನನ್ನು ನಿಖರವಾಗಿ ಸಾಧಿಸಿದ್ದೇವೆಯೋ ಅದು ನಾವು ಏನನ್ನು ಸಾಧಿಸಬೇಕೆಂದು ಗುರಿ ಇಟ್ಟುಕೊಳ್ಳಲಾಗಿತ್ತೋ ಅದನ್ನು ಸಾಧಿಸಿಲ್ಲ ಎಂಬುದು ಆಶ್ಚರ್ಯವಾದುದಲ್ಲ.

ಇದರಿಂದ ನಾಚಿಕೆಪಡಬೇಕಾಗಿಲ್ಲ. ಇದು ನಮ್ಮ ಸಣ್ಣ ಸಾಧನೆಯಲ್ಲವೆಂದು ನಾನು ಭಾವಿಸುತ್ತೇನೆ. ಇದೊಂದು ಎಲ್ಲರೂ ಗಮನಿಸಬಹುದಾದ ಬಹುದೊಡ್ಡ ಸಾಧನೆಯೇ ಆಗಿದೆ. ನಮಗೆ ಇಷ್ಟವಾಗದಿದ್ದ ಅನೇಕ ಘಟನೆಗಳು ನಡೆದಿವೆ ಎಂಬ ಕಾರಣಕ್ಕಾಗಿ ಇದನ್ನು ಕಡೆಗಣಿಸಬಾರದು. ಈ ಎರಡೂ ವಿಷಯಗಳನ್ನು ದೂರ ಇಡೋಣ. ವಿಶಾಲ ಜಗತ್ತಿನ ಯಾವುದೇ ದೇಶದ ಕಡೆಗೆ ದೃಷ್ಟಿಹಾಯಿಸಿದರೂ ಇಂದಿನ ದಿನಗಳಲ್ಲಿ, ಭಾರಿ ಶಕ್ತಿ ಸಂಪನ್ನ ರಾಷ್ಟ್ರಗಳು ಒಳಗೊಂಡಂತೆ, ಭಯಂಕರ ಸಮಸ್ಯೆಗಳಿಂದ ತುಂಬಿಲ್ಲದ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿಲ್ಲದ ಹಾಗೂ ಹೇಗೋ ಇತರರ ಹಿಡಿತದಿಂದ ತಪ್ಪಿಸಿಕೊಂಡು ಸ್ವತಂತ್ರವಾಗಲು, ಹೋರಾಟ ನಡೆಸುತ್ತಿಲ್ಲದ ದೇಶ ಎಲ್ಲಿದೆ? ಭಾರತದ ಸಮಸ್ಯೆಗಳು, ವಿಶಾಲ ದೃಷ್ಟಿಯಿಂದ ನೋಡಿದಾಗ ಭಯಂಕರ ಎಂದು ಕಂಡುಬರುವುದಿಲ್ಲ. ಈ ಸಮಸ್ಯೆಗಳು ಹೊಸತೇನೂ ಅಲ್ಲ. ಈ ಹಿಂದೆ, ನಮಗೆ ಇಷ್ಟವಿಲ್ಲದ ಅನೇಕ ಘಟನೆಗಳು ನಡೆದಿವೆ. ಅದರಿಂದ, ನಾವು ಹಿಂದೆ ಸರಿಯಬೇಕಾಗಿಲ್ಲ. ನಾವು ವರ್ತಮಾನದಲ್ಲಿ ಎದುರಿಸಬೇಕಾಗಿರುವ ಅಥವಾ ಇನ್ನು ಮುಂದೆ ಎದುರಿಸಬೇಕಾದ ಇತರ ಎಲ್ಲ ಅನಪೇಕ್ಷಿತ ಸಂಗತಿಗಳನ್ನು ಎದುರಿಸೋಣ ಹಾಗೂ ನಾವು ಇದರಿಂದ ಹಿಂದೆ ಸರಿಯಬಾರದು ಮತ್ತು ವಿಚಲಿತರಾಗಬಾರದು ಹಾಗೂ ಪಲಾಯನ ಮಾಡಬಾರದು (ಜೋರಾಗಿ ಮೆಚ್ಚುಗೆಯ ಚಪ್ಪಾಳೆ).

ಎಂಥ ಕಠಿಣ ಪರಿಸ್ಥಿತಿ ಆವರಿಸಿದ್ದರೂ, ಧೈರ್ಯಗುಂದದೇ ಸ್ಫೂರ್ತಿಯಿಂದ, ಈ ರಾಷ್ಟ್ರದ ಸಾಧನೆಯನ್ನು ಪ್ರಶಂಸಿಸಲು ನಾನು ಮುಂದೆ ನಿಲ್ಲುತ್ತೇನೆ (ಮತ್ತೊಮ್ಮೆ ಹರ್ಷೋದ್ಗಾರ). ಸ್ವಾತಂತ್ರ್ಯ ಸಾಧನೆಯ ಈ ದ್ಯೋತಕವನ್ನು, ಈ ಕ್ಷಣದಲ್ಲಿ ಅಂಗೀಕರಿಸುವುದು ಸೂಕ್ತವೂ ಸರಿಯಾದುದೂ ಆಗಿದೆ. ಈಗ, ಅದರ ಸಮಗ್ರತೆಯ ದೃಷ್ಟಿಯಿಂದ ಹಾಗೂ ಮಾನವೀಯ ದೃಷ್ಟಿಯಿಂದ ಸ್ವಾತಂತ್ರ್ಯ ಎಂದರೇನು? ಸ್ವಾತಂತ್ರ್ಯ ಎಂದರೇನು ಮತ್ತು ಸ್ವಾತಂತ್ರ್ಯ ಸಂಗ್ರಾಮ ಎಂದರೇನು ಮತ್ತು ಅದು ಎಂದು ಕೊನೆಗೊಳ್ಳುತ್ತದೆ. ನೀವು ಒಂದು ಹೆಜ್ಜೆ ಮುಂದಿಟ್ಟ ಕೂಡಲೇ, ಮತ್ತಷ್ಟು ಸಾಧನೆ ಮಾಡಿ ಮತ್ತೊಂದು ಹೆಜ್ಜೆ ಮುಂದಿಡುತ್ತೀರಿ. ಎಲ್ಲಿಯವರೆಗೆ ಎಲ್ಲ ಜೀವಿಗಳು ಸ್ವತಂತ್ರರಾಗುವುದಿಲ್ಲವೋ, ಅಲ್ಲಿಯವರೆಗೂ ಈ ದೇಶದಲ್ಲಾಗಲೀ ಅಥವಾ ಜಗತ್ತಿನಲ್ಲಾಗಲೀ ಪೂರ್ಣ ಸ್ವಾತಂತ್ರ್ಯ ಎಂಬುದೇ ಇಲ್ಲ. ಎಲ್ಲಿಯವರೆಗೆ ಉಪವಾಸ, ಹಸಿವೆ, ಮೈತುಂಬ ಬಟ್ಟೆಯ ಕೊರತೆ, ಜೀವನಾವಶ್ಯಕತೆ ಕೊರತೆ ಮತ್ತು ಪ್ರತಿಯೊಬ್ಬ ಮನುಷ್ಯನಿಗಾಗಿ ಅವನ ಬೆಳವಣಿಗೆಗೆ ಬೇಕಾದ ಅವಕಾಶಗಳ ಕೊರತೆ ಇರುವುದೋ ಅಲ್ಲಿಯವರೆಗೂ ಪೂರ್ಣ ಸ್ವಾತಂತ್ರ್ಯ ಇರುವುದಿಲ್ಲ. ನಾವು ಅದನ್ನು ಗುರಿಯಾಗಿಟ್ಟುಕೊಳ್ಳೋಣ. ಅದೊಂದು ಭಗೀರಥ ಪ್ರಯತ್ನವೆಂದು ಅದನ್ನು ಬಿಡುವಂತಿಲ್ಲ. ಆದರೆ, ಆ ಕಾರ್ಯಸಾಧನೆಯಲ್ಲಿ ನಮ್ಮ ಎಲ್ಲ ಪ್ರಯತ್ನ ಮಾಡೋಣ ಹಾಗೂ ನಮ್ಮ ಮುಂದಿನ ಪೀಳಿಗೆಯವರೂ ಮಾಡಲಿ. ಅವರು ಮುಂದೆ ಬಂದಾಗ ಅದನ್ನು ಅನುಸರಿಸುವುದು ಅವರಿಗೆ ಸುಲಭವಾಗಲಿ. ಆದರೆ ಸ್ವಾತಂತ್ರ್ಯದೆಡೆಗೆ ಸಾಗುವ ಮಾರ್ಗಕ್ಕೆ ಕೊನೆ ಎಂಬುದೇ ಇಲ್ಲ. ನಾವು ಮುಂದೆ ಮುಂದೆ ಸಾಗಿದಂತೆ, ಪರಿಪೂರ್ಣ ಗುರಿ ಸಾಧನೆಯಲ್ಲಿ ಕೆಲವೊಮ್ಮೆ ನಮ್ಮ ಪ್ರಯತ್ನ ವ್ಯರ್ಥ ಎನಿಸಬಹುದು, ಆದರೆ ಪರಿಪೂರ್ಣತೆ ತಾನಾಗಿಯೇ ಬರುವುದಿಲ್ಲ. ಸಾಧನೆ ಮಾಡುತ್ತಲೇ ಇರಬೇಕು. ಗುರಿಯನ್ನು ತಲಪಲು ಒಂದೊಂದೇ ಹೆಜ್ಜೆ ಇಡುತ್ತಾ ಕಠಿಣ ಪ್ರಯತ್ನಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ನಾವು, ಜನರಲ್ಲಿ ಸಂತೋಷ ಹೆಚ್ಚಿಸಿದಾಗ, ಅನೇಕ ರೀತಿಯಲ್ಲಿ ಅವರ ವ್ಯಕ್ತಿತ್ವ ವಿಕಾಸವಾಗುವಂತೆ ಮಾಡಿದಾಗ ಹಾಗೂ ಗುರಿಯ ಕಡೆಗೆ ಮುನ್ನಡೆದಾಗ ಇದು ಸಾಧ್ಯ. ಇದಕ್ಕೆ ಕೊನೆ ಎಂಬುದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ನಾವು ಮುನ್ನಡೆಯುತ್ತಲೇ ಇರಬೇಕು. ಇದು ಎಂದೂ ಕೊನೆಯಾಗದ ಒಂದು ಬಗೆಯ ಒಗ್ಗೂಡುವಿಕೆ.

ಆದ್ದರಿಂದ ನಾನು ಈ ಧ್ವಜವನ್ನು ನಿಮಗೆ ಒಪ್ಪಿಸುತ್ತಿದ್ದೇನೆ. ಈ ನಿರ್ಣಯವು ಧ್ವಜದ ಅರ್ಥ ವಿವರಣೆ ನೀಡುತ್ತಿದೆ. ನೀವು ಇದನ್ನು ಅಂಗೀಕರಿಸುತ್ತೀರೆಂದು ನಂಬಿದ್ದೇನೆ. ಈಗ ಹೇಳಿರುವ ಅರ್ಥದಲ್ಲೇ ಅಂಗೀಕರಿಸಬೇಕೇ ಹೊರತು, ಔಪಚಾರಿಕ ನಿರ್ಣಯದ ಮೂಲಕ ಅಲ್ಲ. ಆದರೆ ಜಯಘೋಷದಿಂದ

ಹಾಗೂ ರೂಢಿಯಂತೆ ಕಳೆದ ಕೆಲವು ದಶಕಗಳಲ್ಲಿ ಮಾಡಿದ ತ್ಯಾಗದಿಂದ ಕೂಡಿದ ನಿರ್ಣಯದ ಮೂಲಕ ಅಂಗೀಕರಿಸುವುದು ಹೆಚ್ಚು ಸೂಕ್ತ. ಅಂಥ ಜನಪ್ರಿಯ ಅಂಗೀಕಾರವನ್ನು ಅನುಮೋದಿಸುವ ಅರ್ಥದಲ್ಲಿಯೇ ನಾವು ಮಾಡಬೇಕಾಗಿದೆ. ಈ ಧ್ವಜವನ್ನು ಹಲವಾರು ರೀತಿಯಲ್ಲಿ ವರ್ಣಿಸಲಾಗಿದೆ. ಕೆಲವು ಜನರು ಇದರ ಮಹತ್ತ್ವವನ್ನು ತಪ್ಪಾಗಿ ತಿಳಿಸಿದ್ದಾರೆ. ಇದನ್ನು ಜಾತೀಯ ಭಾವನೆಯಿಂದ ತಿಳಿಯಲು ಪ್ರಯತ್ನಿಸಿದ್ದಾರೆ ಮತ್ತು ಇದರ ಕೆಲವು ಭಾಗ ಒಂದು ಸಮುದಾಯವನ್ನು ಪ್ರತಿನಿಧಿಸುತ್ತಿದ್ದರೆ, ಇನ್ನೊಂದು ಭಾಗವು ಇನ್ನೊಂದು ಸಮುದಾಯವನ್ನು ಪ್ರತಿನಿಧಿಸುತ್ತದೆ ಎಂದು ನಂಬಿದ್ದಾರೆ. ಆದರೆ ಈ ಧ್ವಜವನ್ನು ವಿನ್ಯಾಸಗೊಳಿಸಿದಾಗ, ಯಾವುದೇ ಜಾತೀಯತೆ ಭಾವನೆಯನ್ನು ಇದಕ್ಕೆ ಕೊಟ್ಟಿರಲಿಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ. ಧ್ವಜ ಯಾವುದು ಇರಬೇಕೆಂಬ ಬಗ್ಗೆ ನಾವು ಯೋಜನೆಯನ್ನು ರೂಪಿಸಿದಾಗ, ಅದು ಸುಂದರವಾಗಿರಬೇಕೆಂದು, ಏಕೆಂದರೆ, ರಾಷ್ಟ್ರದ ಲಾಂಛನ ನೋಡಲು ಸುಂದರವಾಗಿರಬೇಕು. ಧ್ವಜದ ಸಂಯೋಜನೆ ಮತ್ತು ಅದರ ಒಂದೊಂದು ಭಾಗವು ರಾಷ್ಟ್ರದ ಸ್ಫೂರ್ತಿಯನ್ನು, ರಾಷ್ಟ್ರದ ಪರಂಪರೆಯನ್ನು, ಭಾರತದಲ್ಲಿ ಸಾವಿರಾರು ವರ್ಷಗಳಿಂದಲೂ ಬೆಳೆದುಬಂದ ಸ್ಫೂರ್ತಿ ಹಾಗೂ ಪರಂಪರೆಗಳ ಸಂಗಮವಾಗಿರುವುದನ್ನು ಪ್ರತಿನಿಧಿಸುತ್ತವೆ. ಆದ್ದರಿಂದ, ನಾವು ಈ ಧ್ವಜವನ್ನು ವಿನ್ಯಾಸಗೊಳಿಸಿದ್ದೇವೆ. ಆದರೆ, ಇದನ್ನು ಕಲಾತ್ಮಕ ದೃಷ್ಟಿಯಿಂದ ನೋಡಿದಾಗ ಇದು ಅತ್ಯಂತ ಸುಂದರವಾಗಿ ಕಾಣುತ್ತದೆ ಎಂದೇ ಹೇಳಬಯಸುತ್ತೇನೆ. ಹಾಗೂ ಇದು ಇನ್ನೂ ಅನೇಕ ಸಂಗತಿಗಳು ಎಂದರೆ ಭೌತಿಕ ವಸ್ತುಗಳು ಅತ್ಯಂತ ಮಹತ್ತ್ವದವುಗಳಾಗಿದ್ದರೂ ರಾಷ್ಟ್ರವು ಕೇವಲ ಆ ಭೌತಿಕ ವಸ್ತುಗಳನ್ನಷ್ಟೇ ಅವಲಂಬಿಸದೇ, ಆ ವಸ್ತುಗಳಿಗೆ ಮೌಲ್ಯವನ್ನು ನೀಡುವಂಥ ಸ್ಫೂರ್ತಿ ಮನೋಭಾವ, ವೈಯಕ್ತಿಕ ಜೀವನವನ್ನು ಹಾಗೂ ರಾಷ್ಟ್ರಜೀವನವನ್ನು ಪ್ರತಿಬಿಂಬಿಸುವ ಸಂಕೇತವಾಗಿದೆ. ನಮ್ಮ ಜನರ ಜೀವನಕ್ಕೆ ಆವಶ್ಯಕವಾದ, ಜಗತ್ತಿನ ಅತ್ಯುತ್ತಮ ವಸ್ತುಗಳನ್ನು, ಜಗತ್ತಿನ ಅತ್ಯುತ್ತಮ ಭೌತಿಕ ವಸ್ತು ವಿಷಯಗಳನ್ನು ತಮ್ಮದಾಗಿಸಿಕೊಂಡಿರಬೇಕಾಗಿರುತ್ತದೆ. ಇದು ಅತ್ಯಂತ ಮಹತ್ತ್ವದ್ದು. ಆದಾಗ್ಯೂ, ಒಂದು ರಾಷ್ಟ್ರವು, ಅದರಲ್ಲೂ ಅವಿಸ್ಮರಣೀಯ ಹಿನ್ನೆಲೆ ಇರುವಂಥ ಭಾರತದಂಥ ರಾಷ್ಟ್ರಕ್ಕೆ, ಇತರ ವಿಷಯಗಳೂ ಆವಶ್ಯಕವಾಗಿವೆ. ಏಕೆಂದರೆ, ಈ ಸಾವಿರಾರು ವರ್ಷಗಳಲ್ಲಿ ಭಾರತವು ಪಡೆದುಕೊಂಡಿರುವ ಪಾರಮಾರ್ಥಿಕ ಸ್ಫೂರ್ತಿ. ಈ ಸಾವಿರಾರು ವರ್ಷಗಳಲ್ಲಿ ಭಾರತವು ಅಧ್ಯಾತ್ಮಿಕ ವಿಚಾರಗಳನ್ನು ಮತ್ತು ಪಾರಮಾರ್ಥಿಕ ಸ್ಫೂರ್ತಿಯನ್ನು ಪಡೆದುಕೊಂಡಿರದಿದ್ದರೆ, ಏನಾಗುತ್ತಿತ್ತು? ಈ ದೇಶ ಗತಕಾಲದಲ್ಲಿಯೇ ಭಾರಿ ದುಃಖ ಸಂಕಟಗಳಿಗೆ ಗುರಿಯಾಗುತ್ತಿತ್ತು. ಆದರೆ, ಅವನತಿಯ ತಳಕ್ಕೆ ಹೋಗಿದ್ದರೂ, ಭಾರತದ ವಿಚಾರಧಾರೆಗಳು ಮತ್ತು ಚಿಂತನೆಗಳು ಉನ್ನತವಾದವುಗಳಾದ್ದರಿಂದ ಭಾರತವು ತಲೆ ಎತ್ತಿ ಮೆರೆಯಿತು. ಆದ್ದರಿಂದ ನಾವು ಈ ಅತ್ಯದ್ಭುತ ಸಾಧನೆಗಳ ಕಾಲವನ್ನು ದಾಟಿ ಬಂದಿರುವುದರಿಂದ ತಲೆ ಎತ್ತಿ ನಿಲ್ಲುವಂತಾಗಿರುವುದಕ್ಕೆ ಹೆಮ್ಮೆ ಎನಿಸುತ್ತದೆ. ಗತಕಾಲಕ್ಕೆ ಧನ್ಯವಾದಗಳನ್ನು ಹೇಳಬೇಕು ಹಾಗೆಯೇ ಬರಲಿರುವ ಭವಿಷತ್ತಿನಲ್ಲಿ ನಾವು ಕಾರ್ಯಸಾಧಿಸುವುದು ಇದೆ. ನಮ್ಮ ಮುಂದಿನ ಪೀಳಿಗೆಯವರೂ ಸಾಧನೆಯ ಮಾರ್ಗದಲ್ಲಿಯೇ ನಡೆಯಬೇಕಾಗಿದೆ. ಯಾವಾಗಲೂ ನೆನಪಿಸಿಕೊಳ್ಳುವಂಥ ಒಂದು ವಿಶಿಷ್ಟ ರೀತಿಯಲ್ಲಿ ಬದಲಾವಣೆ ಹೊಂದುತ್ತಿರುವ ಪಥದಲ್ಲಿ ಇರುವುದನ್ನು ಗುರುತಿಸಿಕೊಳ್ಳಬೇಕಾಗಿ ಬಂದಿರುವುದು ಇಲ್ಲಿ ಸೇರಿರುವ ನಮ್ಮೆಲ್ಲರ ಸೌಭಾಗ್ಯವಾಗಿದೆ.

ಈ ನಿರ್ಣಯವನ್ನು ಮಂಡಿಸುವುದಕ್ಕೆ ನನಗೆ ಆದೇಶ ದೊರಕಿದುದು ನನಗೆ ಅತ್ಯಂತ ಹೆಮ್ಮೆ ಎನಿಸುತ್ತದೆಂದು ನನ್ನ ಮಾತನ್ನು ಆರಂಭಿಸಿದೆ. ಮಾನ್ಯರೆ, ಈಗ ಈ ವಿಶಿಷ್ಟ ಧ್ವಜದ ಬಗ್ಗೆ ಕೆಲವು ಮಾತುಗಳನ್ನು ಹೇಳಬಹುದೇ? ಈ ಕೆಲವು ವರ್ಷಗಳಲ್ಲಿ ನಮ್ಮಲ್ಲಿ ಅನೇಕರು ಹೇಳಿರುವ ಹೇಳಿಕೆಗಳಲ್ಲಿ, ಒಬ್ಬೊಬ್ಬರ ಹೇಳಿಕೆಯಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸವಿರುವುದನ್ನು ಗಮನಿಸಿರಬಹುದು. ಅವೇ ಬಣ್ಣಗಳಿದ್ದರೂ, ಕಡುಕೇಸರಿ ಬಣ್ಣ, ಬಿಳಿ ಹಾಗೂ ಕಡು ಹಸಿರು ಬಣ್ಣ. ಬಿಳಿ ಬಣ್ಣದ ಪಟ್ಟಿಯ ಮಧ್ಯದಲ್ಲಿ, ಈ ಮೊದಲು ಚರಕ ಇತ್ತು. ಅದು ಜನಸಾಮಾನ್ಯರ ಸಂಕೇತ, ಜನಸಮೂಹದ ಸಂಕೇತ, ಅದು ಜನರ ಕೈಗಾರಿಕೆ ಪ್ರಗತಿಯ ಸಂಕೇತವೂ

ಆಗಿದೆ. ಇದು ಮಹಾತ್ಮ ಗಾಂಧಿಯವರು ನೀಡಿದ ಕೊಡುಗೆ (ಹರ್ಷೋದ್ಗಾರ). ಈಗ, ಈ ಜನಪ್ರಿಯ ಚರಕದ ಚಿಹ್ನೆಯನ್ನು ತೆಗೆದುಹಾಕದೇ ಈ ಧ್ವಜದಲ್ಲಿ ಸ್ವಲ್ಪ ವ್ಯತ್ಯಾಸ ಮಾಡಲಾಗಿದೆ. ಇದನ್ನು ಆಗ ಏಕೆ ಬದಲಾಯಿಸಲಾಯಿತು? ಸಾಮಾನ್ಯವಾಗಿ ಹೇಳುವುದಾದರೆ, ಧ್ವಜದ ಒಂದು ಬದಿಯಲ್ಲಿ ಇರುವ ಚಿಹ್ನೆಯು, ಇನ್ನೊಂದು ಬದಿಯಲ್ಲಿ ಖಚಿತವಾಗಿ ಅದೇ ರೀತಿ ಇರಬೇಕಾಗುತ್ತದೆ. ಇಲ್ಲದಿದ್ದರೆ, ಅದು ನಿಯಮಗಳಿಗೆ ವಿರುದ್ಧವಾಗುವ ತೊಂದರೆ ಇರುತ್ತದೆ. ಈಗ, ಈ ಧ್ವಜದ ಮೇಲೆ ಈ ಮೊದಲು ಒಂದು ಬದಿಯಲ್ಲಿ ಚಕ್ರ, ಇನ್ನೊಂದು ಬದಿಯಲ್ಲಿ ನೂಲು ಸುತ್ತುವ ಕದಿರು ಇದ್ದದ್ದು ಕಂಡುಬರುತ್ತಿತ್ತು. ನೀವು ಧ್ವಜದ ಇನ್ನೊಂದು ಬದಿಯಲ್ಲಿ ನೋಡಿದಾಗ, ಕದಿರು ಇನ್ನೊಂದು ಕಡೆ ಮುಖವಾಗಿ ಕಂಡುಬರುತ್ತಿತ್ತು ಮತ್ತು ಚಕ್ರವು ಈ ರೀತಿಯಾಗಿ ಇರುತ್ತಿತ್ತು. ಅದು ಹಾಗೆ ಇರದಿದ್ದರೆ, ಅದು ಪ್ರಮಾಣಾನುಸಾರ ಇಲ್ಲ ಎಂದು ಹೇಳಬಹುದಾಗಿತ್ತು. ಏಕೆಂದರೆ, ಚಕ್ರವು ಕಂಬದ ಕಡೆಗೆ ಇರಬೇಕು. ಆದರೆ, ಧ್ವಜದ ತುದಿಯ ಕಡೆ ಮುಖವಾಗಿರಬಾರದು. ಅದರಲ್ಲಿ ಇಂಥ ಒಂದು ತೊಂದರೆ ಇತ್ತು. ಆದ್ದರಿಂದ ಸಾಕಷ್ಟು ವಿಚಾರ ವಿಮರ್ಶೆ ಮಾಡಿ, ಜನರಿಗೆ ಉತ್ಸಾಹ ನೀಡಿದ್ದ ಚಕ್ರವು ಇರುವುದು ಮುಂದುವರಿಯಬೇಕೆಂಬುದು ನಮಗೆ ಮನವರಿಕೆಯಾಯಿತು. ಆದರೆ, ಅದು ಸ್ವಲ್ಪ ಬೇರೆಯಲ್ಲಿ ಇರಬೇಕೆಂದು, ಚಕ್ರ ಇರಬೇಕು ಅಷ್ಟೇ ಚರಕದ ಉಳಿದ ಭಾಗಗಳಲ್ಲಿ ಎಂದರೆ, ಕದಿರು ಹಾಗೂ ನೂಲು ಇವು ಗೊಂದಲ ಉಂಟುಮಾಡಿದ್ದವು. ಅವುಗಳನ್ನು ಬಿಟ್ಟು ಚರಕ ಎಂದರೆ ಚಕ್ರ ಮಾತ್ರ ಇರಬೇಕೆಂಬುದು ತೀರ್ಮಾನಿಸಲಾಯಿತು. ಚರಕದ ಹಳೆಯ ಪರಂಪರೆ, ಚಕ್ರವು ಇರುವುದು ಮುಂದುವರಿಯಿತು. ಆದರೆ, ಈ ಪ್ರಸಿದ್ಧ ಚಕ್ರವು, ಅನೇಕ ಕಡೆಗಳಲ್ಲಿ ಕಂಡುಬರುತ್ತದೆ. ಅಶೋಕ ಸ್ತಂಭದ ಮೇಲೆ ತುದಿಯಲ್ಲಿರುವ ಹಾಗೂ ಇನ್ನಿತರ ಕಡೆಗಳಲ್ಲಿರುವ ಚಕ್ರವನ್ನು ಎಲ್ಲರೂ ನೋಡಿದ್ದೇವೆ.

ಈ ಚಕ್ರವು ಭಾರತದ ಪ್ರಾಚೀನ ಸಂಸ್ಕೃತಿಯ ದ್ಯೋತಕವಾಗಿದೆ. ಅದೇ ರೀತಿ ಭಾರತವು ಯುಗ ಯುಗಗಳಿಂದ ಎತ್ತಿ ಹಿಡಿದ ಅನೇಕ ಉದಾತ್ತ ವಿಚಾರಗಳ ದ್ಯೋತಕವಾಗಿದೆ. ಆದ್ದರಿಂದ ಈ ಚಕ್ರ ಇರಬೇಕೆಂದು ನಾವು ವಿಚಾರ ಮಾಡಿದ್ದರಿಂದ, ಇದು ಧ್ವಜದಲ್ಲಿರುವುದು ಕಂಡುಬರುತ್ತದೆ. ಇಂಥ ದ್ಯೋತಕವಾದ ಈ ಧ್ವಜ, ನಮ್ಮದು. ಈ ಅರ್ಥದಲ್ಲಿ ನಮಗೂ ಈ ಧ್ವಜಕ್ಕೂ ಪರೋಕ್ಷ ಸಂಬಂಧವಿದೆ. ಅಷ್ಟೇ ಅಲ್ಲದೆ, ಭಾರತದ ಇತಿಹಾಸದಲ್ಲಿ ಅಷ್ಟೇ ಅಲ್ಲದೆ ಜಗತ್ತಿನ ಇತಿಹಾಸದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬನಾದ ಅಶೋಕನ ಹೆಸರು, ಇದರ ಜೊತೆಗೆ ಇರುವುದು ಎಂಬ ಅರ್ಥದಲ್ಲಿ ಇದನ್ನೂ ವಿವರಿಸಲು ನನಗೆ ಸಂತೋಷವಾಗುತ್ತದೆ. ಈ ದಿನಗಳಲ್ಲಿ ಭಾರತದಲ್ಲಿ, ಕಲಹ, ಘರ್ಷಣೆ ಹಾಗೂ ಅಸಹನೆಗಳು ತಾಂಡವಾಡುತ್ತಿವೆ. ಆದರೆ, ಪ್ರಾಚೀನ ಕಾಲದ ಕಡೆಗೆ ನಮ್ಮ ಮನಸ್ಸನ್ನು ತಿರುಗಿಸಿದರೆ, ಆ ಕಾಲದಲ್ಲಿ ಲೋಪದೋಷಗಳಾಗಿರಬಹುದು ಹಾಗೆಯೇ ಅವನತಿಯನ್ನು ಕಂಡಿರಬಹುದಾದರೂ ಭಾರತವು ಯಾವ ಯಾವ ತತ್ತ್ವಗಳನ್ನು ಜಗತ್ತಿಗೆ ಸಾರಲು ತಲೆ ಎತ್ತಿ ನಿಂತಿತ್ತು ಎಂಬುದು ತಿಳಿಯುತ್ತದೆ. ಅಂಥ ಪರಿಸ್ಥಿತಿಗಳಿಂದ ಭಾರತವು ಹೇಗೋ ಅಪಾಯಗಳಿಂದ ಪಾರಾಗಿತ್ತು ಎಂದು ನಾನು ಭಾವಿಸಿಲ್ಲ. ಆದರೆ, ಭಾರತವು ತನ್ನ ಮಹೋನ್ನತ ಚಿಂತನೆಗಳಿಂದ, ಸುದೀರ್ಘ ಕಾಲದವರೆಗೂ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿತು. ಭಾರತವು ತನ್ನ ಸಾಂಸ್ಕೃತಿಕ ಪರಂಪರೆಯನ್ನು ಬದಲಾಯಿಸದೇ, ಜೀವಂತಿಕೆಯಿಂದ, ಆದರೆ ನಿರಂತರವಾಗಿ ಮೂಲಸತ್ತ್ವವನ್ನು ಕಾಯ್ದುಕೊಂಡು, ಹೊಸ ಬೆಳವಣಿಗೆಗಳನ್ನು ಹೊಸ ಪ್ರಭಾವಗಳನ್ನು ನಿರಂತರವಾಗಿ ಸ್ವೀಕರಿಸುತ್ತಾ ಮುಂದುವರಿಯಿತು. ಅದೇ ಭಾರತದ ಪರಂಪರೆಯ ವೈಶಿಷ್ಟ್ಯ. ಇದು ನಿರಂತರವಾಗಿ ನೂತನ ಪುಷ್ಪಗಳನ್ನು, ಸ್ವೀಕಾರ ಯೋಗ್ಯ ವಿಚಾರಗಳನ್ನು ತನ್ನದಾಗಿಸಿಕೊಳ್ಳುತ್ತಾ, ಕೆಲವೊಮ್ಮೆ ದುಷ್ಟ ವಿಷಯಗಳೂ ಸೇರಿಕೊಂಡಿರಬಹುದಾದರೂ ತನ್ನ ಪ್ರಾಚೀನ ಪರಂಪರೆಗೆ ಯಾವಾಗಲೂ ಬದ್ಧವಾಗಿದೆ. ಸಾವಿರಾರು ವರ್ಷಗಳಿಂದಲೂ ಹೊಸ ಪ್ರಭಾವಗಳು ನಮ್ಮ ಮೇಲೆ ಪ್ರಭಾವ ಬೀರುತ್ತಲೇ ಬಂದಿವೆ. ನಾವೂ ಅವುಗಳ ಮೇಲೆ ಅಗಾಧ ಪರಿಣಾಮ ಬೀರಿದ್ದೇವೆ. ಭಾರತವು ಪ್ರಾಚೀನ ಕಾಲದಿಂದಲೂ ಸಂಕುಚಿತ ಮನೋಭಾವ

ತಳೆದಿಲ್ಲ. ಇತರ ದೇಶಗಳನ್ನು ಅಸಡ್ಡೆ ಮಾಡಿಲ್ಲ ಎಂಬುದು ನಿಮಗೆ ನೆನಪಿರಬಹುದು. ಭಾರತ ದೇಶದ ಇತಿಹಾಸದುದ್ದಕ್ಕೂ ಇತರ ದೇಶಗಳೊಂದಿಗೆ ಸ್ನೇಹ ಸಂಬಂಧಗಳನ್ನು ಬೆಳೆಸಿಕೊಂಡಿತ್ತು. ಇತರ ದೇಶಗಳೊಂದಿಗೆ ಅಷ್ಟೇ ಅಲ್ಲದೇ, ಅಂತಾರಾಷ್ಟ್ರೀಯ ಕೇಂದ್ರವೂ ಆಗಿತ್ತು. ವಿದೇಶಗಳಿಗೆ ದೇಶದ ಚಿಂತನೆಗಳ ಸಂದೇಶಗಳನ್ನು ಕಳುಹಿಸುವುದಕ್ಕಾಗಿಯೇ ಇಲ್ಲಿಯ ಜನರನ್ನೂ ಕಳುಹಿಸುತ್ತಿತ್ತು. ಅದೇ ರೀತಿ ಬೇರೆ ದೇಶಗಳಿಂದ ಒಳ್ಳೆಯ ವಿಚಾರಗಳ ಸ್ವೀಕರಿಸುತ್ತಾ, ವಿಚಾರ ವಿನಿಮಯ ಮಾಡಿಕೊಳ್ಳುತ್ತಿತ್ತು. ಆದರೆ, ಈ ದೇಶವು ಯಾವ ಭದ್ರ ಬುನಾದಿಯ ಮೇಲೆ ಅಚಲವಾಗಿ ನಿಂತಿತ್ತೋ, ಎಷ್ಟೇ ಬದಲಾವಣೆಗಳು ನಡೆದರೂ ಅಷ್ಟೇ ಅಚಲವಾಗಿ ಸುಭದ್ರವಾಗಿ ತಲೆ ಎತ್ತಿ ನಿಂತಿದೆ. ಭಾರತದ ಈ ಶಕ್ತಿಗೆ, ಈ ಸುಭದ್ರ ತಳಹದಿಯೇ ಕಾರಣವೆಂದು ಹೇಳಲಾಗುತ್ತಿದೆ. ಇದಕ್ಕೆ ಇರುವ ಶಕ್ತಿ ಆಶ್ಚರ್ಯಗೊಳಿಸುವಂತಹುದು. ಈ ದೇಶವು ತನಗೆ ಬೇಕಾದುದನ್ನು ಸ್ವೀಕರಿಸಿ, ಅದು ಹೊರಗಿನದು, ಸ್ವೀಕರಿಸಬಾರದೆಂದು ಬಿಟ್ಟುಬಿಡುವುದಿಲ್ಲ. ಪ್ರತಿಯೊಂದನ್ನೂ ತನ್ನದಾಗಿಸಿಕೊಳ್ಳುತ್ತದೆ. ತಾನು ಕೊಡುತ್ತೇನೆಯೇ ಹೊರತು ಸ್ವೀಕರಿಸುವುದಿಲ್ಲ ಎಂದು ಹೇಳುವುದು ಯಾವುದೇ ದೇಶಕ್ಕಾಗಲೀ ಅಥವಾ ಜನಾಂಗಕ್ಕಾಗಲೀ ವಿವೇಕರಹಿತ ವಿಚಾರವಾಗುತ್ತದೆ. ಯಾವುದೇ ದೇಶವಾಗಲೀ ಅಥವಾ ಜನಾಂಗವಾಗಲೀ ಹಾಗೆ ವಿಚಾರಮಾಡಲು ಒಮ್ಮೆ ಪ್ರಾರಂಭಿಸಿದರೆ, ಅದು ಜಡವಾಗಿ ಬಿಡುತ್ತದೆ. ಉತ್ತರೋತ್ತರ ಬೆಳವಣಿಗೆ, ಕಳೆಗುಂದಿ ಅವನತಿ ಹೊಂದುತ್ತದೆ. ವಾಸ್ತವಿಕವಾಗಿ, ಭಾರತದ ಇತಿಹಾಸದಲ್ಲಿ, ಯಾವ ಕಾಲದಲ್ಲಿ ಅದು ಹೊರ ಜಗತ್ತಿನಿಂದ ಸಂಪರ್ಕ ಬಿಟ್ಟು ಚಿಪ್ಪಿನಲ್ಲಿ ಅವಿತುಕೊಂಡ ಕಾಲದಲ್ಲಿ ಅಥವಾ ಹೊರ ಜಗತ್ತನ್ನು ಸ್ವೀಕರಿಸಲು ನಿರಾಕರಿಸಿದ ಕಾಲದಲ್ಲಿ ಅದರ ಅವನತಿ ಆಗಿದ್ದುದನ್ನು ಕಾಣಬಹುದು. ಭಾರತವು ತನ್ನ ಪ್ರತಿನಿಧಿಗಳನ್ನು, ರಾಯಭಾರಿಗಳನ್ನು, ವ್ಯಾಪಾರಿ ಏಜೆಂಟರನ್ನು ಮತ್ತು ವರ್ತಕರನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸಿ, ಆ ವಿದೇಶಗಳಿಂದ ರಾಯಭಾರಿಗಳನ್ನು ಹಾಗೂ ಪ್ರತಿನಿಧಿಗಳನ್ನು ಕೈಚಾಚಿ ಬರಮಾಡಿಕೊಂಡ ಕಾಲವು ಭಾರತದ ಅತ್ಯಂತ ಉನ್ನತ ಕಾಲ.

ಈಗ, ನಾನು ಅಶೋಕನ ಹೆಸರನ್ನು ಉಲ್ಲೇಖಿಸಿದ್ದೇನೆ. ಭಾರತದ ಇತಿಹಾಸದಲ್ಲಿ ಅಶೋಕನ ಆಳ್ವಿಕೆ ಅವಧಿಯು, ಅಂತಾರಾಷ್ಟ್ರೀಯ ಯುಗವೆಂದೇ ಮುಖ್ಯವಾಗಿ ಹೇಳಬಹುದು. ಅದು ರಾಷ್ಟ್ರೀಯ ಯುಗಕ್ಕೆ ಸೀಮಿತವಾಗಿರಲಿಲ್ಲ. ಭಾರತದ ರಾಯಭಾರಿಗಳಾಗಿ ದೂರದ ದೇಶಗಳಿಗೆ ಹೋಗಿದ್ದುದು, ಸಾಮ್ರಾಜ್ಯದ ಕೆಲಸ ಕಾರ್ಯಗಳಿಗೆ ಅಲ್ಲ. ಸಾಮ್ರಾಜ್ಯ ವಿಸ್ತರಣೆಗೂ ಅಲ್ಲ. ಆದರೆ, ಶಾಂತಿ ಹಾಗೂ ಸಂಸ್ಕೃತಿ ಹಾಗೂ ಸದ್ಭಾವನೆಯ ಪ್ರಸಾರಕ್ಕಾಗಿ ಕಳುಹಿಸಿಕೊಡಲಾಗಿತ್ತು (ಹರ್ಷೋದ್ಗಾರ).

ಆದ್ದರಿಂದ, ಈ ಧ್ವಜವನ್ನು ನಿಮಗೆ ಒಪ್ಪಿಸುತ್ತಿರುವುದಕ್ಕೆ ಹೆಮ್ಮೆ ಎನಿಸುತ್ತಿದೆಯಾದರೂ ಇದು ಯಾರೊಬ್ಬರ ಮೇಲೆ ಹಾರಾಡುವ ಧ್ವಜ ಅಲ್ಲ. ಸಾಮ್ರಾಜ್ಯದ ಧ್ವಜ, ಸಾಮ್ರಾಜ್ಯಶಾಹಿ ಧ್ವಜ, ರಾಜ್ಯಾಧಿಪತ್ಯದ ಧ್ವಜ ಆದರೆ, ಸ್ವಾತಂತ್ರ್ಯದ ಧ್ವಜ, ಅದು ನಮಗಾಗಿಯೇ ಇರುವ ಧ್ವಜವಲ್ಲ. ಅದನ್ನು ನೋಡಿದ ಎಲ್ಲರಿಗೂ ಸ್ವಾತಂತ್ರ್ಯದ ಚಿಹ್ನೆ–ಆಗಿದೆ ಎಂಬ ಭಾವನೆ ಬರುತ್ತದೆ ಎಂದು ನಾನು ನಂಬಿದ್ದೇನೆ ಹಾಗೂ ಅಂಥ ವಿಶ್ವಾಸ ನನಗಿದೆ (ಹರ್ಷೋದ್ಗಾರ) ಮತ್ತು ಅದನ್ನು ಎಲ್ಲಿಗೆ ತೆಗೆದುಕೊಂಡು ಹೋಗಲಿ– ಅದು ಅಷ್ಟು ದೂರ ಹೋಗುತ್ತದೆ– ಭಾರತೀಯರು ರಾಯಭಾರಿಗಳಾಗಿ ಹೋಗಲಿ ಮತ್ತು ಪ್ರತಿನಿಧಿಗಳಾಗಿ ಅವರು ವಾಸಿಸುವ ಸ್ಥಳದಲ್ಲಿರಲೀ ಅಷ್ಟೇ ಅಲ್ಲದೇ, ಭಾರತೀಯ ನೌಕೆಗಳು ವಿದೇಶಗಳಿಗೆ ಹೋಗಲಿ ಅಲ್ಲಿಗೂ ಇದನ್ನು ತೆಗೆದುಕೊಂಡೇ ಹೋಗಬೇಕು–ಅದು ಹೋದ ಕಡೆಯಲ್ಲಿ, ಆ ಜನರಿಗೆ ಸ್ವಾತಂತ್ರ್ಯದ ಸಂದೇಶವನ್ನು ತಲುಪಿಸುತ್ತದೆ–ಸ್ನೇಹದ ಸಂದೇಶವನ್ನು, ಜಗತ್ತಿನ ಪ್ರತಿಯೊಂದು ದೇಶದ ಜನರೊಡನೆ ಸ್ನೇಹಿತರಾಗಿ ಇರಲು ಬಯಸುವ ಸಂದೇಶವನ್ನು ಮತ್ತು ಸ್ವಾತಂತ್ರ್ಯ ಬಯಸುವ ಜನರಿಗೆ ಭಾರತವು ಸಹಾಯಹಸ್ತ ನೀಡುತ್ತದೆಂಬ ಸಂದೇಶವನ್ನು ಮುಟ್ಟಿಸುತ್ತದೆ ಎಂಬ ಭರವಸೆ ನನಗಿದೆ (ಕೇಳಿ, ಕೇಳಿ). ಎಲ್ಲೆಡೆಯಲ್ಲಿಯೂ ಈ ಧ್ವಜ ಅದೇ ಸಂದೇಶ ನೀಡುತ್ತದೆ ಎಂಬ ಭರವಸೆ ನನಗಿದೆ ಮತ್ತು ಈಗ ನಮಗೆ ದೊರಕಲಿರುವ ಸ್ವಾತಂತ್ರ್ಯವು, ದೇಶದಲ್ಲಿ, ಅನೇಕ ಜನರು ಮಾಡಿದ್ದನ್ನೇ

ನಾವು ಮಾಡುವುದಿಲ್ಲ ಅಥವಾ ದುರ್ದೈವಶಾತ್ ಇನ್ನೂ ಕೆಲವರು ಇದ್ದಕ್ಕಿದ್ದಂತೆ ದೊರೆತ ನವಶಕ್ತಿಯಿಂದ, ಸಾಮ್ರಾಜ್ಯಶಾಹಿ ಸ್ವರೂಪದ ರಾಜ್ಯ ವಿಸ್ತಾರ ಮಾಡಿದಂತೆ ನಾವು ಹಾಗೆ ಮಾಡುವುದಿಲ್ಲ ಎಂಬ ನಂಬಿಕೆ ನನಗಿದೆ. ಹಾಗೆ ಮಾಡಿದ್ದಾದರೆ, ಸ್ವಾತಂತ್ರ್ಯಕ್ಕಾಗಿ ನಾವು ನಡೆಸಿದ ಹೋರಾಟವು ಅದಾಗಿಯೇ ಘೋರ ಅಂತ್ಯವನ್ನು ಕಾಣುವುದು (ಕೇಳಿ, ಕೇಳಿ). ಆದರೆ, ಅಂಥ ಅಪಾಯ ಇರುವುದಾದರೆ ಆ ಬಗ್ಗೆ ನಾನು ಸದನಕ್ಕೆ ಎಚ್ಚರಿಕೆ ನೀಡಬಯಸುತ್ತೇನೆ– ಈ ಸದನಕ್ಕೆ ಅಂಥ ಎಚ್ಚರಿಕೆ ನೀಡಬೇಕಾಗಿಲ್ಲ, ಯಾವುದೇ ದೇಶವು ಇದ್ದಕ್ಕಿದ್ದಂತೆ ಸಂಕೋಲೆಗಳನ್ನು ಕಳಚಿಕೊಂಡ ಸಂದರ್ಭದಲ್ಲಿ ಅದು ತನ್ನ, ಬಾಹುಬಲದಿಂದ ಇತರ ಜನಾಂಗದವರಿಗೆ ಧಕ್ಕೆಯುಂಟುಮಾಡಲು ಪ್ರಯತ್ನಿಸುವ ಅಪಾಯ ಇರಬಹುದು. ನಾವು ಒಂದು ವೇಳೆ ಅದನ್ನೇ ಮಾಡಿದರೆ, ಘರ್ಷಣೆಗಳಿಗೆ ಉತ್ತರಾಧಿಕಾರ ಪಡೆದ ರೀತಿಯಲ್ಲಿ ಜೀವಿಸುವ ಇತರ ರಾಷ್ಟ್ರಗಳಂತೆ, ಘರ್ಷಣೆಯ ಸಿದ್ಧತೆಯಲ್ಲಿಯೇ ಇರಬೇಕಾಗುತ್ತದೆ. ದುರ್ದೈವಶಾತ್ ಇಂದಿನ ಜಗತ್ತಿನಲ್ಲಿ ಹಾಗೆಯೇ ನಡೆಯುತ್ತದೆ.

ಕಳೆದ ಕೆಲವು ತಿಂಗಳಲ್ಲಿ, ವಿದೇಶಿ ನೀತಿಗೆ ನಾನೂ ಸ್ವಲ್ಪ ಮಟ್ಟಿಗೆ ಜವಾಬ್ದಾರನಾಗಿದ್ದೇನೆ ಮತ್ತು ಇಲ್ಲಿಯೇ ಇರಲಿ, ಎಲ್ಲಿಯೇ ಹೋಗಲಿ, ಅಲ್ಲಿ ಈ ಪ್ರಶ್ನೆಗಳನ್ನು ಸಾಮಾನ್ಯವಾಗಿ ಕೇಳಲಾಗುತ್ತದೆ, ಎಂದರೆ "ನಿಮ್ಮ ವಿದೇಶಿ ಕಾರ್ಯನೀತಿ ಏನು? ಜಗತ್ತಿನ ಯುದ್ಧಾಕಾಂಕ್ಷಿ ಗುಂಪುಗಳಲ್ಲಿ ನೀವು ಯಾವ ಗುಂಪಿಗೆ ಸೇರಿಕೊಂಡಿದ್ದೀರಿ?" ಜಗತ್ತಿನ ಯಾವುದೇ ಶಕ್ತಿಯ ಗುಂಪಿಗೆ ನಾವು ಸೇರಿಕೊಳ್ಳಲು ಉದ್ದೇಶಿಸಿಲ್ಲವೆಂದು ಪ್ರಾರಂಭದಿಂದಲೇ ಹೇಳಲು ಪ್ರಯತ್ನಿಸಿದ್ದೇನೆ. ನಾವು ಸಾಧ್ಯವಾದಷ್ಟು ಮಟ್ಟಿಗೆ ನಮ್ಮದೇ ಮಾರ್ಗದಲ್ಲಿ ಮುಂದುವರಿಯಲು ಉದ್ದೇಶಿಸಿದ್ದೇವೆ. ನಾವು ನಮ್ಮದೇ ಆದ ಮಾರ್ಗವನ್ನು ಕಂಡುಕೊಳ್ಳುವಷ್ಟು ಸಮರ್ಥರಾಗಿಲ್ಲವಾದ್ದರಿಂದ ಶಾಂತಿಯನ್ನು ಬಯಸುತ್ತೇವೆ. ಆದರೆ, ಏನೇ ಆಗಲಿ, ವಿಶ್ವದ ಬಲಿಷ್ಠ ರಾಷ್ಟ್ರಗಳೊಂದಿಗೆ ಎಲ್ಲ ಸಂಬಂಧಗಳನ್ನು ತಪ್ಪಿಸಿಕೊಳ್ಳಲು ಉದ್ದೇಶಿಸಿದ್ದೇವೆ. ನಮ್ಮ ಇಂದಿನ ಸಂಕೀರ್ಣ ಜಗತ್ತಿನಲ್ಲಿ ಹಾಗೆ ಮಾಡಲು ಸಂಪೂರ್ಣವಾಗಿ ಸಾಧ್ಯವಾಗುವುದಿಲ್ಲ. ಆದರೆ, ಆ ಗುರಿಯನ್ನು ಹೇಗಾದರೂ ಮಾಡಿ ತಲುಪುತ್ತೇವೆ ಎಂಬ ಭರವಸೆ ಇದೆ.

ಧ್ವಜದ ಅಗಲ–ಉದ್ದಗಳ ದಾಮಾಷಾ ಪ್ರಮಾಣವು ಸಾಮಾನ್ಯವಾಗಿ ೨:೩ ಇರಬೇಕೆಂದು ಈ ನಿರ್ಣಯದಲ್ಲಿ ತಿಳಿಸಲಾಗಿದೆ. "ಸಾಮಾನ್ಯವಾಗಿ" ಎಂಬ ಪದವನ್ನು ಬಳಸಿರುವುದನ್ನು ನೀವು ಗಮನಿಸಬಹುದಾಗಿದೆ. ದಾಮಾಷಾ ಪ್ರಮಾಣವನ್ನು ಸಂಪೂರ್ಣವಾಗಿ ನಿರ್ದಿಷ್ಟ ಪ್ರಮಾಣದಲ್ಲಿ ಹೇಳಲಾಗುವುದಿಲ್ಲ. ಏಕೆಂದರೆ, ಅದೇ ಧ್ವಜಕ್ಕೆ ಕೆಲವು ಸಂದರ್ಭಗಳಲ್ಲಿ ಒಂದು ನಿರ್ದಿಷ್ಟ ಪ್ರಮಾಣ ಸೂಕ್ತವಾಗಬಹುದು ಅಥವಾ ಇತರ ಯಾವುದೇ ಸಂದರ್ಭದಲ್ಲಿ, ಇನ್ನೊಂದು ಸ್ಥಳದಲ್ಲಿ, ಈ ದಾಮಾಷಾ ಪ್ರಮಾಣ ಸ್ವಲ್ಪ ಬೇರೆಯಾಗಬಹುದು. ದಾಮಾಷಾ ಪ್ರಮಾಣದ ಬಗ್ಗೆ ಕಡ್ಡಾಯವಿಲ್ಲ. ಆದರೆ, ಸಾಮಾನ್ಯವಾಗಿ ಹೇಳುವುದಾದರೆ, ಈ ದಾಮಾಷಾ ಪ್ರಮಾಣವು, ೨:೩ ಸೂಕ್ತ ಪ್ರಮಾಣವಾಗಿದೆ. ಕಟ್ಟಡದ ಮೇಲೆ ಧ್ವಜಾರೋಹಣಕ್ಕಾಗಿ ಕೆಲವೊಮ್ಮೆ ೨:೧ ಆಗಿರಬಹುದು. ದಾಮಾಷಾ ಪ್ರಮಾಣ ಏನೇ ಇರಲಿ, ಉದ್ದ ಹಾಗೂ ಅಗಲಕ್ಕೆ ಸಂಬಂಧಿಸಿದಂತೆ ಅದು ಅಂಥ ಮಹತ್ತ್ವದ ಸಂಗತಿಯಾಗದಿದ್ದರೂ, ವಿನ್ಯಾಸ ಅತ್ಯಾವಶ್ಯಕ.

ಮಾನ್ಯರೆ, ನಾನು ನಿಮಗೆ ನಿರ್ಣಯವನ್ನು, ಅಷ್ಟೇ ಅಲ್ಲದೇ ಧ್ವಜವನ್ನೇ ನಿಮ್ಮ ಮುಂದೆ ತೋರಿಸುತ್ತೇನೆ.

ರಾಷ್ಟ್ರಧ್ವಜಗಳಾಗಿ ಎರಡು ಧ್ವಜವನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಒಂದು ರೇಷ್ಮೆಯದು, ಇನ್ನೊಂದು ಧ್ವಜವನ್ನು ನಾನು ಕೈಯಲ್ಲಿ ಹಿಡಿದಿದ್ದೇನೆ. ಈ ಇನ್ನೊಂದು ಧ್ವಜವು ಖಾದಿ – ಹತ್ತಿ ನೂಲಿನ ಧ್ವಜ.

ನಾನು ಈ ನಿರ್ಣಯವನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ (ಹರ್ಷೋದ್ಗಾರ).

**ಮಾನ್ಯ ಸಭಾಧ್ಯಕ್ಷರು** : ಈ ನಿರ್ಣಯದ ಬಗ್ಗೆ ಮೂರು ತಿದ್ದುಪಡಿಯ ಸೂಚನೆಗಳು ನನಗೆ ಬಂದಿವೆ.

**ಅನೇಕ ಗೌರವಾನ್ವಿತ ಸದಸ್ಯರು** : ಇಲ್ಲ. ಇಲ್ಲ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ನೀಡಿದ್ದ ತಿದ್ದುಪಡಿ ಈ ಮುಂದಿನಂತಿವೆ:

"ಈ ಪ್ರಸ್ತಾವಕ್ಕೆ ಮುಂದಿನ ಹೊಸ ಕಂಡಿಕೆಯನ್ನು ಸೇರಿಸಬೇಕು :

'ಬಿಳಿ ಪಟ್ಟಿಯ ನಡುವೆ ಇರುವ ಚಕ್ರದ ಒಳಗೆ, ಶಾಂತಂ, ಶಿವಂ, ಸುಂದರಂ–ಎಂಬುದನ್ನು ಪ್ರಾಚೀನ ಭಾರತದ ಚಿಹ್ನೆಯಾಗಿ ಸೇರಿಸಬೇಕು.'"

ನಾನು ಈ ತಿದ್ದುಪಡಿಯನ್ನು ಕಳುಹಿಸಿದ್ದಾಗ, ನಾನು ಧ್ವಜದ ವಿನ್ಯಾಸವನ್ನು ನೋಡಿರಲಿಲ್ಲ. ಆ ಸಮಯದಲ್ಲಿ ಅತ್ಯಂತ ಮುಖ್ಯವಾದ ಎರಡು–ಮೂರು ವಿಷಯಗಳು ನನ್ನ ಮನಸ್ಸಿನಲ್ಲಿದ್ದವು. ಈ ಧ್ವಜವು, ನಮ್ಮ ನವಭಾರತ ಗಣರಾಜ್ಯದ, ಭರತವರ್ಷದ ಧ್ವಜವಾಗಿರುವುದರಿಂದ, ಇದು ನಮ್ಮ ಪ್ರಾಚೀನ ಸಂಸ್ಕೃತಿಯ, ನಮ್ಮ ಸ್ಫೂರ್ತಿದಾಯಕ ಸಂಸ್ಕೃತಿಯ, ನಮ್ಮ ಸಾಧುಸಂತರಿಗೆ ಪ್ರೇರಣೆ ನೀಡಿದ ಸ್ಫೂರ್ತಿಯ, ಶಾಂತಿ ಸಂದೇಶದ, ಈ ಶಾಂತಿ ಎಂದರೆ ಕೇವಲ ಸ್ತಬ್ಧವಾಗಿರುವ ಸ್ಥಿತಿಯಲ್ಲ, ಜಡ ಸ್ವರೂಪದ ಶಾಂತಿಯಲ್ಲ, ಆದರೆ, ಎಲ್ಲ ಜ್ಞಾನಕ್ಕೆ ಮಾರ್ಗವಾಗಿರುವ ಮಹಾಕವಿ ವಾಲ್ಮೀಕಿ ಅವರ ಶ್ಲೋಕದ ಶಾಂತಿ ಸಂದೇಶದ (ಸಮುದ್ರೈವ ಗಾಂಭೀರ್ಯೇ ಧೈರ್ಯೇ ಚ ಹಿಮವಾನಿವಾ) ದ್ಯೋತಕವಾಗಿದೆ.

ಮಾನ್ಯರೆ, ಚಕ್ರದಲ್ಲಿ ಸ್ವಸ್ತಿಕ ಚಿಹ್ನೆಯನ್ನು ಚಿತ್ರಿಸಿದರೆ, ಅದು ಅಶೋಕನ ಧರ್ಮಚಕ್ರದ ಜೊತೆಗೆ, ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಎಂದರೆ ನಮ್ಮ ಸಂಸ್ಕೃತಿಯ ಬಾಹ್ಯ ಹಾಗೂ ನಿಗೂಢ ವಿಷಯಗಳ ಸಂಕೇತವೂ ಆಗುತ್ತದೆ ಎಂದು ನಾನು ಭಾವಿಸಿದ್ದೇನೆ. ಧರ್ಮ ಚಕ್ರವು ನಿಗೂಢತೆಯನ್ನು ಸಾಂಕೇತಿಸಿದರೆ ಸ್ವಸ್ತಿಕವು, ಬಾಹ್ಯ ಸ್ವರೂಪವನ್ನು ಸಾಂಕೇತಿಸುತ್ತದೆ. ಆದರೆ, ಮಾನ್ಯರೆ, ನಾನು ಈಗ ಧ್ವಜವನ್ನು ನೋಡಿದ್ದೇನೆ ಮತ್ತು ಈ ಚಕ್ರದಲ್ಲಿ ಸ್ವಸ್ತಿಕ ಚಿಹ್ನೆಯನ್ನು ಅಳವಡಿಸುವುದು ಸ್ವಲ್ಪಮಟ್ಟಿಗೆ ಕಷ್ಟವಾಗುತ್ತದೆ. ಚಕ್ರದ ವಿನ್ಯಾಸವನ್ನು ಗಮನಿಸಿದರೆ, ಸ್ವಸ್ತಿಕವನ್ನು ಅಳವಡಿಸುವುದು ತೊಡಕಿನದು ಆಗುತ್ತದೆ. ಚಕ್ರವು ಧರ್ಮಚಕ್ರವನ್ನು ಅಥವಾ ನ್ಯಾಯದ ಚಕ್ರವನ್ನು, ಶಾಂತಂ ಶಿವಂ ಸುಂದರಂ – ಇವುಗಳ ದೈವಿಕ ಯಥಾರ್ಥತೆ ಮೇಲೆ ಪರಿಭ್ರಮಿಸುವ ಸಂಸಾರ ಚಕ್ರವನ್ನು ಸಾಂಕೇತಿಸುತ್ತದೆ. ಈ ಯಥಾರ್ಥತೆಗಳು ಸಂಸಾರವನ್ನು ಸಂರಕ್ಷಿಸುತ್ತವೆ ಮತ್ತು ಈ ವಿಶ್ವದ ಭಾಗವಾಗಿ ನಾವು ಜೀವಿಸುತ್ತಿದ್ದೇವೆ ಮತ್ತು ಇಲ್ಲಿ ನಾವು ಸಂಚರಿಸುತ್ತೇವೆ ಇಲ್ಲಿಯೇ ನಾವು ಜೀವಿಸಿರುತ್ತೇವೆ. ಪಂಡಿತ ನೆಹರು ಅವರು ನಮ್ಮ ಪಾತ್ರವು, ಶಾಂತಿ ಸಂಸ್ಥಾಪಕರದೆಂದು ಹಾಗೂ ಶಾಂತಿ ದೂತರದ್ದೆಂದು ಉಲ್ಲೇಖಿಸಿದ್ದಾರೆ. ಅದು ಖಂಡಿತವಾಗಿಯೂ ನಿಜ. ಕಾಲಗತಿಯ ಪ್ರಾರಂಭದಿಂದ ಅನಂತಕಾಲದವರೆಗೂ ಭಾರತದ ಪಾತ್ರವಿದೆ. ಸ್ವಾಮಿ ವಿವೇಕಾನಂದ ಅವರ ಮಾತಿನಲ್ಲಿ ಹೇಳುವುದಾದರೆ, "ನಾವು ಇನ್ನೊಬ್ಬರ ರಕ್ತದಿಂದ ಕೈತೊಳೆದಿಲ್ಲ. ನಮ್ಮ ವೀರಸೇನೆ, ಜಯಕ್ಕಾಗಿಯೇ ಬೇರೆಯ ರಾಜ್ಯದ ಮೇಲೆ ದಾಳಿ ಮಾಡಿಲ್ಲ. ನಾವು ಯಾವಾಗಲೂ ಶಾಂತಿಯ ಅಗ್ರದೂತರಾಗಿದ್ದೇವೆ ಹಾಗೂ ಯುದ್ಧ ಕಾಲದಲ್ಲಿ, ಯುದ್ಧಾಪೇಕ್ಷಿತ ಜಗತ್ತಿನಲ್ಲಿ ಶಾಂತಿ ಸ್ಥಾಪನೆ ಮಾಡಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ಧ್ವಜದ ವಿನ್ಯಾಸವನ್ನು ನೋಡಿದ ಮೇಲೆ, ಸ್ವಸ್ತಿಕ್ ಚಿಹ್ನೆಯನ್ನು ಚಕ್ರದಲ್ಲಿ ಅಳವಡಿಸುವುದಕ್ಕೆ ಇಚ್ಛಿಸುವುದಕ್ಕಿಂತ ಅದನ್ನು ಅಳವಡಿಸುವಾಗ ಎಷ್ಟು ಕಷ್ಟ ಆಗುತ್ತದೆ ಎಂದು ತಿಳಿಯುತ್ತದೆ. ಹಾಗೆ ಅಳವಡಿಸುವುದು ಕಷ್ಟದಾಯಕ (ಅಡ್ಡಾದಿಡ್ಡಿ) ಮತ್ತು ಅಡ್ಡಿಯಾಗುತ್ತದೆ. ಈ ಸಂದರ್ಭದಲ್ಲಿ ತಿದ್ದುಪಡಿಗೆ ನಾನು ಒತ್ತಾಯಿಸುವುದಿಲ್ಲ ಮತ್ತು ಅದನ್ನು ಹಿಂತೆಗೆದುಕೊಳ್ಳಲು ಸದನದ ಅನುಮತಿ ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ತಾಜಮುಲ್ ಹುಸೇನ್

**ಗೌರವಾನ್ವಿತ ಸದಸ್ಯರು :** ಅವರು ಉಪಸ್ಥಿತರಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಡಾ. ದೇಶಮುಖ್.

**ಡಾ. ಪಿ.ಎಸ್. ದೇಶಮುಖ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಪಂಡಿತ್ ನೆಹರು ಅವರು, ಮಾಡಿದ ಪರಿಣಾಮಕಾರಿಯಾದ ಹಾಗೂ ಆವೇಶಪೂರ್ಣವಾದಂಥ ಭಾಷಣ ಕೇಳಿದ ತರುವಾಯ ಈ ಕುರಿತು ಅದರ ಪರಿಣಾಮ ತೆಗೆದುಹಾಕುವಂಥ ಯಾವುದೇ ವಿಷಯವನ್ನು ವ್ಯಾಖ್ಯಾನಿಸಲು

ಅಥವಾ ಪರಿಗಣನೆಗೆ ಮಾಡಲು, ಯಾರೊಬ್ಬರೂ ಮಾತನಾಡಲು ಹಿಂಜರಿಯಬೇಕಾಗುತ್ತದೆ. ನಾವು ಅವರ ಮಾತುಗಳಿಗೆ ಯಾವಾಗಲೂ ಗೌರವ ನೀಡುತ್ತೇವೆ ಹಾಗೂ ಇಂಥ ಸೂಕ್ಷ್ಮ ಪ್ರಶ್ನೆಗಳ ಬಗ್ಗೆ ನಮ್ಮ ಗೌರವ ಪೂಜ್ಯಭಾವನೆ ಮೂಡಿಸುತ್ತದೆ. ನನ್ನ ತಿದ್ದುಪಡಿಯು ಬಲವಾದ ಕಾರಣಗಳ ಮೇಲೆ ಆಧಾರಿತವಾಗಿತ್ತು. ನಾವು ಈಗಷ್ಟೇ ಕೇಳಿದ ಅವರ ಭಾಷಣವನ್ನು ಅಲ್ಲಗಳೆಯಲು ಯಾವುದೇ ರೀತಿಯಿಂದ ಸಾಧ್ಯವಿಲ್ಲ. ತ್ರಿವರ್ಣಧ್ವಜವನ್ನು ಅದು ಈಗ ಇರುವಂತೆಯೇ ಚರಕಸಹಿತವಾಗಿಯೇ ಉಳಿಸಿಕೊಳ್ಳಬೇಕೆಂಬುದು ನನ್ನ ವಿಚಾರವಾಗಿತ್ತು. ಚರಕವು ಅಹಿಂಸೆಯ ದ್ಯೋತಕವಾಗಿದೆ ಮತ್ತು ಶ್ರಮಜೀವಿಯಾದ ಶ್ರೀಸಾಮಾನ್ಯನಿಗೂ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕೂ ಮತ್ತು ಮಹಾತ್ಮ ಗಾಂಧೀಜಿಯವರ ಹೆಸರಿಗೂ ಇರುವ ಬಿಡಿಸಲಾಗದ ಸಂಬಂಧವನ್ನು ಸೂಚಿಸುತ್ತದೆ. ಆದರೆ, ಈಗ ಪ್ರಸ್ತಾವಿಸಲಾಗಿರುವ ಧ್ವಜಕ್ಕೆ ಸಂಬಂಧಿಸಿದಂತೆ ಒಪ್ಪಿಗೆ ನೀಡುವುದಕ್ಕೆ ಸದನವು ಅಂಟಿಕೊಳ್ಳುವುದೇ ಸರಿಯಾಗಿದೆ ಎಂಬ ವಾಸ್ತವಿಕ ಸಂಗತಿಯನ್ನು ಗಮನಿಸುತ್ತಾ, ಇದನ್ನೇ ಶಿಫಾರಸು ಮಾಡುವುದೇ ಸರಿಯಾದುದೆಂಬುದು ನನ್ನ ವಿಚಾರವಾಗಿದ್ದರೂ, ನಾನು ತಿದ್ದುಪಡಿಯನ್ನು ಮಂಡಿಸಲು ಇಚ್ಛಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಡಾ. ದೇಶಮುಖ್ ಅವರು ಮಂಡಿಸಿದ ಮೇಲ್ಕಂಡ ತಿದ್ದುಪಡಿ ಸೂಚನೆಯನ್ನು ಶ್ರೀ ಶಿಬನ್‌ಲಾಲ್ ಸಕ್ಸೇನ ಅವರು ಕೊಟ್ಟಿದ್ದಾರೆ. ಆದರೆ, ತಿದ್ದುಪಡಿಯನ್ನೇ ಮಂಡಿಸದಿರುವಾಗ, ಈ ತಿದ್ದುಪಡಿಗೆ ತಿದ್ದುಪಡಿ ಮಾಡುವ ಸೂಚನೆ ಮಂಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾವು ಈ ನಿರ್ಣಯವನ್ನು ಕುರಿತು ಚರ್ಚಿಸೋಣ.

**ಶ್ರೀ ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಪಂಡಿತ್ ಜವಾಹರಲಾಲ್ ನೆಹರು ಅವರು ಮಂಡಿಸಿರುವ ನಿರ್ಣಯಕ್ಕೆ ಬೆಂಬಲ ಸೂಚಿಸುತ್ತೇನೆ. ಈ ದಿನವು ಇತಿಹಾಸದಲ್ಲಿ ಚಿರಸ್ಮರಣೆಯ ದಿನ ಎಂದು ನಾನು ಭಾವಿಸುತ್ತೇನೆ. ಈ ದಿನ ಸ್ವತಂತ್ರ ಭಾರತವು ತನ್ನ ರಾಷ್ಟ್ರಧ್ವಜವನ್ನು ಪ್ರದರ್ಶಿಸುತ್ತಿದೆ. ಕಳೆದ ಇಪ್ಪತ್ತೇಳು ವರ್ಷಗಳ ಅವಧಿಯಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರಿಗೂ ಆ ಅವಧಿಯಲ್ಲಿ ನಡೆದ ಘಟನೆಗಳನ್ನು ಪಂಡಿತ್‌ಜೀಯವರು ನೆನಪಿಸಿಕೊಟ್ಟಿದ್ದಾರೆ. ನಾವು ಶಸ್ತ್ರಾಸ್ತ್ರಗಳನ್ನು ಹಿಡಿಯಲಿಲ್ಲ ಹಾಗೂ ಅಸಹಾಯಕರಾಗಿದ್ದೆವು ಹಾಗೂ ಸ್ವಾತಂತ್ರ್ಯ ಗಳಿಸಲು ಯಾವುದೇ ಸಂಪನ್ಮೂಲ ಇರಲಿಲ್ಲ. ಆದರೆ, ಯಾವ ರೀತಿಯಲ್ಲಿ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾವು ಹೋರಾಡಿ ಸ್ವಾತಂತ್ರ್ಯ ಗಳಿಸಿದ್ದೇವೆಯೋ, ಭಾರತದ ಇತಿಹಾಸದಲ್ಲಿ ಅಷ್ಟೇ ಅಲ್ಲದೇ ಇಡೀ ವಿಶ್ವದ ಇತಿಹಾಸದಲ್ಲೇ ಅದಕ್ಕೆ ಸಮನಾದುದು ಮತ್ತೊಂದಿಲ್ಲ.

ನಾವು ಯಾವುದರ ವಿಜಯಕ್ಕಾಗಿ ಅನೇಕ ವರ್ಷಗಳಿಂದ ಪ್ರಯತ್ನ ನಡೆಸಿದ್ದೆವೋ ಅದನ್ನು ಈ ದಿನ ಗಳಿಸಿದ್ದೇವೆ. ಈ ಧ್ವಜವನ್ನು ಕೆಳಗೆ ಎಳೆದುಹಾಕಿ, ತುಳಿದು ಬೆಂಕಿ ಹಚ್ಚಿದ ಜನರನ್ನು ಸಹ ನೆನಪಿಸಿಕೊಳ್ಳಬೇಕಾಗುತ್ತದೆ. ಆದರೆ, ಸತ್ಯ ಹಾಗೂ ನ್ಯಾಯ ನಮ್ಮೊಂದಿಗೇ ಇದ್ದದ್ದರಿಂದ, ತುಳಿದು ಧ್ವಂಸ ಮಾಡಲು ಹಾಗೂ ಆ ರೀತಿ ಕೊನೆಗಾಣಿಸಲು ಸಾಧ್ಯವಾಗಲಿಲ್ಲ. ಶಸ್ತ್ರ ಹಿಡಿಯದೇ ತನ್ನದೇ ಸಂಪನ್ಮೂಲಗಳಿಲ್ಲದೇ, ಇಪ್ಪತ್ತೇಳು ವರ್ಷಗಳ ಸತತ ಹೋರಾಟ ನಡೆಸಿ, ನ್ಯಾಯ ಹಾಗೂ ಸತ್ಯದ ಮಾರ್ಗದಲ್ಲೇ ನಡೆದು, ಸ್ವಾತಂತ್ರ್ಯ ಗಳಿಸಿದ ರಾಷ್ಟ್ರವೆಂದು ಇಡೀ ಜಗತ್ತಿಗೇ ತೋರಿಸಿಕೊಟ್ಟಿದ್ದೇವೆ.

ಆ ದಿನ, ೧೯೨೨ರಲ್ಲಿ, ಪಂಡಿತ್ ಜವಾಹರಲಾಲ್ ನೆಹರು ಅವರು, ಜಬ್ಬಲಪುರಕ್ಕೆ ಮೊದಲ ಸಲ ಬಂದಿದ್ದ ದಿನವನ್ನು ನಾನು ನೆನೆಯುತ್ತೇನೆ. ಭಾರತದಲ್ಲಿ ಅದೇ ಮೊದಲ ಸಲ ಇಂಥ ಧ್ವಜವನ್ನು ಪ್ರದರ್ಶಿಸಲಾಗಿತ್ತು. ಆಗ ಅದರಲ್ಲಿ–ಕೆಂಪು, ಬಿಳಿ ಹಾಗೂ ಹಸಿರು ಈ ಮೂರು ಬಣ್ಣಗಳು ಇದ್ದವು. ಅದೂ ತ್ರಿವರ್ಣಧ್ವಜವಾಗಿತ್ತು ಎಂಬುದರಲ್ಲಿ ಸಂಶಯವೇ ಇಲ್ಲ. ಆ ಕಾಲದಲ್ಲಿ, ಮೊದಲ ಸಲವಾಗಿ ಭಾರತದಲ್ಲಿ, ಜಬ್ಬಲಪುರದ ಟೌನ್‌ಹಾಲ್ ಮೇಲೆ ಈ ಧ್ವಜವನ್ನು ಹಾರಿಸಲಾಯಿತು. ಪಂಡಿತ್ ಜವಾಹರಲಾಲ್ ನೆಹರು

ಅವರನ್ನು ನೋಡಿದಾಗ, ಯಾರಿಗೇ ತಾನೆ ಪಂಡಿತ್ ಮೋತಿಲಾಲ್ ನೆಹರು ಅವರ ನೆನಪಾಗುವುದಿಲ್ಲ? ಆ ದಿನ ಹೌಸ್ ಆಫ್ ಕಾಮನ್ಸ್‌ನಲ್ಲಿ, ಒಂದು ಸಾರ್ವಜನಿಕ ಹಾಲ್ ಮೇಲೆ ಧ್ವಜವನ್ನು ಹೇಗೆ ಹಾರಿಸಲಾಯಿತು ಎಂಬ ಪ್ರಶ್ನೆಯನ್ನು ಕೇಳಲಾಗಿತ್ತು ಹಾಗೂ ಗ್ರೇಟ್ ಬ್ರಿಟನ್ನಿನ ಪ್ರಧಾನಮಂತ್ರಿಗಳು, ಇನ್ನು ಮುಂದೆ ಈ ರೀತಿಯಾಗಿ ಘಟನೆ ಪುನಃ ನಡೆಯದಂತೆ ನೋಡಿಕೊಳ್ಳಲಾಗುವುದೆಂದು ಸದನಕ್ಕೆ ಭರವಸೆ ನೀಡಿದ್ದರು. ಆದರೆ, ಇಪ್ಪತ್ತೈದು ವರ್ಷಗಳ ಹಿಂದೆ, ನನ್ನ ಊರಿನಲ್ಲಿ, ಎಂದರೆ ಜಬ್ಬಲಪುರದಲ್ಲಿ, ಮೊದಲ ಸಲವಾಗಿ ಧ್ವಜಾರೋಹಣ ಮಾಡಿದ ದಿನ ಅತ್ಯಂತ ಸಂತೋಷದ ದಿನವಾಗಿತ್ತು. ಅದು ಈಗ ಪ್ರತಿಯೊಂದು ಸಾರ್ವಜನಿಕ ಕಟ್ಟಡದ ಮೇಲೆ ಹಾರಾಡುವಂತಾಗಿದೆ. ಇದು ಭಾರತದ ಪ್ರತಿಯೊಬ್ಬರಿಗೂ ಹೆಮ್ಮೆಯ ವಿಷಯ.

ತ್ರಿವರ್ಣ ಧ್ವಜದಲ್ಲಿ ಜಾತೀಯತೆ ಭಾವನೆ ಇಲ್ಲ. ಪಂಡಿತಜೀ ಅವರು, ತಮ್ಮ ಭಾಷಣದಲ್ಲಿ ಈಗಾಗಲೇ ಹೇಳಿದ್ದಾರೆ. ಧ್ವಜದ ಬಣ್ಣಗಳು ಕೆಂಪು, ಬಿಳಿ ಮತ್ತು ಹಸಿರು ಬಣ್ಣಗಳಿದ್ದಾಗ, ಧ್ವಜದ ಬಗ್ಗೆ ಜಾತೀಯ ಭಾವನೆ ಗುರುತು ಕಂಡುಬಂದವು. ಆದರೆ, ಈ ಬಣ್ಣಗಳನ್ನು ಕೇಸರಿ, ಬಿಳಿ ಮತ್ತು ಹಸಿರು ಬಣ್ಣಗಳಿಗೆ ಬದಲಾಯಿಸಿದಾಗ, ಈ ತ್ರಿವರ್ಣಗಳು ಯಾವುದೇ ಜಾತೀಯತೆಯ ಭಾವನೆಯನ್ನು ಪ್ರತಿಬಿಂಬಿಸುತ್ತಿಲ್ಲವೆಂದು ಸ್ಪಷ್ಟವಾಗಿ ಘೋಷಿಸಿದ್ದೆವು. ಆ ಕಾಲದಲ್ಲಿ ಈ ಬಣ್ಣಗಳ ಮಹತ್ತ್ವವೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿತ್ತು. ಈ ದಿನ ಅವುಗಳಿಗೆ, ಯಾರು ಜಾತೀಯತೆ ಬಣ್ಣ ಬಳಿದರೋ, ಅವರು ಜಾತೀಯ ಧ್ವಜವೆಂದು ತೆಗೆದುಕೊಳ್ಳತಕ್ಕದ್ದಲ್ಲ. ಇದರ ಮಧ್ಯದಲ್ಲಿ ಅಶೋಕ ಚಕ್ರ ಇರುವುದನ್ನು ನೀವು ನೋಡಿದ್ದೀರಿ. ಅಶೋಕನಿಗೆ ಚರಿತ್ರೆಯಲ್ಲಿ ಎಂಥ ಮಹೋನ್ನತ ಸ್ಥಾನ ಇತ್ತೆಂಬುದನ್ನು ಪಂಡಿತ್‌ಜೀ ಅವರು ಹೇಳಿದ್ದಾರೆ. ಕಳಿಂಗ ಯುದ್ಧದ ತರುವಾಯ, ಅಶೋಕನು ಇಡೀ ವಿಶ್ವವನ್ನು ಪ್ರೀತಿಯಿಂದ ಒಂದುಗೂಡಿಸಬೇಕೆಂದು ಪ್ರಯತ್ನಿಸಿದ್ದನು ಹಾಗೂ ಅಶೋಕನಂಥ ಚಕ್ರವರ್ತಿಗಳು ಭಾರತದಲ್ಲಿ ಅಷ್ಟೇ ಅಲ್ಲ, ಇಡೀ ಜಗತ್ತಿನಲ್ಲಿ ಯಾರೂ ಇಲ್ಲ ಎಂಬುದನ್ನು ಜಗತ್ತೇ ಒಪ್ಪಿಕೊಂಡಿತ್ತು. ಶ್ರೀ ಎಚ್.ಜಿ. ವೇಲ್ಸ್ ಜಗತ್ತಿನ ಚರಿತ್ರೆ ಎಂಬ ಗ್ರಂಥದಲ್ಲಿ, ಉಳಿದೆಲ್ಲ ಚಕ್ರವರ್ತಿಗಳು ರಕ್ತಸಿಕ್ತ ಜೀವನ ನಡೆಸಿದರೆ, ಅಶೋಕನು, ಪ್ರೀತಿಯಿಂದ ಜಗತ್ತನ್ನು ಒಂದುಗೂಡಿಸಬೇಕೆಂದು ಪ್ರಯತ್ನಿಸಿದ್ದನು ಎಂದು ಬರೆದಿದ್ದಾರೆ.

ನಮ್ಮ ಧ್ವಜದ ಬಣ್ಣಗಳನ್ನು ಗಮನಿಸಿದಾಗ, ಇತರ ವಿಷಯಗಳನ್ನು ಸಹ ನಾವು ಗಮನಿಸಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕೇಸರಿ ಬಣ್ಣವು ಹಿಂದೂಗಳನ್ನು ಪ್ರತಿನಿಧಿಸುತ್ತದೆ ಎಂದು ಯಾರಾದರೂ ಹೇಳಿದರೆ ಅದು ತಪ್ಪು. ಒಂದು ಕಾಲಕ್ಕೆ ಅದು ಹಿಂದೂಗಳ ಧ್ವಜದ ಬಣ್ಣವಾಗಿತ್ತು. ಪೇಶ್ವೆಗಳ ಕಾಲದಲ್ಲಿ, ಹಿಂದೂಗಳ ಧ್ವಜದ ಬಣ್ಣವಾಗಿತ್ತು. ಸ್ವಾತಂತ್ರ್ಯಕ್ಕಾಗಿ ಅವರು ನಡೆಸಿದ ಯುದ್ಧಗಳಲ್ಲಿ ರಜಪೂತರು ಕೇಸರಿ ಉಡುಪುಗಳನ್ನು ಧರಿಸಿದ್ದರು ಮತ್ತು ಕೇಸರಿಧ್ವಜ ಅವರ ಲಾಂಛನವಾಗಿತ್ತು. ಆದರೆ, ಗತಕಾಲದಲ್ಲಿ ಒಳಹೊಕ್ಕು ನೋಡಿದರೆ, ಕೇಸರಿ ಬಣ್ಣವು ಆ ಕಾಲದಲ್ಲಿ ಧ್ವಜದ ಬಣ್ಣ ಆಗಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮಹಾಭಾರತದ ಕಾಲಕ್ಕೆ ಬಣ್ಣಗಳ ಪ್ರಶ್ನೆಯೇ ಇರಲಿಲ್ಲ ಎಂಬುದು ನಿಮಗೇ ತಿಳಿದಿದೆ. ಅರ್ಜುನನ ರಥದ ಮೇಲೆ ಹಾರಾಡುತ್ತಿದ್ದ ಧ್ವಜದಲ್ಲಿ ಹನುಮಂತ ಚಿಹ್ನೆ ಇತ್ತು. ಕರ್ಣನ ಧ್ವಜದ ಗುರುತು ಆನೆ ಆಗಿತ್ತು. ಆದ್ದರಿಂದ ಯಾವುದೇ ಬಣ್ಣವು, ಹಿಂದೂಗಳ ಪ್ರಾಚೀನ ಕಾಲದ ಬಣ್ಣ ಎಂದು ವಿವರಿಸುವುದು ಚಾರಿತ್ರಿಕವಾಗಿ ತಪ್ಪಾಗುತ್ತದೆ. ಯಾವ ಧ್ವಜದ ಅಡಿಯಲ್ಲಿ, ಕಳೆದ ಇಪ್ಪತ್ತೇಳು ವರ್ಷಗಳಲ್ಲಿ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ಈಗ ಸ್ವಾತಂತ್ರ್ಯ ಗಳಿಸಿಕೊಂಡಿದ್ದೇವೆಯೋ, ಆ ಧ್ವಜವೇ ನಮ್ಮ ರಾಷ್ಟ್ರಧ್ವಜ ಆಗಿರಬೇಕೆಂದು ನಾನು ಹೇಳುತ್ತೇನೆ. ಈಗ, ಜಾತೀಯತೆಯ ಭ್ರಾಂತಿಗೆ ಒಳಗಾದ ಕೆಲವು ಜನ, ಅಂಥ ಸಂಗತಿಗಳನ್ನು ಮುಂದಿಡುತ್ತಿದ್ದಾರೆ. ಅದು ನನಗೆ ನಾಚಿಕೆ ಎನಿಸುತ್ತದೆಂದು ನಾನು ನೋವಿನಿಂದ ಹೇಳಬೇಕಾಗಿದೆ. ಒಂದು ದಿನದ ಹಿಂದೆಯಷ್ಟೇ, ಹಿಂದಿಭಾಷೆಗೆ ಸಂಬಂಧಿಸಿದಂತೆ ಒಂದು ಸಭೆ ನಡೆಯಿತು. ಹಿಂದಿಭಾಷೆಯು ರಾಷ್ಟ್ರಭಾಷೆಯಾಗಿರಬೇಕು ಮತ್ತು ದೇವನಾಗರಿ ಲಿಪಿಯು ರಾಷ್ಟ್ರೀಯ ಲಿಪಿಯಾಗಿರಬೇಕು ಎಂಬ ಪ್ರಸ್ತಾವವನ್ನು ಸಭೆಯಲ್ಲಿ ಮಂಡಿಸಲಾಗಿತ್ತು.

ಸಭೆಯಲ್ಲಿ ಗದ್ದಲ ಪ್ರಾರಂಭವಾಯಿತು. ವದಂತಿಗಳು ಹಬ್ಬಿದವು ಹಾಗೂ ಕಾರುಗಳ ಮೇಲಿದ್ದ ಧ್ವಜಗಳನ್ನು ತೆಗೆದುಹಾಕಿ ಎಸೆಯಲಾಯಿತು. ಈ ರೀತಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡುವುದರಿಂದ ಇಡೀ ರಾಷ್ಟ್ರಕ್ಕೆ ಅವಮಾನ ಮಾಡಿದಂತೆ ಆಗುವಂಥ ಕೃತ್ಯ ಎಸಗಿದ ಜನ ಜಾತೀಯತೆಯ ಭ್ರಾಂತಿಗೆ ಒಳಗಾದರೆಂದು ನಾನು ಹೇಳಬೇಕಾಗುತ್ತದೆ. ಈ ದೇಶದಲ್ಲಿ ಮನುಷ್ಯರು ಜೀವಿಸುತ್ತಿದ್ದಾರೆ ಹೊರತು ಜಡವಸ್ತುಗಳಲ್ಲ ಹಾಗೂ ಅವರಿಗೆ, ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳೆಂಬ ಮೂರು ಗುಣಗಳಿವೆ. ಅಂಥ ಘಟನೆಗಳು ಸಂಭವಿಸಿದರೆ, ಶಾಂತಿ, ನೈತಿಕತೆ ಹಾಗೂ ಸಂತೋಷದ ಚಿಹ್ನೆಯಾಗಿರುವ ಈ ಧ್ವಜವು ಈ ನಾಡಿನಿಂದ ಕಣ್ಮರೆಯಾಗುತ್ತದೆ. ಆದ್ದರಿಂದ ಜಾತೀಯತೆಯ ಭ್ರಾಂತಿಗೊಳಗಾದ ಜನರಿಗೆ, ಇಂಥ ಕೃತ್ಯಗಳನ್ನು ಮಾಡಬಾರದೆಂದು ಅವರಿಗೆ ನಾನು ಎಚ್ಚರಿಕೆ ನೀಡುತ್ತೇನೆ. ಹಸಿರು ಬಣ್ಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅದು ಸ್ವಾತಂತ್ರ್ಯದ ಹೋರಾಟದ ಧ್ವಜದ ಬಣ್ಣವಾಗಿತ್ತು. ೧೮೫೭ರ ಸ್ವಾತಂತ್ರ್ಯ ಸಂಗ್ರಾಮವನ್ನು ನಾನು ನಿಮಗೆ ನೆನಪು ಮಾಡಿಕೊಡುತ್ತೇನೆ. ಆ ಕಾಲದಲ್ಲಿ, ಧ್ವಜದ ಬಣ್ಣ ಹಸಿರು ಮತ್ತು ಅದರ ಅಡಿಯಲ್ಲಿ ನಾವು ಹೋರಾಡಿದ್ದೆವು. ಆ ಕಾಲದಲ್ಲಿ ಅದು ಕೇವಲ ಮುಸ್ಲಿಮರ ಅಥವಾ ಹಿಂದೂಗಳ ಬಣ್ಣವಾಗಿರಲಿಲ್ಲ. ಆದರೆ, ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಹೋರಾಟ ನಡೆಸಿದರು. ಆದ್ದರಿಂದ ಒಂದು ನಿರ್ದಿಷ್ಟ ಬಣ್ಣವು ಹಾಗೂ ಅದರಲ್ಲಿಯೂ ಇಡೀ ಭಾರತ ದೇಶವು ಸ್ವತಂತ್ರವಾಗುತ್ತಿರುವ ಕಾಲದಲ್ಲಿ ಮತ್ತು ದೇಶದ ಎಲ್ಲೆಡೆಯಲ್ಲಿ ಈ ಧ್ವಜವನ್ನು ಹಾರಿಸುತ್ತಿರುವ ಕಾಲದಲ್ಲಿ, ಧ್ವಜವನ್ನು ವಿರೋಧಿಸಿ ಮಾತನಾಡುವುದರಿಂದ ಆಗುವ ನೋವಿಗಿಂತ ಯಾವುದೂ ಹೆಚ್ಚಿನ ನೋವನ್ನುಂಟುಮಾಡುವುದಿಲ್ಲ. ಇದು ವಿಶ್ವದೊಡನೆ ಪ್ರೀತಿಯಿಂದ ಜಗತ್ತನ್ನೇ ಗೆಲ್ಲುವ ಧ್ವಜ, ಅಂಥ ರೀತಿಯಲ್ಲಿ ವಿನ್ಯಾಸಗೊಳಿಸಿದ್ದೇವೆ ಮತ್ತು ಅದರ ವಿಜಯದ ಬಗ್ಗೆ ಮಾತನಾಡಿದ್ದೇವೆ. ಅಹಿಂಸೆ ಮತ್ತು ಶಾಂತಿಯಿಂದ ನಾವು ಜಗತ್ತನ್ನೇ ಗೆಲ್ಲೋಣ. ಅದರ ಚಿಹ್ನೆಯೇ ಇದು. ನಾವು ಆ ಕಾರ್ಯವನ್ನು ಮಾಡಿದಾಗಲೇ ನಾವು ಕೊಟ್ಟ ಮಾತನ್ನು ಈಡೇರಿಸಿದಂತೆ ಆಗುತ್ತದೆ. ನಾನು ಈ ನಿರ್ಣಯವನ್ನು ಅತ್ಯಂತ ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ.]*

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಮಹಾನ್ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಿಂಹಪಾಲು ಪಡೆದಿದ್ದ ಮಹಾನ್ ರಾಷ್ಟ್ರೀಯ ನೇತಾರರು ಆದ ಪಂಡಿತ ಜವಾಹರಲಾಲ್ ನೆಹರು ಅವರು ಮಂಡಿಸಿರುವ ನಿರ್ಣಯವನ್ನು ಬೆಂಬಲಿಸುವುದಕ್ಕಾಗಿ ನಾನು ನಿಮ್ಮ ಮುಂದೆ ಬಂದಿದ್ದೇನೆ.

ಮಾನ್ಯರೆ, ನಾವು ವಾಸಿಸುತ್ತಿರುವ ಮಹಾನ್ ದೇಶದ ಕೋಟಿ ಕೋಟಿ ನಿವಾಸಿಗಳು, ಎತ್ತಿ ಹಿಡಿಯಬೇಕಾಗಿರುವ ಹಾಗೂ ಸಮರ್ಥಿಸಬೇಕಾದ ಈ ಧ್ವಜದ ಮಹತ್ತ್ವವನ್ನು ನಮಗೆ ವಿವರಿಸಿದ್ದಾರೆ. ಇದು ಶ್ರೀಮಂತಿಕೆಯ ಅಥವಾ ಐಶ್ವರ್ಯದ ಧ್ವಜವಾಗಿರದೆ, ದೇಶದಾದ್ಯಂತ ಇರುವ ಎಲ್ಲ ದಲಿತರ, ತುಳಿತಕ್ಕೊಳಗಾದವರ ಮತ್ತು ಶೋಷಿತರ ಧ್ವಜವಾಗಬೇಕಾಗಿದೆ.

ಮಾನ್ಯರೆ, ಧ್ವಜದ ಮಧ್ಯದಲ್ಲಿ ಚಕ್ರವನ್ನು ಅಳವಡಿಸಿರುವುದನ್ನು ನಾನು ವಿಶೇಷವಾಗಿ ಸ್ವಾಗತಿಸುತ್ತೇನೆ. ಮಹಾತ್ಮ ಗಾಂಧಿಯವರು ಕೊಟ್ಟಿರುವ ಮಹಾಮಂತ್ರ, ಚರಕದ ಬಳಕೆ. 'ಚರಕ' ಹಿಡಿದಿರುವ ನಮ್ಮ ಕೆಲವರಿಗೆ, ಈ ದೇಶದಲ್ಲಿ ನಡೆದ ಅನೇಕ ಶತಮಾನಗಳ ರಾಜಕೀಯ ಹೋರಾಟದ ತರುವಾಯ ಈಗ ಅವರಿಗೆ ಹೆಮ್ಮೆ ಅನಿಸುತ್ತದೆ. ಈ ಎಲ್ಲ ಶತಮಾನಗಳ ಕಾಲ ನಿಸ್ತೇಜವಾಗಿದ್ದ ಈ ದೇಶಕ್ಕೆ ಈ ಧ್ವಜದ ಕಾರಣದಿಂದಲೇ ಹೆಮ್ಮೆ ಪಡುವಂತಾಗಿದೆ.

ಅಶೋಕನ ರಾಜಧಾನಿಯಾಗಿದ್ದ ಸಾರನಾಥದ ಸಿಂಹವನ್ನು ಅಳವಡಿಸಿಕೊಂಡಿರುವುದನ್ನು ನಾನು ಸ್ವಾಗತಿಸುತ್ತೇನೆ. ಅಶೋಕನು, ಬುದ್ಧನ ತರುವಾಯ ಎಲ್ಲಕ್ಕಿಂತ ಉನ್ನತವಾಗಿರುವ, ಮಾನವೀಯತೆಗಾಗಿ ಸಹಾನುಭೂತಿಯಿಂದ 'ಪಂಚಶೀಲ' ತತ್ತ್ವಗಳನ್ನು ನೀಡಿದ್ದಾನೆ.

ಹರಿಜನ ವರ್ಗದವರಿಗೆ ಮತ್ತು ಸಮಾಜ ಏಣಿಯ ಕೆಳಗಿನ ಮೆಟ್ಟಿಲ ಮೇಲಿರುವ ಎಲ್ಲ ಸಮುದಾಯಗಳ ಜನರಿಗೆ, ಸರ್ವೋಚ್ಚ ಸಂಸ್ಥೆಯ ಬುನಾದಿಯಾಗಿರುವ ಸಂವಿಧಾನವು, ತುಳಿತಕ್ಕೆ ಒಳಗಾಗಿರುವ ಲಕ್ಷ ಲಕ್ಷ ಜನರಿಗೆ ಸಮಾಧಾನ ನೀಡುತ್ತದೆ. ಮಾನ್ಯರೆ, ಮನುಷ್ಯ ದುಃಖಗಳ ಉಪಶಮನಕ್ಕಾಗಿ ವಾಸ್ತವಿಕವಾಗಿಯೂ ಸಹಾನುಭೂತಿ ನೀಡಿದ ಬುದ್ಧನ ತತ್ತ್ವಗಳನ್ನು ಈ ಮಹಾನ್ ಧ್ವಜವನ್ನು ಒಪ್ಪಿಕೊಂಡ ತರುವಾಯ ನಿಜವಾಗಿಯೂ ಪಾಲಿಸುತ್ತೇವೆ ಎಂಬ ಭರವಸೆ ನನಗೆ ಇದೆ.

ಇಷ್ಟು ಮಾತು ಹೇಳಿ ನಾನು ನಿರ್ಣಯವನ್ನು ಬೆಂಬಲಿಸುತ್ತೇನೆ.

**ಶ್ರೀ ಚೌಧರಿ ಖಲಿಖುಜ್ಜಮಾನ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : *[ಮಾನ್ಯ ಸಭಾಧ್ಯಕ್ಷರೆ, ಪಂಡಿತ್ ನೆಹರು ಅವರು ಮಂಡಿಸಿರುವ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ (ಹರ್ಷೋದ್ಗಾರ). ಇಂದಿನಿಂದ ಯಾರು ತಾನೊಬ್ಬ ಭಾರತೀಯನೆಂದು ಹೇಳಿಕೊಳ್ಳುತ್ತಾನೆಯೋ, ಆತನು, ಮುಸ್ಲಿಮನಾಗಿರಲಿ, ಹಿಂದೂ ಆಗಿರಲಿ ಅಥವಾ ಕ್ರಿಶ್ಚಿಯನ್ ಆಗಿರಲಿ, ಭಾರತದ ಧ್ವಜವೆಂದು ಎಲ್ಲರೂ ಒಪ್ಪಿಕೊಂಡಿರುವ ಮತ್ತು ಅಂಗೀಕರಿಸಿರುವ ಈ ಧ್ವಜದ ಗೌರವವನ್ನು ಎತ್ತಿ ಹಿಡಿಯುವುದಕ್ಕಾಗಿ ಮತ್ತು ಕಾಪಾಡುವುದಕ್ಕಾಗಿ ಎಲ್ಲ ತ್ಯಾಗಮಾಡುವ ನಾಗರಿಕನಾಗಿರುವನು ಎಂದು ನಾನು ಭಾವಿಸಿದ್ದೇನೆ (ಹರ್ಷೋದ್ಗಾರ). ತಪ್ಪಾಗಿರುವ ಚರಿತ್ರೆಯನ್ನು ಮತ್ತೊಮ್ಮೆ ನಿರೂಪಿಸಲು ನಾನು ಇಚ್ಛಿಸುವುದಿಲ್ಲ. ನಾವೆಲ್ಲರೂ ಹಿಂದಿನದನ್ನು ಮರೆಯೋಣ ಹಾಗೂ ಹಳೆಯ ಕಹಿ ನೆನಪುಗಳನ್ನು ನಮ್ಮ ಮನಸ್ಸಿನಿಂದ ತೆಗೆದುಬಿಡೋಣವೆಂದು ನಾನು ಹೇಳುತ್ತೇನೆ. ಆದ್ದರಿಂದ, ಬಹುಸಂಖ್ಯಾತರು ಕೂಡಾ ಹಿಂದಿನದನ್ನು ಮರೆತುಬಿಡಲಿ ಎಂದು ಹಾರೈಸುತ್ತೇನೆ. ನಾವೆಲ್ಲರೂ ಕೂಡಿ ಇಂದಿನಿಂದ ಭಾರತದ ಹೊಸ ಇತಿಹಾಸ ನಿರ್ಮಾಣ ಮಾಡೋಣ. ಈ ಕಾರ್ಯದಲ್ಲಿ, ಶ್ರದ್ಧೆ ನಂಬಿಕೆ, ಗೌರವ ಇರುವ ಹಾಗೂ ದೇಶದ ಮತ್ತು ರಾಷ್ಟ್ರದ ಪುನರ್‌ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ಇರುವ ಪ್ರತಿಯೊಬ್ಬರೂ ನಮ್ಮೊಂದಿಗೆ ಕೈಜೋಡಿಸಬೇಕು. ಈಗ ನಮಗೆ ಕಾಣುತ್ತಿರುವ ಧ್ವಜವು ಕೇವಲ ಒಂದು ತುಂಡು ಬಟ್ಟೆಯಾಗಿರಬಹುದು. ಆದರೆ, ರಾಷ್ಟ್ರದ ಧ್ವಜವಾಗಿರುವ ಇದು ನೈತಿಕ ಹಾಗೂ ಆಧ್ಯಾತ್ಮಿಕ ಇವೆರಡು ವಿಚಾರಗಳ ಮತ್ತು ಆಶೋತ್ತರಗಳ ಚಿಹ್ನೆಯಾಗಿದೆ ಎಂಬುದು ನಿಮಗೆ ತಿಳಿದಿದೆ. ಭಾರತದ ನಾಗರಿಕನೆಂದು ಹೇಳಿಕೊಳ್ಳುವ ಧ್ವಜವನ್ನು ಬೆಂಬಲಿಸಿರುವ ಯಾರೊಬ್ಬರೂ, ಪಂಡಿತ್ ನೆಹರು ಅವರ ಭಾಷಣವನ್ನು ನಿರಾಕರಿಸುವ ಸಂದರ್ಭ ಇಲ್ಲ ಎಂಬುದು ನನಗೆ ಸಂತೋಷ ಉಂಟುಮಾಡಿದೆ. ಆದ್ದರಿಂದ, ನಾವು ಯಾವುದೇ ದೃಷ್ಟಿಕೋನದಿಂದ ನೋಡಿದರೂ, ಈ ದಿನ ಕೈಗೊಂಡ ಕ್ರಮವು, ಭಾರತದ ಅಡಿಪಾಯವನ್ನು ಬಲಗೊಳಿಸುವುದೆಂದು ನಾನು ಭಾವಿಸಿದ್ದೇನೆ. ಪ್ರತಿಯೊಬ್ಬ ಮುಸ್ಲಿಮ್, ಹಿಂದೂ ಹಾಗೂ ಕ್ರಿಶ್ಚಿಯನ್ ಭಾರತ ದೇಶದ ಉದ್ದಕ್ಕೂ ಎಲ್ಲೆಡೆಯಲ್ಲಿ ಈ ಧ್ವಜವನ್ನು ಹಾರಿಸುವುದಕ್ಕೆ ಹೆಮ್ಮೆ ಪಡುತ್ತಾನೆ ಮತ್ತು ಅದಕ್ಕೆ ಗೌರವ ಸಲ್ಲಿಸುತ್ತಾನೆ (ಚಪ್ಪಾಳೆ). ಇಷ್ಟು ಹೇಳಿ ನಾನು ಪ್ರಸ್ತಾವಕ್ಕೆ ಬೆಂಬಲ ಸೂಚಿಸುತ್ತೇನೆ]*

**ಶ್ರೀ ಎಸ್. ರಾಧಾಕೃಷ್ಣನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಪಂಡಿತ್ ಜವಾಹರಲಾಲ್ ನೆಹರು ಅವರು ಈ ಧ್ವಜವನ್ನು ನಿಮ್ಮ ಮುಂದೆ ಪ್ರದರ್ಶಿಸಿ ನಿರ್ಣಯವನ್ನು ನಿಮ್ಮ ಮುಂದೆ ಇಟ್ಟು, ನಿರರ್ಗಳವಾಗಿ ಮಾತನಾಡಿದಂತೆ ನಾನು ಮಾತನಾಡಲು ಇಚ್ಛಿಸುವುದಿಲ್ಲ. ಈ ಧ್ವಜವು ಭೂತ, ವರ್ತಮಾನಗಳನ್ನು ಜೋಡಿಸುವ ಕೊಂಡಿಯಾಗಿದೆ. ನಮ್ಮ ಸ್ವಾತಂತ್ರ್ಯದ ರೂವಾರಿಗಳು ನಮಗೆ ನೀಡಿದ ಆಸ್ತಿ ಬಳುವಳಿಯಾಗಿದೆ. ಈ ಧ್ವಜದ ಅಡಿಯಲ್ಲಿ ಹೋರಾಡಿದ ಜನರೇ, ಭಾರತದ ಸ್ವಾತಂತ್ರ್ಯದ ಈ ಮಹಾನ್ ದಿನದ ಬರುವಿಕೆಗಾಗಿ ಕಾರಣಕರ್ತರಾಗಿದ್ದಾರೆ. ಪಂಡಿತ್ ಜವಾಹರಲಾಲ್ ನೆಹರು ಅವರು, ಈ ದಿನವು ದುಃಖರಹಿತವಾದ ಸಂತೋಷದ ದಿನ ಮಾತ್ರವಾಗಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್, ಐಕ್ಯ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಿದೆ. ಐಕ್ಯದ ವಿಷಯದಲ್ಲಿ ರಾಜಿ ಮಾಡಿಕೊಳ್ಳಬಹುದು. ಹಾಗೆಯೇ ಸ್ವಾತಂತ್ರ್ಯದ ವಿಷಯದಲ್ಲಿಯೂ ಸಹ ನಾವು, ನಮ್ಮ ಮುಂದಿರುವ ಸವಾಲುಗಳನ್ನು ಸಮರ್ಥವಾಗಿ, ಧೈರ್ಯದಿಂದ,

ಬಲದಿಂದ ಮತ್ತು ದೂರದೃಷ್ಟಿಯಿಂದ ಎದುರಿಸದೇ, ರಾಜಿ ಮಾಡಿಕೊಳ್ಳುವುದಿಲ್ಲ ಎಂದು ನನಗೆ ಅನಿಸುತ್ತದೆ. ಈ ಎಲ್ಲ ತೊಂದರೆಗಳನ್ನು ನಿವಾರಿಸಿ ಮೇಲೆ ಬರಬೇಕಾದರೆ ಮತ್ತು ರಾಷ್ಟ್ರವು, ಐಕ್ಯವನ್ನು ಮತ್ತು ಯಾವುದಕ್ಕಾಗಿ ಹೋರಾಡಲಾಗಿತ್ತೋ ಆ ಸ್ವಾತಂತ್ರ್ಯದ ಮಹಾನ್ ಆದರ್ಶಗಳನ್ನು ಈಡೇರಿಸಬೇಕಾದರೆ, ನವಚೈತನ್ಯ ಶಕ್ತಿಯಿಂದ ಹಾಗೂ ಹೊಸ ರೂಪದಿಂದ ನಾವು ಸಜ್ಜಾಗಿರುವುದು ಇಂದಿನ ಅಗತ್ಯವಾಗಿದೆ. ಇವು, ಕಷ್ಟದ ದಿನಗಳಾಗಿವೆ. ಎಲ್ಲೆಡೆಯಲ್ಲಿ ಭ್ರಮೆಗಳಿಂದ ಆವೃತ್ತವಾಗಿದೆ. ನಮ್ಮ ಮನಸ್ಸಿನ ಮೇಲೆ ಮಿಥ್ಯಾಕಲ್ಪನೆಗಳ ಆಕ್ರಮಣ ನಡೆದಿದೆ. ಜಗತ್ತಿನಲ್ಲಿ ತಪ್ಪು ತಿಳಿವಳಿಕೆ, ಸಂಶಯ ಹಾಗೂ ಅವಿಶ್ವಾಸ ತುಂಬಿವೆ. ಈ ಕಷ್ಟದ ದಿನಗಳಲ್ಲಿ ನಾವು ಯಾವ ಧ್ವಜದ ಅಡಿಯಲ್ಲಿ ಹೋರಾಟ ನಡೆಸಬೇಕೆಂಬುದು ನಮ್ಮನ್ನೇ ಅವಲಂಬಿಸಿದೆ. ನಾವು ಈಗ ಸೂರ್ಯಕಿರಣಗಳ ಬೆಳಕಿನ ಪ್ರಕಾಶದ ಮಧ್ಯ ನಿಂತಿದ್ದೇವೆ. ಬಿಳಿ ಬಣ್ಣದ ಅರ್ಥ ಬೆಳಕಿನ ಮಾರ್ಗ. ಕೆಲವು ಜನ ಹೇಳುವಂತೆ, ಈ ಮಧ್ಯಾಹ್ನದಲ್ಲಿಯೂ ಕತ್ತಲೆ ಇದೆ. ಆದರೆ, ಈ ಕತ್ತಲೆಯ ಕಾರ್ಮೋಡಗಳನ್ನು ದೂರ ಸರಿಸಿ ನಮ್ಮ ನಡತೆಯನ್ನು, ಶುಭ್ರ ಬೆಳಕಿನ, ಜ್ಞಾನದ ದ್ಯೋತಕವಾಗಿರುವ ಪಾರದರ್ಶಕ ಸರಳತೆಯ ಆದರ್ಶಗಳ ಬೆಳಕಿನಲ್ಲಿ ಹಾಗೂ ಸತ್ಯದ ಬೆಳಕಿನಲ್ಲಿ ನಿಯಂತ್ರಿಸಿಕೊಳ್ಳಬೇಕಾಗಿದೆ.

ಸತ್ಯಮಾರ್ಗದಲ್ಲಿ ನಾವು ಮುನ್ನಡೆಯದಿದ್ದರೆ, ನಾವು ಪರಿಶುದ್ಧತೆಯನ್ನು ಪಡೆಯಲಾಗುವುದಿಲ್ಲ. ಸತ್ಯದ ಗುರಿಯನ್ನು ಸಾಧಿಸಲಾಗುವುದಿಲ್ಲ. ಅಶೋಕ ಚಕ್ರವು, ನ್ಯಾಯದ ಚಕ್ರ, ಧರ್ಮದ ಚಕ್ರ ಎಂಬುದರ ಸಂಕೇತವಾಗಿದೆ. ಸತ್ಯವನ್ನು ಧರ್ಮಮಾರ್ಗದಿಂದ ಅನುಸರಿಸುವುದರಿಂದ ಹಾಗೂ ಸತ್ಯ ಆಚರಣೆಯಿಂದ ಮಾತ್ರವೇ ಪಡೆಯಬಹುದು. ಸತ್ಯ, ಧರ್ಮ, ಶೀಲ ಇವು, ಈ ಧ್ವಜದ ಅಡಿಯಲ್ಲಿ ಕಾರ್ಯನಿರ್ವಹಿಸುವವರಿಗೆ ನಿಯಂತ್ರಕ ತತ್ತ್ವಗಳು. ಧರ್ಮ ಎಂಬುದು ನಿರಂತರವಾಗಿ ಹರಿಯುತ್ತಿರುವ ನೀರು ಎಂಬುದನ್ನು ತಿಳಿಸುತ್ತದೆ. ಈ ದೇಶವು ಇತ್ತೀಚಿನ ವರ್ಷಗಳಲ್ಲಿ ಸಂಕಷ್ಟಕ್ಕೊಳಗಾಗಿದ್ದರೆ, ಅದು ಬದಲಾವಣೆಗೆ ವಿರೋಧ ಒಡ್ಡಿದ್ದರಿಂದಲೇ ಎಂದು ಹೇಳಬಹುದು. ಅನೇಕ ಅಡ್ಡಿ ಆತಂಕಗಳ ಸವಾಲುಗಳು ನಮ್ಮ ಮುಂದೆ ಬಂದಿವೆ ಹಾಗೂ ಕಾಲದೊಂದಿಗೆ ಮುನ್ನಡೆಯಲು ಧೈರ್ಯ ಹಾಗೂ ಸಾಮರ್ಥ್ಯ ನಮಗೆ ಇರದಿದ್ದರೆ, ನಾವು ಹಿಂದೆ ಬೀಳುತ್ತೇವೆ. ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆಗಳಂಥ ದುಷ್ಟ ಪದ್ಧತಿಗಳು ಬಹಳ ಕಾಲದಿಂದ ಪ್ರಭಾವ ಬೀರುತ್ತಾ ಬಂದಿವೆ. ಈ ಪದ್ಧತಿಗಳನ್ನು ತೊಡೆದುಹಾಕುವ ಹೊರತು, ನಾವು ಸತ್ಯದ ಮಾರ್ಗದಲ್ಲಿ ನಡೆಯುತ್ತೇವೆ ಎಂದಾಗಲೀ ಅಥವಾ ಶೀಲಸಂಪನ್ನರಾಗಿದ್ದೇವೆ ಎಂದಾಗಲೀ ಹೇಳಲಾಗುವುದಿಲ್ಲ. ತಿರುಗುತ್ತಿರುವ ಚಕ್ರವು, ಇದು ನಿರಂತರವಾಗಿ ಪರಿಭ್ರಮಣ ಮಾಡುವ ಚಕ್ರ, ಸ್ಥಗಿತವಾಗಿರುವುದೆಂದರೆ ಅದು ಮರಣವೆಂದು ಇದು ಸೂಚಿಸುತ್ತದೆ. ಚಲನೆಯಲ್ಲಿ ಜೀವಂತಿಕೆ ಇದೆ. ನಮ್ಮ ಧರ್ಮವು ಸನಾತನಧರ್ಮ, ನಿತ್ಯಧರ್ಮ, ಕಾಲ ನಿಗದಿತ ಠೇವಣಿ ಎಂಬ ಅರ್ಥದಲ್ಲಿ ಅಲ್ಲ. ಆದರೆ, ನಿರಂತರವಾಗಿ ಬದಲಾಗುತ್ತಿರುವ ಎಂಬ ಅರ್ಥದಲ್ಲಿ ತಿಳಿದುಕೊಳ್ಳಬೇಕು. ಅದರ ಸನಾತನ ಸ್ವರೂಪದಲ್ಲಿ, ಚಲನಶೀಲ ಸ್ವರೂಪದಲ್ಲಿ ಅವಿಚ್ಛಿನ್ನವಾಗಿರುವುದು ಎಂದು ಅರ್ಥ. ಆದ್ದರಿಂದ, ನಮ್ಮ ಸಾಮಾಜಿಕ ಪರಿಸ್ಥಿತಿಗೆ ಸಂಬಂಧಿಸಿದಂತೆಯೂ ಮುಂದೆ ಮುಂದೆ ಸಾಗುವುದು ಅತ್ಯಾವಶ್ಯಕ.

ಕೆಂಪು, ಕೇಸರಿ, ಭಗವಾ ಬಣ್ಣವು, ತ್ಯಾಗದ ಮನೋಭಾವವನ್ನು ಸೂಚಿಸುತ್ತದೆ. ಅದನ್ನೇ ಹೀಗೆ ಹೇಳಲಾಗಿದೆ.

*(ಸರ್ವೇ ತ್ಯಾಗೇ ರಾಜಧರ್ಮೇಶು ದೃಷ್ಟಾ)*

ಎಲ್ಲ ಬಗೆಯ ತ್ಯಾಗಗಳು ರಾಜಧರ್ಮದಲ್ಲಿ ಸೇರಿಕೊಂಡಿವೆ. ತತ್ತ್ವಜ್ಞಾನಿಗಳೇ ರಾಜರಾಗಿರಬೇಕು. ನಮ್ಮ ನೇತಾರರು ಅನಾಸಕ್ತರಾಗಿರಬೇಕು. ಅವರು ತಮ್ಮನ್ನು ಆಧ್ಯಾತ್ಮಿಕ ವಿಷಯಗಳಿಗೆ ಸಮರ್ಪಿಸಿಕೊಂಡಿರಬೇಕು. ನಮ್ಮ ಚರಿತ್ರೆಯ ಕಾಲದಿಂದಲೂ ತ್ಯಾಗದ ಮನೋಭಾವವನ್ನು ಬೋಧಿಸಿದೆ. ಆ ಕೇಸರಿ ಬಣ್ಣದಿಂದ ಪ್ರೇರಣೆಯನ್ನು ಅವರು ಪಡೆದಿರಬೇಕು. ಆದರೆ, ಶಾಂತಿ ಸೌಜನ್ಯಕ್ಕೆ ಹಾಗೂ ವಿನಯಕ್ಕೆ, ಸಮರ್ಪಣ ಭಾವನೆಗಳೇ

ಆಧಾರ. ನಿರ್ಲಿಪ್ತತೆಯ ಆ ಮನೋಭಾವ, ತ್ಯಾಗದ ಆ ಮನೋಭಾವ, ಇವು ಕೇಸರಿ ಬಣ್ಣದ ಮೂಲಕ ಪ್ರತಿಬಿಂಬಿತವಾಗಿವೆ ಹಾಗೂ ಮಹಾತ್ಮ ಗಾಂಧಿಯವರು ಇವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರಿಂದ ಕಾಂಗ್ರೆಸ್ ಅವರ ಮಾರ್ಗದರ್ಶನದಲ್ಲಿ ಅವರ ಸಂದೇಶದ ಪ್ರಕಾರ ಕಾರ್ಯನಿರ್ವಹಿಸುತ್ತದೆ. ಈ ಕಷ್ಟದ ದಿನಗಳಲ್ಲಿ ನಾವು ತ್ಯಾಗಮನೋಭಾವದಿಂದ ಪ್ರೇರಿತವಾಗದಿದ್ದರೆ ಮತ್ತೆ ನಾವು ಕೆಳಕ್ಕೆ ಇಳಿಯುತ್ತೇವೆ.

ಅದರಲ್ಲಿರುವ ಹಸಿರು ಬಣ್ಣವು, ಈ ಭೂಮಿಯೊಂದಿಗೆ ನಮ್ಮ ಸಂಬಂಧ, ಎಲ್ಲ ಜೀವಗಳಿಗೆ ಆಧಾರವಾಗಿರದ ಸಸ್ಯ ಸಂಕುಲದೊಡನೆ ನಮ್ಮ ಸಂಬಂಧ–ಇವುಗಳ ದ್ಯೋತಕವಾಗಿದೆ. ಈ ಹಸಿರು ಭೂಮಿಯ ಮೇಲೆ ನಮ್ಮ ಆನಂದದ ರಾಜ್ಯ ಕಟ್ಟಬೇಕಾಗಿದೆ. ನಾವು ಈ ಮಹತ್ಕಾರ್ಯದಲ್ಲಿ ಯಶಸ್ವಿಯಾಗಬೇಕಾದರೆ, ನಮಗೆ ಸತ್ಯದ ಮಾರ್ಗದರ್ಶನ (ಬಿಳಿಬಣ್ಣ), ಸನ್ನಡತೆ (ಶೀಲ) ಆಚರಣೆ (ಚಕ್ರ), ಸಂಯಮ ಹಾಗೂ ತ್ಯಾಗದ ಮಾರ್ಗಗಳನ್ನು (ಕೇಸರಿ) ಅಳವಡಿಸಿಕೊಳ್ಳಬೇಕು. ಈ ಧ್ವಜವು, "ನಿರಂತರವಾಗಿ ಎಚ್ಚರದಿಂದ ಇರಬೇಕು. ನಿರಂತರ ಚಲನಶೀಲನಾಗಿರುವ, ಮುನ್ನಡೆಯುತ್ತಿರುವ, ಕ್ರೈಸ್ತ, ಸಿಖ್, ಮುಸಲ್ಮಾನ, ಹಿಂದೂ, ಬೌದ್ಧ ಇವರೆಲ್ಲರಿಗೂ ಸುರಕ್ಷಿತ ಆಶ್ರಯ ನೀಡುವಂಥ, ಮುಕ್ತ, ನಮ್ಯ, ಸಹಾನುಭೂತಿಯುಳ್ಳ, ಸಭ್ಯ, ಪ್ರಜಾಪ್ರಭುತ್ವ ಸಮಾಜಕ್ಕಾಗಿ ಕೆಲಸಮಾಡು" ಎಂಬ ಕರೆ ನೀಡುತ್ತದೆ.

ಧನ್ಯವಾದಗಳು (ಜೋರಾಗಿ ಹರ್ಷೋದ್ಗಾರ).

**ಡಾ. ಮೋಹನ್ ಸಿನ್ಹ ಮೆಹ್ತಾ** (ಉದಯಪುರ ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಮಹಾನ್ ನಾಯಕರು ಮಹತ್ತ್ವಪೂರ್ಣ ವಿಷಯ ಕುರಿತು ಮಾಡಿದ, ಅಸಾಧಾರಣ ಭಾಷಣವನ್ನೂ, ನಾನು ಕುಳಿತ ಸ್ಥಾನದಿಂದಲೇ ಕೇಳಿದ್ದೇನೆ. ನನ್ನ ಮನಸ್ಸಿನಲ್ಲಿ ಮೊದಲಿಗೆ ಬಂದ ವಿಚಾರವೆಂದರೆ, ಆ ವಿಷಯ ಕುರಿತು ಬೇರೆ ಯಾವ ಭಾಷಣಗಳನ್ನೂ ಮಾಡಬೇಕಾಗಿಲ್ಲ ಮತ್ತು ಹರ್ಷೋದ್ಗಾರಗಳಿಂದ ಸದನದ ಪ್ರತಿಯೊಂದು ವರ್ಗದವರು ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸತಕ್ಕದ್ದು. ಆದರೆ, ಹಾಗೆ ಮಾಡಲಾಗುವುದಿಲ್ಲ ಹಾಗೂ ಅನೇಕ ಸದಸ್ಯರಿಗೆ ಭಾಷಣಗಳನ್ನು ಮಾಡಲಾಗಿದ್ದರೂ ಹಾಗೂ ಸುದೈವಶಾತ್ ಯಾವುದೇ ತಿದ್ದುಪಡಿಯನ್ನು ಪರಿಗಣಿಸಲಿಲ್ಲ–ನಾನು ಈ ನಿರ್ಣಯವನ್ನು ಬೆಂಬಲಿಸಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಮಾನ್ಯರೆ, ನಮ್ಮ ಮುಂದಿಟ್ಟಿರುವ ಪ್ರಸ್ತಾವಕ್ಕೆ, ಭಾರತೀಯ ರಾಜ್ಯಗಳೂ (ಸಂಸ್ಥಾನಗಳು) ಬೆಂಬಲ ನೀಡಿವೆ ಎಂದು ಹೇಳಲು ಇಚ್ಛಿಸುತ್ತೇನೆ. (ಹರ್ಷೋದ್ಗಾರ) ನಮ್ಮ ಪ್ರತಿನಿಧಿಗಳ ಪೈಕಿ ಮುಖ್ಯರಾದ ಒಬ್ಬರು ಪಂಡಿತ್ ಜವಾಹರಲಾಲ್ ನೆಹರು ಅವರ ಮೂಲಕ, ನಿಮ್ಮ ಮುಂದಿಟ್ಟಿರುವ ಸಮಿತಿಯ ಪ್ರಸ್ತಾವ ಕುರಿತು ನಡೆದ ಚರ್ಚೆಗಳಲ್ಲಿ ಭಾಗವಹಿಸಿದ್ದರು.

ಮಾನ್ಯರೆ, ಸ್ವತಂತ್ರ ಭಾರತವು ರಾಷ್ಟ್ರಧ್ವಜವನ್ನು ಅಂಗೀಕರಿಸುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ, ಭಾರತೀಯ ರಾಜ್ಯಗಳ ಪೈಕಿ ಬಹಳಷ್ಟು ರಾಜ್ಯಗಳು ಭಾರತದ ಅವಿಭಾಜ್ಯ ಅಂಗವಾಗಿ ಭಾರತದಲ್ಲಿಯೇ ಇವೆ ಹಾಗೂ ಉಳಿಯುತ್ತವೆ (ಹರ್ಷೋದ್ಗಾರ).

ಮಾನ್ಯರೆ, ಪಂಡಿತ್ ನೆಹರು ಅವರ ಭಾಷಣವನ್ನು ಕೇಳುತ್ತಿದ್ದಾಗ, ಅವರು ಮಂಡಿಸುತ್ತಿರುವ ನಿರ್ಣಯದ ವಿಷಯವನ್ನು ಸಾಂಕೇತಿಕ ರೂಪದಲ್ಲಿ ಹೇಗೆ ನಿರೂಪಿಸಿದ್ದಾರೆಂದರೆ, ನನ್ನ ದೃಷ್ಟಿಯಲ್ಲಿ, ನಾಲ್ಕು ಗೋಡೆಗಳ ಕತ್ತಲೇ ಇರುವ ಈ ಕೊಠಡಿಯಲ್ಲಿ ಪ್ರಕಾಶಮಾನವಾದ ಶುಭ್ರಬಿಳಿ ಬಣ್ಣ ಎದ್ದು ಕಾಣುವಂತೆ ನಿರೂಪಿಸಿದ್ದಾರೆಂದು ನನಗೆ ಅನಿಸುತ್ತದೆ. ನಾವು ಹೇಳುವುದಿಷ್ಟೇ ನೆಹರು ಅವರನ್ನು ತಿಳಿದುಕೊಳ್ಳುವುದೆಂದರೆ, ಈ ನಿರ್ಣಯದ ವಿಷಯದ ಮಹತ್ತ್ವವನ್ನು ಅವರ ವ್ಯಕ್ತಿತ್ವವೇ ಪ್ರತಿಬಿಂಬಿಸುತ್ತದೆ ಎಂದು ಹೇಳಿದರೆ, ಅದು ಅತಿಶಯೋಕ್ತಿಯಾಗುವುದಿಲ್ಲವೆಂಬ ಖಾತ್ರಿ ನನಗಿದೆ.

ಮಾನ್ಯರೆ, ಧ್ವಜದಲ್ಲಿ ಅಡಕವಾಗಿರುವ ವಿಷಯಗಳನ್ನು ಹಾಗೂ ಅದರ ವಿನ್ಯಾಸವನ್ನು, ಅದರಲ್ಲಿಯೂ ಮುಖ್ಯವಾಗಿ, ಅಶೋಕ ಸ್ತಂಭದಲ್ಲಿರುವ 'ಚಕ್ರ'ದ ಬಗ್ಗೆ ವಿವರಿಸುತ್ತಿರುವಾಗ, ಭಾರತೀಯ ರಾಜ್ಯಗಳು (ದೇಶೀಯ ಸಂಸ್ಥಾನಗಳು) ಭಾರತದ ಒಕ್ಕೂಟದಲ್ಲಿ ವಿಲೀನಗೊಳ್ಳುವುದನ್ನು ಸಾಂಕೇತಿಕಗೊಳಿಸುವುದರ ಬಗ್ಗೆ ಉಲ್ಲೇಖಿಸುತ್ತಾರೆಂದು ನಾನು ಭಾವಿಸಿದ್ದೆ. ಮಾನ್ಯರೆ, ಬಹುದೀರ್ಘ ಕಾಲದ ಅನಂತರ, ಮೊದಲ ಸಲವಾಗಿ, ಭಾರತವು, ಭಾರತಕ್ಕಾಗಿ ಭಾರತೀಯರಿಂದ ಆಡಳಿತ ನಡೆಸುತ್ತದೆ. ಪಂಡಿತ್ ನೆಹರು ಇದನ್ನು ಸಹ ಸಾಂಕೇತಿಕಗೊಳಿಸಿದ್ದಾರೆ–ಇದು ಸ್ವಯಂ ಆಳ್ವಿಕೆಯ ಸಂಕೇತವೂ ಆಗಿದೆ. ಆದರೆ, ಭಾರತೀಯ ರಾಜ್ಯಗಳ (ರಾಜರ) ನಿರ್ವಹಣೆಯಲ್ಲಿರುವ ಭಾರತದ ಬಹುದೊಡ್ಡ ಭೂಭಾಗಕ್ಕೆ ಭೂಪಟದಲ್ಲಿ ಹಳದಿ ಬಣ್ಣ ಲೇಪಿಸಿರುವುದು ಸ್ವಯಂ ಆಳ್ವಿಕೆಯ ಆದರ್ಶವಾದ ಸಂಕೇತವಾಗಿದೆ ಎಂದು ನಾನು ಹೇಳಿರುವುದರಲ್ಲಿ ತಪ್ಪಾಗಿದ್ದರೆ, ದಯವಿಟ್ಟು ಕ್ಷಮಿಸಿರಿ, ದಯವಿಟ್ಟು ಈ ಹೇಳಿಕೆಯನ್ನು ರಾಜಕೀಯ ತತ್ತ್ವಗಳ ಆಧಾರದ ಮೇಲೆ ವಿಶ್ಲೇಷಿಸಬಾರದು. ನಾವು ಭಾರತದ ಧ್ವಜವನ್ನು ಕುರಿತು ಚರ್ಚಿಸುವಾಗ, ಅಮೂರ್ತ ತತ್ತ್ವಗಳನ್ನಾಗಲೀ ಅಥವಾ ರಾಜಕೀಯ ವಿಚಾರಗಳನ್ನಾಗಲೀ ಚರ್ಚಿಸುತ್ತಿಲ್ಲ. ಆದರೆ, ಮೂಲತಃ ಸಾಂಕೇತಿಕ ಸ್ವರೂಪದ್ದಾಗಿರುವ, ವಿಷಯಗಳನ್ನು, ಭಾವನಾತ್ಮಕ ವಿಷಯಗಳನ್ನು ಚರ್ಚಿಸುತ್ತೇವೆ. ಅಶೋಕ ಚಕ್ರ, ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುತ್ತದೆ ಎಂದು ನಾನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಅಶೋಕನ ಕಾಲದಿಂದ, ಮಹಾನ್ ದೇಶವು, ಭಾರತೀಯ ರಾಜರ ಆಡಳಿತದಲ್ಲಿರಲಿಲ್ಲವೇ? ಭಾರತೀಯರಿಗಾಗಿ ಭಾರತೀಯರಿಂದ ಆಳ್ವಿಕೆ ನಡೆಸಲಿಲ್ಲವೇ? ಯಾವುದೇ ರೀತಿಯಲ್ಲಿ, ನಮ್ಮಲ್ಲಿ ಕೆಲವರು, ಆ ಭಾವನಾತ್ಮಕತೆಯಿಂದ ಅದನ್ನು ನೋಡಲು ಇಚ್ಛಿಸುತ್ತಾರೆ. ಆದ್ದರಿಂದ, ನಾನು ನನ್ನ ಪರವಾಗಿ ಅಷ್ಟೇ ಈ ಮಾತು ಹೇಳುತ್ತಿಲ್ಲ. ಭಾರತೀಯ ರಾಜ್ಯಗಳ ಪರವಾಗಿ ಹೇಳುತ್ತಿದ್ದೇನೆ. ನಾನು ಅವರೊಡನೆ ಸಮಾಲೋಚನೆ ನಡೆಸಿಲ್ಲ. ಆದರೆ, ಈ ಧ್ವಜವು ಭಾರತದಲ್ಲಿ ಯಾವುದೇ ಕಟ್ಟಡದ ಮೇಲೆ ಹಾರಾಡುತ್ತಿರಲಿ ಅಥವಾ ಸಾಗರದಲ್ಲಿ ವಿದೇಶಗಳಿಗೆ ಸಂಚರಿಸುವ ಹಡಗುಗಳ ಮೇಲೆ ಹಾರಾಡುತ್ತಿರಲಿ, ಇದು ಒಕ್ಕೂಟ ಭಾರತದ ಯಾವುದೇ ಪೂಜಾ ಸ್ಥಳಕ್ಕೆ ನಾವು ಹೋಗುತ್ತಿರಲಿ, ನಮ್ಮ ಹೆಸರು ಬೇರೆ ಬೇರೆಯಾಗಿರಲಿ ನಾವೆಲ್ಲರೂ ಭಾರತೀಯರು ಹಾಗೂ ಈ ಧ್ವಜ ನಮ್ಮದು ಎಂಬ ಏಕೈಕ ಭಾವನಾತ್ಮಕತೆಯನ್ನು ಪ್ರತಿನಿಧಿಸುವ ಧ್ವಜವಾಗಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಎಂಬ ಭರವಸೆ ನನಗಿದೆ.

ಮಾನ್ಯರೆ, ಹೃತ್ಪೂರ್ವಕವಾಗಿ ನಾನು ಈ ನಿರ್ಣಯವನ್ನು ಬೆಂಬಲಿಸುತ್ತೇನೆ.

**ಶ್ರೀ ಮಹಮ್ಮದ್ ಷರೀಫ್** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಭಾರತದ ರಾಷ್ಟ್ರಧ್ವಜದ ಪ್ರಶ್ನೆಯನ್ನು ಪರಿಗಣಿಸುವುದಕ್ಕಾಗಿ, ಪಂಡಿತ್ ಜವಾಹರಲಾಲ್ ನೆಹರು ಮಂಡಿಸಿದ ನಿರ್ಣಯದ ಬಗ್ಗೆ ಕೆಲವರು ವಿರೋಧ ವ್ಯಕ್ತಪಡಿಸಿರುವುದನ್ನು ಗಮನಿಸಿ ಈ ಧ್ವಜದಲ್ಲಿರುವ ಬಣ್ಣಗಳಲ್ಲಿ ಸ್ವಲ್ಪ ವ್ಯತ್ಯಾಸಮಾಡಬೇಕೆಂದು ಕೆಲವು ಸದಸ್ಯರು ಸಲಹೆ ಮಾಡಿದ್ದಾರೆ. ಇನ್ನೂ ಕೆಲವರು ಹೀಗೆ ––––––––– (ಇಲ್ಲ–ಇಲ್ಲ ಎಂದು ಗೌರವಾನ್ವಿತ ಸದಸ್ಯರ ಧ್ವನಿ) ಆಗಲಿ ಒಳ್ಳೆಯದು.

ಈ ಮನವಿಯನ್ನು ಮುಂದಿಡುವುದಕ್ಕೆ ಈ ಕೆಲವು ಸದಸ್ಯರಿಗೆ ಪ್ರಚೋದನೆ ನೀಡಿದ ಉದ್ದೇಶವನ್ನು ಒಪ್ಪಿಕೊಳ್ಳಬಹುದಾದರೂ, ಈ ಧ್ವಜವು ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಈ ಧ್ವಜವು ಅತ್ಯುತ್ತಮವಾಗಿದೆ ಎನ್ನುವುದು ನನ್ನ ಅಭಿಪ್ರಾಯ ಹಾಗೂ ಪಂಡಿತ್ ಜವಾಹರಲಾಲ್ ನೆಹರು, ಈ ದಿನ ಬೆಳಗ್ಗೆ ಈ ನಿರ್ಣಯದ ಬಗ್ಗೆ ಹೇಳಿರುವುದನ್ನು ನಾನು ಬೆಂಬಲಿಸುತ್ತೇನೆ.

ಮಾನ್ಯರೆ, ಬಿಳಿ, ಕೇಸರಿ ಮತ್ತು ಹಸಿರು ಬಣ್ಣಗಳು ತ್ಯಾಗ, ಪರಿಶುಭ್ರತೆ ಅಥವಾ ಸಮರ್ಪಣಾ ಭಾವವನ್ನು ಸಾಂಕೇತಿಸುತ್ತವೆ. ಅವುಗಳಿಗೆ ಮಹಾನ್ ಆಧ್ಯಾತ್ಮಿಕ ಮಹತ್ತ್ವವಿದೆ. ಈ ಬಣ್ಣಗಳನ್ನು, ಎಲ್ಲ ಜನರೂ ಅವರು ಹಿಂದೂಗಳಾಗಿರಲಿ ಅಥವಾ ಮುಸ್ಲಿಮರಾಗಿರಲಿ, ಕ್ರೈಸ್ತರಾಗಿರಲಿ ಅಥವಾ ಪಾರಸಿಕರಾಗಿರಲಿ ಗೌರವಿಸಿ ಪೂಜಿಸುತ್ತಾರೆ. ಧ್ವಜದ ಮಧ್ಯದಲ್ಲಿರುವ ಚಕ್ರವು ಚಲನಶೀಲತೆ, ಪ್ರಗತಿ ಮತ್ತು ಮುನ್ನಡೆಯನ್ನು

ಹಾಗೂ ಸೌಂದರ್ಯದೃಷ್ಟಿಯನ್ನು ಹಾಗೂ ಇನ್ನಿತರ ಸಂಗತಿಗಳನ್ನು ಸಹ ಸಾಂಕೇತಿಸುತ್ತದೆ. ಇದು, ಭಾರತದ ಉದಾರತೆಗೆ, ಪರಂಪರೆಗೆ ಹಾಗೂ ಸಂಸ್ಕೃತಿಗೆ ಸರಿಹೊಂದುವಂಥದ್ದು ಆಗಿದೆ. ಚೌಧರಿ ಖಲಿಖುಜ್ಜಮಾನ್ ಹೇಳಿರುವಂತೆ ಈ ಧ್ವಜವು, ಭಾರತದಲ್ಲಿರುವ ಹಾಗೂ ಭಾರತೀಯನಾಗಿರುವ ಪ್ರತಿಯೊಬ್ಬರ ಗೌರವಕ್ಕೆ ಪಾತ್ರವಾಗಿದೆ. ಮಾನ್ಯರೆ, ಇಷ್ಟು ಹೇಳಿ, ಪಂಡಿತ್ ಜವಾಹರಲಾಲ್ ನೆಹರು ಅವರು ಪ್ರಸ್ತುತಪಡಿಸಿರುವ ಈ ನಿರ್ಣಯವನ್ನು ಬೆಂಬಲಿಸಲು ನನಗೆ ಬಹಳ ಸಂತೋಷವಾಗುತ್ತದೆ.

**ಶ್ರೀ ಸತ್ಯನಾರಾಯಣ ಸಿನ್ಹ** (ಬಿಹಾರ್ : ಸಾಮಾನ್ಯ) : ಮಾನ್ಯರೆ, ವಿಷಯವನ್ನು ಈಗ ಮತಕ್ಕೆ ಹಾಕಬಹುದು ಎಂದು ನಾನು ಸೂಚಿಸುತ್ತೇನೆ.

**ಗೌರವಾನ್ವಿತ ಸದಸ್ಯರು** : ಮತಕ್ಕೆ ಹಾಕಬಹುದು.

**ಮಾನ್ಯ ಸಭಾಧ್ಯಕ್ಷರು** : ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಮಾತನಾಡಬಯಸುತ್ತಾರೆ. ಈಗಾಗಲೇ ಇಲ್ಲಿ ಮಾತನಾಡಬಯಸಿದ ಅಂದಾಜು ಇಪ್ಪತ್ತೈದು ಸದಸ್ಯರ ಹೆಸರುಗಳು ನನ್ನ ಬಳಿ ಇವೆ. ಆದರೆ, ಈಗ ಮತ್ತಷ್ಟು ಚರ್ಚೆ ನಡೆಸುವ ಆವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಏಕೆಂದರೆ, ಸದಸ್ಯರು ಹೇಳಬೇಕಾದುದನ್ನೆಲ್ಲವನ್ನೂ ಹೇಳಿದ್ದಾರೆ ಹಾಗೂ ನಾವು ಕೇಳಿದ್ದೇವೆ. ಆದ್ದರಿಂದ ಮತಕ್ಕೆ ಹಾಕುವುದಕ್ಕೆ ಈ ಪ್ರಸ್ತಾವದ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಬಯಸುತ್ತೇನೆ.

**ಶ್ರೀ ತಾಜಮುಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಮಾನ್ಯರೆ, ಇಂಥ ಒಂದು ಸುಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಇಚ್ಛಿಸುವುದರಿಂದ ಚರ್ಚೆಯನ್ನು ಮುಕ್ತಾಯಗೊಳಿಸುವುದಕ್ಕೆ ಮೊದಲು, ಇನ್ನು ಕೆಲವರಿಗೆ ಮಾತನಾಡಲು ಅನುಮತಿ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಇದೊಂದು ಅವಿಸ್ಮರಣೀಯ ದಿನ, ತನ್ನ ಮನಸ್ಸಿನಲ್ಲಿದ್ದುದನ್ನು ಅಭಿವ್ಯಕ್ತಗೊಳಿಸುವುದಕ್ಕಾಗಿ, ಪ್ರತಿಯೊಬ್ಬರೂ ಇಚ್ಛಿಸುವುದರಿಂದ, ಅನುಮತಿ ನೀಡಬೇಕೆಂದು ಕೋರುತ್ತೇನೆ.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** (ಬಿಹಾರ್ : ಸಾಮಾನ್ಯ) : ಮಾನ್ಯರೆ, ರಾಷ್ಟ್ರಕ್ಕಾಗಿ ರಾಷ್ಟ್ರಧ್ವಜವನ್ನು ಪ್ರತಿ ದಿನ ಅಂಗೀಕರಿಸುವ ಅಗತ್ಯ ಇರುವುದಿಲ್ಲವಾದ್ದರಿಂದ, ಇನ್ನು ಕೆಲವು ಸದಸ್ಯರಿಗೆ ಮಾತನಾಡಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

**ಪಂಡಿತ ಗೋವಿಂದ ಮಾಳವೀಯ** (ಉತ್ತರ ಪ್ರದೇಶ : ಸಾಮಾನ್ಯ) : ಮಾನ್ಯರೆ, ಇಡೀ ದಿನವನ್ನು ಧ್ವಜ ದಿನಾಚರಣೆಯಾಗಿ ಆಚರಿಸೋಣ.

**ಮಾನ್ಯ ಸಭಾಧ್ಯಕ್ಷರು** : ನಿಮಗೆ ಇನ್ನೂ ಹೆಚ್ಚಿನ ಭಾಷಣಗಳು ಬೇಕಿಲ್ಲವೆಂದರೆ, ನಾನು ಇಲ್ಲಿಗೆ ನಿಲ್ಲಿಸುತ್ತೇನೆ. ಆದರೆ, ಸದಸ್ಯರಿಗೆ ಈ ಬಗ್ಗೆ ಮಾತನಾಡಲು ಅವಕಾಶ ಬೇಕೆನಿಸಿದರೆ, ನಾನು ಸೂಚನೆಗಳನ್ನು ಸ್ವೀಕರಿಸಿದ ಕ್ರಮದಲ್ಲೇ ಅವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ನಾವು ವೃದ್ಧ ಮಾತೆಯ ಮಾತು ಕೇಳಲು ಇಚ್ಛಿಸುತ್ತೇವೆ.

**ಶ್ರೀ ತಾಜಮುಲ್ ಹುಸೇನ್** : ನಾವು, 'ಬುಲ್-ಬುಲ್ ಹಿಂದ್' ಕೇಳಲು ಇಚ್ಛಿಸುತ್ತೇವೆ.

**ಮಾನ್ಯ ಸಭಾಧ್ಯಕ್ಷರು** : ನಾನು ಅವರನ್ನು (ಆಕೆಯನ್ನು) ಕೊನೆಯಲ್ಲಿ ಮಾತನಾಡಲು ಕರೆಯುತ್ತೇನೆ. ಅವರ ಭಾಷಣ ಕೇಳಲು ಅತ್ಯಂತ ಆಪ್ಯಾಯವಾಗಿರುತ್ತದೆ ಹಾಗೂ ನಮ್ಮ ಹಳೆಯ ಸಂಪ್ರದಾಯದಂತೆ, ಮುಕ್ತಾಯವು ಸಿಹಿಯಾಗಿರಬೇಕು (ಹರ್ಷೋದ್ಗಾರ).

ಶ್ರೀ ಸಾದುಲ್ಲಾ ಅವರು ಈಗ ಮಾತನಾಡಬಹುದು.

**ಶ್ರೀ ಸೈಯಿದ್ ಮೊಹಮ್ಮದ್ ಸಾದುಲ್ಲಾ** (ಅಸ್ಸಾಮ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಪಂಡಿತ್

ಜವಾಹರಲಾಲ್ ನೆಹರು ಅವರಂಥ ವಿದ್ವಾಂಸರೂ ಸಮರ್ಥರೂ ಆದ ಭಾಷಣಕಾರರು ಹಾಗೂ ಇನ್ನೂ ಅನೇಕ ಪ್ರತಿಷ್ಠಿತರು ಭಾಷಣಮಾಡಿರುವುದನ್ನು ಗಮನಿಸಿದರೆ, ನಾನು ಈ ಚರ್ಚೆಗಳಲ್ಲಿ ಮಧ್ಯೆ ಪ್ರವೇಶಿಸುವ ಅಗತ್ಯವೇ ಇಲ್ಲ. ನಮ್ಮ ಸ್ಥಾನಮಾನಗಳ ಬಗ್ಗೆ ಹೆಚ್ಚು ಸ್ಪಷ್ಟಪಡಿಸುವ ಉದ್ದೇಶದಿಂದ ನಿಮ್ಮ ಮುಂದೆ ನಿಂತಿದ್ದೇನೆ. ಈ ಸದನದಲ್ಲಿರುವ ಮುಸ್ಲಿಮ್ ಸದಸ್ಯರು, ನೀವು ಮೊದಲನೆಯ ದಿನವೇ, ಅವರಿಗೆ 'ಸ್ವಾಗತಮ್' ಎಂದು ಹೇಳಿದ್ದರೂ ಕೂಡ, ಕೆಲವು ಸದಸ್ಯರು, ಸಂದೇಹದಿಂದಲೇ ನೋಡುತ್ತಿದ್ದಾರೆ ಹಾಗೂ ನಾವು ಮಂಡಿಸಿರುವ ಕೆಲವು ವಿಚಾರಗಳನ್ನು ಹಿಂತೆಗೆದುಕೊಳ್ಳದಿದ್ದರೆ, ಈ ಮಹೋನ್ನತ ಸಭೆಯಲ್ಲಿ ಭಾಗವಹಿಸುವುದರಿಂದ ಹೊರಹಾಕುವಂತೆ ಪ್ರಯತ್ನಿಸಲಾಗುತ್ತಿದೆ. ಈ ಸಂವಿಧಾನ ರಚನಾಸಭೆಯಲ್ಲಿರುವ ಮುಸಲ್ಮಾನ ಸದಸ್ಯರು ಅನಾವಶ್ಯಕ ಎಂಬ ಹೇಳಿಕೆಗಳು ಕೆಲವು ಪತ್ರಿಕೆಗಳಲ್ಲಿ ಬಂದಿವೆ ಹಾಗೂ ಕೆಲವು ಪತ್ರಿಕೆಗಳಲ್ಲಿ, ಮುಸ್ಲಿಮ್ ಸದಸ್ಯರು ದೇಶದ್ರೋಹಿಗಳೆಂದೂ ಹಾಗೂ ಸಂವಿಧಾನದ ವಿಧ್ವಂಸಕರೆಂದೂ ಹೇಳುವಷ್ಟರ ಮಟ್ಟಿಗೆ ಹೋಗಿದ್ದಾರೆ. ಪಂಡಿತ್ ನೆಹರು ಅವರ ನಿರ್ಣಯವು, ಈ ಅಪವಾದಗಳನ್ನು ಅಲ್ಲಗಳೆಯುವುದಕ್ಕೆ ಹಾಗೂ ಅಪನಂಬಿಕೆಯನ್ನು ನಿವಾರಿಸುವುದಕ್ಕೆ ಅವಕಾಶಮಾಡಿಕೊಟ್ಟಿದೆ ಹಾಗೂ ನಿವಾಸ ಅಥವಾ ಜನ್ಮಸ್ಥಳದ ಆಕಸ್ಮಿಕತೆಯಿಂದಾಗಿ, ನಾವು ಭಾರತದ ಒಕ್ಕೂಟದಲ್ಲಿ ದೇಶನಿಷ್ಠೆಯನ್ನು ನಮ್ಮ ನಮ್ಮ ಮನೆಗಳಿಂದಲೇ ಘೋಷಿಸುವಂತಾಗಿದೆ. ಇಸ್ಲಾಮ್‌ನ ಆದೇಶವನ್ನು ಲೀಗ್‌ನ ಹೈಕಮಾಂಡ್ ಹಾಗೂ ನಾಯಕರ ಸೂಚನೆಗಳಿಗೆ ಒತ್ತು ಕೊಟ್ಟು, ನಾವು ಏನೇ ಆಗಿರಲಿ, ಒಳ್ಳೆಯವರಾಗಿರಬೇಕು ಮತ್ತು ಅಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರಕ್ಕೆ ನಿಷ್ಠೆಯಿಂದ ಇರಬೇಕು. ಈ ತತ್ತ್ವಗಳನ್ನು ಪಾಲಿಸಿ, ಪಂಡಿತ್ ನೆಹರು ಅವರು ಸದನಕ್ಕೆ ಸಮರ್ಪಿಸಿರುವ ಈ ಧ್ವಜಕ್ಕೆ ಗೌರವ ಸಲ್ಲಿಸುತ್ತೇನೆ.

ಈ ಧ್ವಜವು, ನಮ್ಮ ಆಶೋತ್ತರಗಳ ವಿಕಾಸವನ್ನು, ನಮ್ಮ ಹೋರಾಟಗಳ ಈಡೇರಿಕೆ ಹಾಗೂ ನಮ್ಮ ತ್ಯಾಗದ ಅಂತಿಮ ಫಲದ ದ್ಯೋತಕವಾಗಿದೆ ಎಂಬುದು ನನ್ನ ಅಭಿಪ್ರಾಯ. ನಿಸರ್ಗದ ಸಾದೃಶ್ಯವನ್ನು ಕೊಟ್ಟು ನನಗೆ ಹೇಳಲು ಅವಕಾಶ ಇರುವುದಾದರೆ, ಕೇಸರಿಯು ಪೃಥ್ವಿಯ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಭಾರತದ ಸೂರ್ಯನ ಉರಿಬಿಸಿಲಿನ ಶಾಖದಿಂದಾಗಿ ಸುಟ್ಟುಹೋಗಿರುವ ಪರಿಸ್ಥಿತಿಯನ್ನು ಸೂಚಿಸುತ್ತದೆ. ಸ್ಫಟಿಕದಂತೆ ಶುಭ್ರವಾದ ಮಳೆಹನಿಗಳು ಹಾಗೂ ಪರ್ವತ ಶಿಖರಗಳ ಮೇಲಿರುವ ಬಿಳಿಯ ಮಂಜುಗಡ್ಡೆಗಳಿಂದ ನದಿಗಳಿಂದ ಹರಿದು ಬರುವ ನೀರು ನಮ್ಮ ಭೂಮಿಗಳನ್ನು ಹಸಿರಿನಿಂದ ಕಂಗೊಳಿಸುವಂತೆ ಮಾಡಿದೆ. ಈ ಬೆಳೆಗಳೇ ನಮಗೆ ಶಕ್ತಿ ನೀಡಿ ಜನರ ಅಭಿವೃದ್ಧಿಗೆ ಕಾರಣ. ಅದೇ ರೀತಿಯಾಗಿ, ನಾವು ನಮ್ಮ ರಾಜಕೀಯ ಹೋರಾಟದಲ್ಲಿ ಬಳಲಿ ಬೆಂದ ದಿನಗಳ ಅನಂತರ ಈಗ ಆಶಾದಾಯಕ ದಿನಗಳನ್ನು ಕಂಡಿದ್ದೇನೆ ಹಾಗೂ ಈ ದಿನ, ಈ ಸದನದಲ್ಲಿ ಆರೋಹಣಮಾಡುತ್ತಿರುವ ಈ ಧ್ವಜವು, ನಮಗೆ ಉಚ್ಛ್ರಾಯ ಸ್ಥಿತಿಯನ್ನು, ನಮ್ಮ ಹೋರಾಟಗಳ ಆಕಾಂಕ್ಷೆಗಳನ್ನು ಈಡೇರಿಸಿದೆ. ಮಾನ್ಯರೆ, ಭಾರತದ ಈ ಧ್ವಜ ವಿವಿಧ ಬಣ್ಣಗಳನ್ನು ಪ್ರದರ್ಶಿಸುವುದರಿಂದ ಈ ಧ್ವಜವು ಈಗ ಇರುವಂತೆ ಇರಲಿ ಮತ್ತು ಪ್ರಸ್ತಾವಿತ ತಿದ್ದುಪಡಿಗಳನ್ನು ಮಂಡಿಸಿಲ್ಲದಿರುವುದರಿಂದ ನನಗೆ ಸಂತೋಷ ಎನಿಸುತ್ತದೆ. ಭಾರತವು ತನ್ನ ಆಧ್ಯಾತ್ಮಿಕ ಸಾಧನೆಗಳಿಗೆ ಎಲ್ಲರ ಗಮನ ಸೆಳೆದಿದೆ. ಭಾರತವು, ಜಗತ್ತಿನ ಬೇರೆ ಬೇರೆ ದೇಶಗಳಿಗೆ ಮಹಾನ್ ಆಧ್ಯಾತ್ಮಿಕ ಸಂದೇಶವನ್ನು ನೀಡಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕೇಸರಿ ಬಣ್ಣವು, ಹಿಂದೂಗಳಲ್ಲಿ ಅಷ್ಟೇ ಅಲ್ಲದೇ, ಮುಸ್ಲಿಮರಲ್ಲಿಯೂ ಆಧ್ಯಾತ್ಮಿಕ ಜೀವನ ನಡೆಸಿದ ಆ ಎಲ್ಲ ಜನರನ್ನು ಪ್ರತಿನಿಧಿಸುವ ಬಣ್ಣ. ಆದ್ದರಿಂದ ಕೇಸರಿ ಬಣ್ಣವು, ನಾವು ಸಾಧು-ಸಂತರ, ಪೀರ್‌ರ ಹಾಗೂ ಪಂಡಿತರ ನಾಡಾಗಿರುವ, ತ್ಯಾಗದ ಮಹೋನ್ನತ ಆದರ್ಶ ನಾಡು ಇದು ಎಂಬುದನ್ನು ನಮಗೆ ನೆನಪಿಸಿಕೊಡುತ್ತದೆ. ಆದ್ದರಿಂದ ನಾನು ಧ್ವಜದಲ್ಲಿ ಈ ಬಣ್ಣ ಇರುವುದನ್ನು ಸ್ವಾಗತಿಸುತ್ತೇನೆ.

ಇದಾದ ಮೇಲೆ ಬಿಳಿ ಬಣ್ಣ ಕುರಿತು ನಾನು ಹೇಳಬೇಕಾಗಿದೆ. ಬಿಳಿಬಣ್ಣವು ಹಿಂದೂಗಳಲ್ಲಿ ಹಾಗೂ

ಮುಸಲ್ಮಾನರಲ್ಲಿ ಪರಿಶುದ್ಧತೆಯ ಪ್ರತೀಕ. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಹೈ ಕಮಾಂಡ್, ತಮ್ಮ ನಂಬಿಕೆಯ ಚಿಹ್ನೆಯಾಗಿ ಬಿಳಿಯ ಟೊಪ್ಪಿಗೆಯನ್ನು ಇಟ್ಟುಕೊಂಡಿರುವುದು, ಈ ಕಲ್ಪನೆಯ ಸ್ಪಷ್ಟ ನಿರ್ಧಾರವಾಗಿದೆ ಎಂದು ಅಭಿನಂದಿಸುತ್ತೇನೆ. ಈ ಧ್ವಜದಲ್ಲಿರುವ ಬಿಳಿಯ ಪಟ್ಟಿಯು, ಈ ಧ್ವಜವನ್ನು ಎತ್ತಿ ಹಿಡಿದವರಿಗೆ ಕೇವಲ ಮಾತುಗಳಲ್ಲಷ್ಟೇ ಅಲ್ಲದೇ ಕೃತಿಗಳಲ್ಲಿಯೂ ಪರಿಶುದ್ಧರಾಗಿರಬೇಕೆಂಬುದನ್ನು ನೆನಪಿಸುತ್ತದೆ. ಪರಿಶುದ್ಧತೆಯು ನಮ್ಮ ಜೀವನದ ಧ್ಯೇಯವಾಗಿರಬೇಕು–ವೈಯಕ್ತಿಕವಾಗಿಯೂ ಒಂದು ರಾಷ್ಟ್ರಕ್ಕೆ ಅನ್ವಯವಾಗುವ ಮಾತಿದು.

ಕೊನೆಯದಾಗಿ, ಹಸಿರು ಬಣ್ಣವು, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಲಾಂಛನವಾಗಿತ್ತು ಎಂಬುದನ್ನು ನೆನಪಿಸುತ್ತದೆ. ೧೮೫೭ರಲ್ಲಿ ಬಹದ್ದೂರ್ ಷಾ ಹಾರಿಸಿದ್ದ ಧ್ವಜ ಹಸಿರು ಬಣ್ಣದ ಧ್ವಜ. ಆದರೆ, ನಮಗೆ, ಎಂದರೆ ಮುಸಲ್ಮಾನರಿಗೆ ಇದು ಭಾವನಾತ್ಮಕ ಅಥವಾ ಸಾಂಕೇತಿಕ ಮೌಲ್ಯ ಇವುಗಳಿಗಿಂತ ಮಿಗಿಲಾದುದೂ ಆಗಿದೆ. ಏಕೆಂದರೆ, ಮಹಾನ್ ಸಂತ ಅರೇಬಿಯಾ ಕಾಲದಿಂದಲೂ, ಎಂದರೆ ಹದಿಮೂರನೇ ಶತಮಾನದಷ್ಟು ಹಿಂದೆ, ಮುಸಲ್ಮಾನರ ಧ್ವಜದ ಬಣ್ಣ ಹಸಿರು. ಜನಸಮೂಹದ ಲಾಂಛನವಾಗಿದ್ದ ಚರಕದ ಬದಲಿಗೆ ಅಶೋಕನ ಧರ್ಮಚಕ್ರವನ್ನು ಅಳವಡಿಸಿದ್ದಕ್ಕೆ ಕೆಲವು ಆಕ್ಷೇಪ ಎತ್ತಿದ್ದರು. ಆದರೆ 'ಚರಕ'ದ ಬದಲು ಈ ಚಕ್ರವನ್ನು ಅಳವಡಿಸಿದ್ದುದು ನಿಜವಾಗಿಯೂ ಅಧಿಕಾರವುಳ್ಳ ವ್ಯಕ್ತಿಗಳ ಸ್ಫೂರ್ತಿಯಿಂದ ಜನ್ಮ ತಳೆದಿದೆ ಎಂದು ಭಾವಿಸಿದ್ದೇನೆ. 'ಚರಕ' ಇದು ಸ್ವ-ಸಹಾಯದ ಚಿಹ್ನೆಯಾಗಿದ್ದರೂ, ಸಾಮಾನ್ಯ ಜನಸಮೂಹದ ಬಗ್ಗೆ ನಮ್ಮ ಮನೋಭಾವದ ದ್ಯೋತಕವಾಗಿದ್ದರೂ ಹಾಗೂ ಮಹಾತ್ಮ ಗಾಂಧಿಯವರ ಸಂದೇಶದ ಮೂಲಕ ನಮ್ಮ ಚಟುವಟಿಕೆಗಳಲ್ಲಿ ಸೇರಿಕೊಂಡಿದ್ದರೂ, ತರುವಾಯದ ದಿನಗಳಲ್ಲಿ, ಚರಕದ ಆದರ್ಶಗಳನ್ನು ಕಲುಷಿತಗೊಳಿಸಲಾಯಿತು ಹಾಗೂ ಮಹಾತ್ಮ ಗಾಂಧಿಯವರ ಸಂದೇಶಗಳನ್ನು ಅಥವಾ ಸ್ಫೂರ್ತಿಯನ್ನು ಅಹಿಂಸೆಯ ದ್ಯೋತಕವಾಗಿದ್ದ ಚರಕವನ್ನು ಬಳಸುತ್ತಿದ್ದ ಜನರಿಂದ ವಿಮುಖಗೊಳಿಸಲಾಯಿತು ಹಾಗೂ ಅತ್ಯಂತ ಕ್ರೋಧಿತರಾಗಿದ್ದ ಆ ಜನರನ್ನು, ಒಂದು ಸಲ ಪಂಡಿತ್ ನೆಹರು ಅವರು ಸ್ವತಃ ಅಪಾಯವನ್ನು ಲೆಕ್ಕಿಸದೆ ಸಮಾಧಾನಪಡಿಸಿದ್ದರು. ಅಶೋಕನ ಧರ್ಮಚಕ್ರವು, ಭಾರತದ ಮಹಾನ್ ಬೌದ್ಧ ಚಕ್ರವರ್ತಿಯ ಕಾಲದಲ್ಲಿ, ಜನರ ಸ್ಥಿತಿಯನ್ನು ನೆನಪಿಸುತ್ತದೆ. ಅವನು ತನ್ನ ವೈಯಕ್ತಿಕ ರಾಜ್ಯ ಪ್ರವರ್ಧನೆಗಾಗಿ ಆಳ್ವಿಕೆ ನಡೆಸಲಿಲ್ಲ. ಆದರೆ ತನ್ನ ಆಧಿಪತ್ಯದಲ್ಲಿದ್ದ ಜನರ ಸಂತೃಪ್ತಿಗಾಗಿ, ಶಾಂತಿಗಾಗಿ ಹಾಗೂ ಅಭ್ಯುದಯಕ್ಕಾಗಿ ಆಳ್ವಿಕೆ ನಡೆಸಿದನು. ನಮ್ಮ ರಾಷ್ಟ್ರಧ್ವಜದಲ್ಲಿರುವ ಚಕ್ರದ ಲಾಂಛನವು, ಪ್ರತಿಯೊಬ್ಬ ಆಡಳಿತಗಾರನೂ ಹಾಗೂ ಭಾರತ ಒಕ್ಕೂಟದ ಪ್ರತಿಯೊಬ್ಬ ನಾಗರಿಕನೂ, ಹಿಂದಿನದನ್ನು ಮರೆತು, ಭವಿಷ್ಯದ ಕಡೆ ನೋಡಬೇಕೆಂದು, ಮಹಾನ್ ಬೌದ್ಧ ಚಕ್ರವರ್ತಿ ಅಶೋಕನ ಪರಂಪರೆಯನ್ನು ಪಾಲಿಸಬೇಕೆಂದು ನೆನಪಿಸುತ್ತದೆ ಹಾಗೂ ನಾವು ಕೇವಲ ಭೌತಿಕ ಅಭ್ಯುದಯ ಹೊಂದದೇ ನಮ್ಮ ಪಾರಮಾರ್ಥಿಕ ಚಿಂತನೆಗಳನ್ನು ಬೆಳಸಿಕೊಳ್ಳಬೇಕೆಂದು ಸದಾ ನೆನಪಿಸುತ್ತದೆ. ಈ ಚಕ್ರವು, ಧಾರ್ಮಿಕ ಲಾಂಛನ ಹಾಗೂ ನಮ್ಮ ಧಾರ್ಮಿಕ ಪರಿಸರದಿಂದ ನಮ್ಮ ಸಾಮಾಜಿಕ ಜೀವನವನ್ನು ಬೇರ್ಪಡಿಸುವಂತಿಲ್ಲ.

ಮಾನ್ಯರೆ, ನನ್ನ ಪರವಾಗಿ ಅಷ್ಟೇ ಅಲ್ಲದೇ ಮುಸ್ಲಿಮ್ ಲೀಗ್ ಪಾರ್ಟಿಯ ಉಪನಾಯಕನ ಪರವಾಗಿ ಸಹ ಇಷ್ಟು ಮಾತುಗಳನ್ನು ಹೇಳಿ, ಬಹುದೂರದಲ್ಲಿರುವ ಹಾಗೂ ಭಾರತ ಒಕ್ಕೂಟದಲ್ಲಿಯ ಅತ್ಯಂತ ಸಣ್ಣ ಪ್ರಾಂತವಾಗಿರುವ ಅಸ್ಸಾಮ್‌ನ ನಿವಾಸಿಯಾದ ನಾನು, ಭಾರತ ಸ್ವಾತಂತ್ರ್ಯದ ಚಿಹ್ನೆಯಾದ ಈ ಧ್ವಜಕ್ಕೆ ನನ್ನ ಗೌರವವನ್ನು ಅರ್ಪಿಸುತ್ತೇನೆ.

**ಡಾ. ಎಚ್.ಸಿ. ಮುಖರ್ಜಿ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಬಹಳ ದೀರ್ಘಕಾಲದಿಂದಲೂ ಭಾರತೀಯ ಕ್ರೈಸ್ತ ಸಮುದಾಯವು, ಮೂಲತಃ ಭಾರತೀಯ ಸಮುದಾಯವೇ ಆಗಿದೆ ಎಂಬುದು ವಾಸ್ತವ ಸಂಗತಿ. ಈ ಸಮುದಾಯದ ಪ್ರತಿಷ್ಠಿತ ಮುಖಂಡರು ಭಾರತದ ರಾಷ್ಟ್ರೀಯತೆಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ನೀವು ಅಂಥ ಗೌರವಾನ್ವಿತ ಹೆಸರುಗಳನ್ನು ಕೇಳಲು

ಇಚ್ಛಿಸುವುದಾದರೆ, ನಾನು ಅವರ ಹೆಸರುಗಳನ್ನು ನೆನಪಿಸುತ್ತೇನೆ. ಅವರಲ್ಲಿ, ದಿವಂಗತ ಕಾಕಾ ಬ್ಯಾಪ್ಟಿಸ್ಟ್, ಮುಂಬಯಿ, ದಿವಂಗತ ಕೆ.ಸಿ. ಬ್ಯಾನರ್ಜಿ, ಬಂಗಾಳ, ದಿವಂಗತ ಬಿಷಪ್, ಚಿದಂಬರಂ, ಸಂಯುಕ್ತ ಪ್ರಾಂತ್ಯಗಳು ಮತ್ತು ದಿವಂಗತ ಎಸ್.ಕೆ. ದತ್ತ, ಪಂಜಾಬ್. ನಾವು ಬಹುಕಾಲದಿಂದಲೂ ಭಾರತೀಯ ರಾಷ್ಟ್ರೀಯತೆಯೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಂಡಿದ್ದೇವೆ ಎಂಬುದನ್ನು ರುಜುವಾತುಪಡಿಸುವುದಕ್ಕಾಗಿ, ನಾನು ಉಲ್ಲೇಖಿಸುವ ಅನೇಕ ಹೆಸರುಗಳಲ್ಲಿ ಇವು ಕೇವಲ ಕೆಲವು ಮಾತ್ರ. ಒಂದು ದೃಷ್ಟಿಯಲ್ಲಿ ನಮ್ಮನ್ನು ತಪ್ಪಾಗಿ ತಿಳಿದುಕೊಳ್ಳಲಾಗಿದೆ. ನಾವು ಕ್ರೈಸ್ತ ಧರ್ಮವನ್ನು ಅನುಸರಿಸುತ್ತೇವೆ– ಅದರಲ್ಲೂ ವಿಶೇಷವಾಗಿ ಏಷ್ಯಾದ ಧರ್ಮವನ್ನು ಪಾಲಿಸುತ್ತೇವೆ– ಏಕೆಂದರೆ ವಿದೇಶಿ ಸಂಸ್ಥೆಗಳೊಂದಿಗೆ (ಮಿಷನ್) ಸಂಪರ್ಕ ಇಟ್ಟುಕೊಂಡಿದ್ದೇವೆ. ಆದ್ದರಿಂದ ಭಾರತೀಯ ಕ್ರೈಸ್ತ ಸಮುದಾಯವು ಕ್ರೈಸ್ತ ಮನೋಭಾವವುಳ್ಳದ್ದಾಗಿದೆ. ಆದರೆ, ಅದು ಹಾಗಲ್ಲ ಹಾಗೂ ಇದು ಸರಿಯಾದ ವಿಚಾರವಲ್ಲವೆಂದು ನಾನು ಇಲ್ಲಿಂದ ಹೇಳಬಯಸುತ್ತೇನೆ. ಇದೊಂದು ತಪ್ಪು ಕಲ್ಪನೆ ಮತ್ತು ಈ ದಿನ ನಾನು ನನ್ನ ಸಮುದಾಯದ ಪರವಾಗಿ, ಈ ಧ್ವಜಕ್ಕೆ ಇನ್ನೊಮ್ಮೆ ಗೌರವ ಸಮರ್ಪಿಸುತ್ತೇನೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಭಾರತೀಯ ಕ್ರಿಶ್ಚಿಯನ್ನರು ಕಾಂಗ್ರೆಸಿನೊಡನೆ ಅತ್ಯಂತ ನಿಕಟವರ್ತಿಗಳಾಗಿ ಕೂಡಿಕೊಂಡು ಕೆಲಸ ಮಾಡಿದ್ದಾರೆ. ಇದು ಮಹತ್ತ್ವದ್ದೆಂದು ನನಗೆ ಕಂಡುಬರುತ್ತದೆ ಹಾಗೂ ನಮ್ಮಲ್ಲಿ ಕೂಡಾ ಅನೇಕ ಜನ ಮುಖಂಡರು, ಭಾರತ ರಾಷ್ಟ್ರೀಯತೆಯ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ ಎಂಬ ಸಂಗತಿಯೇ ನನ್ನ ಸ್ನೇಹಿತರಿಗೆ ಒಂದು ಪ್ರಮಾಣಪತ್ರವಾಗುತ್ತದೆ ಎಂಬುದು ನಿಶ್ಚಿತ. ನಾವು ನಮ್ಮ ನಿಷ್ಠೆಯನ್ನು ಈ ಧ್ವಜಕ್ಕೆ ಸಮರ್ಪಿಸಿದ್ದೇವೆ. ಏಕೆಂದರೆ, ನಾವು ಭಾರತೀಯ ಕ್ರಿಶ್ಚಿಯನ್ನರಷ್ಟೇ ಆಗಿಲ್ಲ. ಆದರೆ, ಈ ಹಿಂದೆ ನಮ್ಮನ್ನು ಭಾರತೀಯ ಕಾಂಗ್ರೆಸ್ ಗೌರವದಿಂದ ನೋಡಿಕೊಂಡಿದೆ. ವಾಸ್ತವಿಕವಾಗಿ ಹೇಳುವುದಾದರೆ, ಧರ್ಮದ ದೃಷ್ಟಿಯಿಂದ ನಾವು ಯಾರೊಂದಿಗೆ ಸೇರಿಕೊಂಡಿದ್ದೇವೆಯೋ ಅವರಿಗಿಂತಲೂ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಚೆನ್ನಾಗಿ ಗೌರವದಿಂದ ನೋಡಿಕೊಂಡಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಫಾರ್‌ಮನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ನಡೆದ ಸಮಾರಂಭಕ್ಕೆ ಸಂಬಂಧಿಸಿದಂತೆ ಸ್ವಲ್ಪಮಟ್ಟಿಗೆ ಸೇವೆ ಸಲ್ಲಿಸುವಂತೆ ಡಾ. ಎಸ್.ಕೆ. ದತ್ತಾ ಅವರು ನನ್ನನ್ನು ಪಂಜಾಬಿಗೆ ಕರೆಸಿದ್ದಾಗ, ಎಂದರೆ, ೧೯೩೭ರಲ್ಲಿ ನಡೆದ ಒಂದು ಘಟನೆ ಕುರಿತು, ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ನೆನಪಿಸಲು ಈ ಒಂದು ಅವಕಾಶವನ್ನು ತೆಗೆದುಕೊಳ್ಳುತ್ತೇನೆ. ಆ ಸಮಯದಲ್ಲಿ ಅಹಮದಾಬಾದಿನಲ್ಲಿ ವಿಶ್ವವಿದ್ಯಾಲಯದ ಯೂನಿಯನ್ ಅವರು 'ಪಾನ ನಿರೋಧ' ಕುರಿತು, ನನಗೆ ಭಾಷಣ ಮಾಡಲು ವ್ಯವಸ್ಥೆ ಮಾಡಿದ್ದರು ಹಾಗೂ ಆ ವಿಷಯ ಕುರಿತು ಭಾಷಣ ಮಾಡುವಂತೆ ಒತ್ತಾಯಮಾಡಲಾಗಿತ್ತು. ಏಕೆಂದರೆ ಇದಕ್ಕೆ ಸ್ವಲ್ಪ ಮುಂಚೆ, ರಾಜಾಜಿಯವರ ಒತ್ತಾಯಕ್ಕೆ ಮದ್ರಾಸಿನ ಸೇಲಂಗೆ ಭೇಟಿ ನೀಡಬೇಕಾಗಿತ್ತು. ಪಂಡಿತ ಜವಾಹರಲಾಲ್ ನೆಹರು ಅವರು ಆ ಸಮಾರಂಭದ ಅಧ್ಯಕ್ಷತೆ ವಹಿಸಲು ಒಪ್ಪಿಕೊಂಡಿದ್ದರು. ಆದರೆ, ಯಾವ ವಿಷಯ ಕುರಿತು ನಾನು ಭಾಷಣ ಮಾಡಬೇಕೆಂಬುದು ಅವರಿಗೆ ಮರೆತುಹೋಗಿತ್ತು. ಅವರ ಮನವಿಯಂತೆ, ಅಲ್ಪಸಂಖ್ಯಾತರ ಪ್ರಶ್ನೆಗೆ ಸಂಬಂಧಿಸಿದಂತೆ ಪ್ರೇಕ್ಷಕರ ಮುಂದಿಡಬೇಕಾಗಿರುವ ನಮ್ಮ ಅಭಿಪ್ರಾಯಗಳ ಬಗ್ಗೆ ಅವರು ಕೇಳಿದಾಗ, ಅಲ್ಪಸಂಖ್ಯಾತರ ಕರ್ತವ್ಯಗಳ ಬಗ್ಗೆ ನಮ್ಮ ವಿಚಾರಗಳನ್ನು ಅವರಿಗೆ ಮೊದಲು ವಿವರಿಸಿದೆವು. ಅವರು ಇನ್ನರ್ಧ ಗಂಟೆಯೊಳಗೆ ದೆಹಲಿಗೆ ಹೋಗಬೇಕಾಗಿತ್ತು. ಆದರೆ, ಅವರು ಆ ಬಗ್ಗೆ ಎಲ್ಲವನ್ನು ಮರೆತುಬಿಟ್ಟಿದ್ದರಿಂದ ಟ್ರೇನ್ ತಪ್ಪಿಹೋಯಿತು. ನಾನು ಮಾತನಾಡಿದ ತರುವಾಯ ಪಂಡಿತ್ ಜವಾಹರಲಾಲ್ ನೆಹರು ಅವರೂ, ಈ ಸಮುದಾಯವು ಏನನ್ನು ಸಾಧಿಸಿದೆಯೋ, ಅದನ್ನು ರಾಷ್ಟ್ರೀಯ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ, ನೆನಪಿಸಿಕೊಳ್ಳುತ್ತದೆ ಎಂದು ಹೇಳಿದ್ದರು. ಇದಾದ ಮೇಲೆ ಮೂರು–ನಾಲ್ಕು ದಿನಗಳೊಳಗೆ, ಕೆಲವು ಗ್ರಾಮಗಳಲ್ಲಿ ಭಾರತೀಯ ಕ್ರಿಶ್ಚಿಯನ್‌ರಿಗೆ ಅನ್ಯಾಯವಾದ ಬಗ್ಗೆ ಕೆಲವು ಪ್ರಕರಣಗಳ ವರದಿಗಳು ನನಗೆ ಬಂದವು. ಆ

ಗ್ರಾಮಗಳಿಗೆ ಹೋಗಿ ವಿಚಾರಿಸಿದಾಗ, ಆರೋಪಗಳು ನಿಜವೆಂದು ಕಂಡುಬಂದಿತು. ನಾನು ಸಂಗ್ರಹಿಸಿದ್ದ ವಿಷಯಗಳನ್ನು ಪಂಡಿತ್ ಜವಾಹರಲಾಲ್ ನೆಹರು ಅವರ ಮುಂದಿಟ್ಟಾಗ, ಏಳು ದಿನಗಳೊಳಗೆ, ಸಮಗ್ರ ವಿಷಯಗಳನ್ನು ಇತ್ಯರ್ಥಗೊಳಿಸಲಾಯಿತು. ಆ ರೀತಿಯಾಗಿ ನಮ್ಮ ಧಾರ್ಮಿಕ ಸ್ವಾತಂತ್ರ್ಯವನ್ನು ಪುನಃ ನೆಲೆಗೊಳಿಸಲಾಯಿತು.

ನಾವು ಕೇಳಿದ ಕೂಡಲೇ ಕಾಂಗ್ರೆಸ್ ಪಕ್ಷವು ನಮಗೆ ಸಹಾಯಮಾಡಿದ್ದ ಇನ್ನೊಂದು ಅಂಥದೇ ಪ್ರಸಂಗವನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಾನು ಮದ್ರಾಸಿನಲ್ಲಿದ್ದಾಗ, ಸೈದಾಪೇಟೆಯಲ್ಲಿರುವ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರು 'ಮದ್ರಾಸ್ ಕಾಲೇಜ್ ಆಫ್ ಫಿಜಿಕಲ್ ಎಜುಕೇಷನ್‌ಗಾಗಿ' ಜಮೀನು ಪಡೆದುಕೊಳ್ಳುವಲ್ಲಿ ಬಹಳ ತೊಂದರೆಯಾಗುತ್ತಿದೆ ಎಂದು ನನಗೆ ಹೇಳಿದರು. ರಾಜಾಜಿಯವರು ಅಧಿಕಾರಕ್ಕೆ ಬಂದ ಕೂಡಲೇ ನಮಗೆ ಬೇಕಾಗಿದ್ದುದಕ್ಕಿಂತ ಹೆಚ್ಚಿಗೆ ಜಮೀನನ್ನು ಅತ್ಯಲ್ಪ ಅವಧಿಯಲ್ಲಿ ಮಂಜೂರು ಮಾಡಿದ್ದರು. ಇವೇ ನಾವು ಕಾಂಗ್ರೆಸಿನಿಂದ ಪಡೆದುಕೊಂಡ ಸೇವೆಗಳು. ಇದಕ್ಕೆ ಕಾರಣ ಕಾಂಗ್ರೆಸ್ಸಿನ ಸಹಾನುಭೂತಿ ನಮ್ಮ ಮೇಲೆ ಇತ್ತೆಂಬುದು ಅಲ್ಲ. ಆದರೆ, ನಮ್ಮ ಹಾಗೂ ಕಾಂಗ್ರೆಸ್ಸಿನ ನಡುವೆ ಸೌಹಾರ್ದ ಸಂಬಂಧ ಇರುವುದೇ ಕಾರಣ. ಭಾರತೀಯ ಕ್ರಿಶ್ಚಿಯನ್ನರು ರಾಷ್ಟ್ರಧ್ವಜಕ್ಕೆ ನಿಷ್ಠೆಯನ್ನು ಹೊಂದಿದ್ದಾರೆ ಎಂದು ಪುನಃ ಹೇಳಬಯಸುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ :** ಮಾನ್ಯ ಸಭಾಧ್ಯಕ್ಷರೆ, ಪ್ರಸ್ತಾವವನ್ನು ಮಂಡಿಸಿರುವ ಗೌರವಾನ್ವಿತ ಸದಸ್ಯರಾದ ಪಂಡಿತ್ ನೆಹರು ಈ ಪ್ರಸ್ತಾವವನ್ನು ಮಂಡಿಸುವುದಕ್ಕೆ ನನಗೆ ಅವಕಾಶ ದೊರಕಿರುವುದಕ್ಕೆ ಹಾಗೂ ಸದನಕ್ಕೆ ಈ ಧ್ವಜವನ್ನು ಸಮರ್ಪಿಸುವುದಕ್ಕೆ ನನಗೆ ಹೆಮ್ಮೆ ಎನಿಸುತ್ತದೆ ಎಂದು ಹೇಳಿದ್ದಾರೆ. ಮಾನ್ಯರೆ, ಇದು, ಈ ದಿನ ಗೌರವಾನ್ವಿತ ಪಂಡಿತ್ ನೆಹರು ಅವರಿಗೆ ಮಾತ್ರ ಹೆಮ್ಮೆ ಎನಿಸುತ್ತಿಲ್ಲ. ಆದರೆ, ಇಡೀ ರಾಷ್ಟ್ರವು ಧ್ವಜವನ್ನು ನೋಡಿದಾಗ, ಸ್ವಾತಂತ್ರ್ಯಕ್ಕಾಗಿ ಉಗ್ರ ಹೋರಾಟ ನಡೆಸಿದ ಜನರು, ಈ ವಿಜಯಕ್ಕೆ ಕಾರಣ, ರಾಷ್ಟ್ರಧ್ವಜವು ಇನ್ನು ಮುಂದೆ ಅಧಿಕೃತವಾಗಿ ಮಾನ್ಯತೆ ಪಡೆದ ಧ್ವಜವಾಗುತ್ತದೆ ಎಂಬುದು ಈ ಸಮಗ್ರ ರಾಷ್ಟ್ರಕ್ಕೆ ಹೆಮ್ಮೆಯ ವಿಷಯ. ನಮ್ಮ ಯುವಕರು, ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ತಮ್ಮ ತಮ್ಮ ಮನೆಗಳ ಮೇಲೆ ಹಾಗೂ ಸಾರ್ವಜನಿಕ ಕಟ್ಟಡಗಳ ಮೇಲೆ ಈ ಧ್ವಜವನ್ನು ಹಾರಿಸುತ್ತಿರುವಾಗ, ಬ್ರಿಟಿಷ್ ಆಡಳಿತಶಾಹಿಯು ಭಾರತದಲ್ಲಿ ಅದನ್ನು ಕೆಳಗಿಳಿಸಿ ತಮ್ಮ ಕಾಲ ಕೆಳಗೆ ಹಾಕಿ ತುಳಿದಿದ್ದಾರೆ. ಅದೇನೇ ಇರಲಿ, ನಮ್ಮ ಜನತೆ ಆ ಧ್ವಜವನ್ನು ಸ್ವೀಕರಿಸಿ, ಅದನ್ನು ಯಾವ ಕಟ್ಟಡಗಳಿಂದ ಕೆಳಗಿಳಿಸಲಾಗಿತ್ತೋ ಆ ಕಟ್ಟಡಗಳ ಮೇಲೆ ಪುನಃ ಹಾರಿಸಿದ್ದಾರೆ. ಹಾಗೆ ಮಾಡುವಾಗ, ಮಹಾತ್ಮ ಗಾಂಧಿಯವರು ಅಹಿಂಸಾತ್ಮಕ ಹೋರಾಟ ನಡೆಸುವಂತೆ ನಮಗೆ ನೀಡಿದ್ದ ತತ್ತ್ವವನ್ನು ತಪ್ಪದೇ ಪಾಲಿಸಿದ್ದಾರೆ. ಮಹಾತ್ಮ ಗಾಂಧಿಯವರು, ಅಹಿಂಸಾ ತತ್ತ್ವವನ್ನು, ಮಾತಿನಲ್ಲಿ ವಿಚಾರಗಳಲ್ಲಿ ಹಾಗೂ ಕೆಲಸ ಕಾರ್ಯಗಳಲ್ಲಿ ತರಬೇಕೆಂದು ನಮಗೆ ಆದೇಶಿಸಿದ್ದರು. ಮಾನ್ಯರೆ, ಮಾತಿನಲ್ಲಾಗಲೀ ಮತ್ತು ವಿಚಾರಗಳಲ್ಲಾಗಲೀ, ಈ ತತ್ತ್ವವನ್ನು ಪಾಲಿಸಲು ಸಾಧ್ಯವಾಗದಿದ್ದಾಗಲೂ, ಭಾರತದಲ್ಲಿ ಬ್ರಿಟಿಷ್ ಅಧಿಕಾರಶಾಹಿಗಳ ವಿರುದ್ಧ ಹೋರಾಟ ನಡೆಸಿದಾಗ ಅಹಿಂಸಾ ತತ್ತ್ವವನ್ನು ತಪ್ಪದೇ ಪಾಲಿಸಿದ ಲಕ್ಷ ಲಕ್ಷ ಭಾರತೀಯರಲ್ಲಿ ನಾನೂ ಒಬ್ಬ ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಈ ಅಹಿಂಸಾತ್ಮಕ ಹೋರಾಟದ ಮೂಲಕವೇ, ಈ ದಿನ ನಾವು, ನಮಗೆ ಬೇಕಾಗಿದ್ದ ವಿಜಯವನ್ನು ಸಾಧಿಸಿದ್ದೇವೆ. ಧ್ವಜ ಹಿಡಿದುಕೊಂಡು, ಜನಪ್ರಿಯ ಘೋಷಣೆಯಾದ ನಮ್ಮ "ರಾಷ್ಟ್ರಧ್ವಜ ಮೇಲೇರಲಿ, ಮೇಲೇರಲಿ, ಇಳಿಯಲಿ, ಇಳಿಯಲಿ ಯೂನಿಯನ್ ಜಾಕ್" ಎಂದು ಕೂಗುತ್ತಿದ್ದೆವು. ಇದರ ಅರ್ಥ ನಾವು ಯಾವುದೇ ರಾಷ್ಟ್ರಕ್ಕೆ ಅಪಮಾನ ಮಾಡಬೇಕೆಂದಲ್ಲ. ಆದರೆ, ಇಲ್ಲಿ ಬ್ರಿಟಿಷರ ಧ್ವಜಹಾರಿಸುವುದು ದಾಸ್ಯದ ಸಂಕೇತ ಎಂದು ನಾವು ಪರಿಗಣಿಸಿದ್ದೆವು. ಆಗಸ್ಟ್ ೧೫ರಂದು, ಈ ದಿನ ನಮಗೆ ಸಮರ್ಪಿಸಲಾಗಿರುವ ಧ್ವಜವನ್ನು ಈ ಮಹಾಸಭೆಯ ಕಟ್ಟಡದ ಮೇಲೆ, ಭವ್ಯವಾದ ಸಚಿವಾಲಯ ಕಟ್ಟಡಗಳ ಮೇಲೆ, ಅದೇ ರೀತಿಯಾಗಿ ಇನ್ನೂ ಅನೇಕ ಕಟ್ಟಡಗಳ ಮೇಲೆ

ಹಾರಿಸಲಾಗುವುದು ಮತ್ತು ವೈಸರಾಯ್ ಅವರ ವಸತಿಯ ಮೇಲೆಯೂ ಇದನ್ನು ಹಾರಿಸಬಹುದು (ಹರ್ಷೋದ್ಗಾರ) ಮತ್ತು ಯೂನಿಯನ್ ಜಾಕ್ ಧ್ವಜವನ್ನು ನಿಧಾನವಾಗಿ, ಗೌರವದಿಂದ ಕೆಳಗಿಳಿಸಲಾಗುವುದು. ಆ ದಿನ ಭಾರತದ ಎಲ್ಲೆಡೆಯಲ್ಲಿ ಈ ರಾಷ್ಟ್ರಧ್ವಜವನ್ನು ಹಾರಿಸಲಾಗುವುದು ಹಾಗೂ ಪ್ರತಿಯೊಬ್ಬರೂ ಇದಕ್ಕೆ ಗೌರವ ಸೂಚಿಸುವರು ಎಂಬುದರಲ್ಲಿ ಸಂದೇಹವೇ ಇಲ್ಲ.

ಮಾನ್ಯರೆ, ಪ್ರಥಮ ರಾಷ್ಟ್ರಧ್ವಜ ಎಂದರೆ, ಸ್ವರಾಜ್ ಧ್ವಜವನ್ನು ೧೯೧೧ರಲ್ಲಿ ಕಲಕತ್ತಾದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ, ಮಹಾನ್ ಕಾಂಗ್ರೆಸ್ ಅಧ್ಯಕ್ಷರೂ, ಭಾರತದ ಮಹಾದೇಶಭಕ್ತರೂ ಹಾಗೂ ರಾಷ್ಟ್ರೀಯ ಕಾಂಗ್ರೆಸ್ಸಿನ ಸಂಸ್ಥಾಪಕರಲ್ಲಿ ಒಬ್ಬರಾದ ಹಾಗೂ ಕಾಂಗ್ರೆಸ್ ಪಕ್ಷದ ರಚನೆಗಾಗಿ ಪ್ರಧಾನವಾಗಿ ಕಾರಣಕರ್ತರಾದ, ದಿವಂಗತ ದಾದಾಭಾಯಿ ನವರೋಜಿಯವರು (ಆ ಧ್ವಜದ) ಧ್ವಜಾರೋಹಣವನ್ನು ಮಾಡಿದರು. ಆ ಧ್ವಜದ ಚಿತ್ರವನ್ನು ನೋಡಿದ್ದೇನೆ. ಅದು ನನ್ನ ಮನೆಯಲ್ಲಿದೆ. ಈ ದಿನ ನಾವು ನೋಡುತ್ತಿರುವುದು ಅದೇ ಧ್ವಜವನ್ನು. ಆ ಮಹಾನ್ ನಾಯಕರು ೧೯೧೧ರಲ್ಲಿ ಕಲಕತ್ತಾದಲ್ಲಿ ಧ್ವಜಾರೋಹಣದ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ನಾನು ನೆನಪಿಸಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಭಾಷಣಕಾರರ ಭಾಷಣಕ್ಕೆ ನಾನು ಅಡ್ಡಿಪಡಿಸಲು ಇಚ್ಛಿಸುವುದಿಲ್ಲ. ಆದರೆ, ಭಾಷಣದಲ್ಲಿ ಹೇಳಿದ ವರ್ಷ ತಪ್ಪಾಗಿದೆ. ಅದು ೧೯೦೬, ೧೯೧೧ ಅಲ್ಲ.

**ಶ್ರೀ ಆರ್.ಕೆ. ಸಿಧ್ವಾ :** ಧನ್ಯವಾದಗಳು, ಮಾನ್ಯರೆ. ಧ್ವಜಾರೋಹಣ ಮಾಡುತ್ತಾ ಅವರು "ನಾನು ಈ ಧ್ವಜವನ್ನು ಸಮರ್ಪಿಸುತ್ತಿದ್ದೇನೆ. ಈ ಧ್ವಜದ ಅಡಿಯಲ್ಲಿ ನಾವು ಯುದ್ಧಗಳನ್ನು ಗೆಲ್ಲಬೇಕಾಗಿದೆ. ಮಾನ್ಯರೆ, ಈ ಧ್ವಜದ ವಿನ್ಯಾಸದಲ್ಲಿ ಬದಲಾವಣೆ ಮಾಡಲಾಗಿದೆ ಹಾಗೂ ರಾಷ್ಟ್ರಧ್ವಜವೆಂದು ಅಧಿಕೃತವಾಗಿ ಮಾನ್ಯ ಮಾಡಲಾಗಿದೆ. ನಾವು ಅದಕ್ಕೆ ಗೌರವ ಸಮರ್ಪಿಸಬೇಕು. ಅದು ದೃಢವಾಗಿ ಹಾಗೂ ಅನಂತಕಾಲದವರೆಗೆ ಹಾರಾಡುತ್ತಿರಬೇಕು.

**ಗೌರವಾನ್ವಿತ ಶ್ರೀ ಜೈಪಾಲ್ ಸಿಂಗ್** (ಬಿಹಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಪಂಡಿತ್ ಜವಾಹರಲಾಲ್ ನೆಹರು ಅವರ ಮಾತುಗಳನ್ನು ಕೇಳಿದ ಮೇಲೆ ಬೇರೆ ಭಾಷಣಗಳ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ. ಆದರೆ, ಈ ಸದನದಲ್ಲಿ ಇರುವ ಅನೇಕ ಗುಂಪುಗಳು, ನಾವು ಈ ರಾಷ್ಟ್ರದ ರಾಷ್ಟ್ರಧ್ವಜವನ್ನು ಅಂಗೀಕರಿಸುತ್ತಿರುವಾಗ, ಧ್ವಜವನ್ನು ಮಾನ್ಯಮಾಡಿ ತಮ್ಮ ನಿಷ್ಠೆಯನ್ನು ತೋರ್ಪಡಿಸಲು ಒಟ್ಟಾರೆ ಪ್ರಯತ್ನಿಸುತ್ತಿದ್ದಾರೆ. ನಾನು, ೩೦ ಮಿಲಿಯನ್ ಆದಿವಾಸಿಗಳ ಪರವಾಗಿ, ದೇಶದ ನಿಜವಾದ ಮುಖ್ಯಸ್ಥರಾಗಿರುವ, ಈ ಮಣ್ಣಿನ ಮೂಲ ಸಂತತಿಯವರಾದ, ಭಾರತದ ಅತ್ಯಂತ ಪ್ರಾಚೀನ ಶ್ರೀಮಂತಿಕೆಯುಳ್ಳವರಾಗಿರುವ, ಆರು ಸಹಸ್ರ ವರ್ಷಗಳಿಂದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿರುವಂಥ ಆದಿವಾಸಿಗಳ ಪರವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನನ್ನ ಜನತೆಯ ಪರವಾಗಿ, ಈ ಧ್ವಜವನ್ನು ಇನ್ನು ಮುಂದೆ ನಮ್ಮ ರಾಷ್ಟ್ರಧ್ವಜವಾಗಿ ಅಂಗೀಕರಿಸುವಲ್ಲಿ ನನಗೆ ಅತ್ಯಂತ ಸಂತೋಷವಾಗುತ್ತದೆ. ಮಾನ್ಯರೆ, ಈ ಸದನದ ಬಹಳಷ್ಟು ಸದಸ್ಯರು, ಧ್ವಜಾರೋಹಣವು ಆರ್ಯನಾಗರಿಕತೆಯ ವಿಶೇಷ ಹಕ್ಕು ಎಂದು ಹೇಳುವವರಿದ್ದಾರೆ. ಮಾನ್ಯರೆ, ಧ್ವಜಾರೋಹಣ ಮಾಡಿದವರಲ್ಲಿ ಹಾಗೂ ತಮ್ಮ ಧ್ವಜಗಳಿಗಾಗಿ ಹೋರಾಟ ನಡೆಸಿದವರಲ್ಲಿ ಆದಿವಾಸಿಗಳೂ ಇದ್ದಾರೆ. ಬಿಹಾರ ಎಂದು ಕರೆಯಲಾಗುವ ಪ್ರಾಂತ್ಯದಿಂದ ಬಂದಿರುವ ಸದಸ್ಯರು, ನಾನು ಹೇಳುವುದನ್ನು ಬೆಂಬಲಿಸುತ್ತಾರೆಂದು ಭಾವಿಸಿದ್ದೇನೆ. ಛೋಟಾ ನಾಗಪುರದಲ್ಲಿ ವರ್ಷ ವರ್ಷವೂ ಮೇಳಗಳು, ಜಾತ್ರೆಗಳು ಮತ್ತು ಉತ್ಸವಗಳು ನಡೆಯುತ್ತಿರುವಾಗ, ಬೇರೆ ಬೇರೆ ಬುಡಕಟ್ಟು ಜನಾಂಗದವರು ತಮ್ಮ ತಮ್ಮ ಧ್ವಜಗಳಿಂದ, ಅಖಾಡದಲ್ಲಿ ಪ್ರವೇಶಿಸಿದಾಗಲೆಲ್ಲಾ, ಆ ಪ್ರತಿಯೊಂದು ಬುಡಕಟ್ಟು ಗುಂಪಿನವರು, ನಿರ್ದಿಷ್ಟ ಮಾರ್ಗದ ಮೂಲಕ ಬರಬೇಕು. ಬೇರೆ ಯಾವುದೇ ಬುಡಕಟ್ಟಿನವರು ಆ ಮಾರ್ಗದ ಮೂಲಕ ಬರುವಂತಿಲ್ಲ. ಪ್ರತಿಯೊಂದು ಗ್ರಾಮಕ್ಕೂ ಅದರದೇ ಆದ ಧ್ವಜ ಇರುತ್ತದೆ ಮತ್ತು ಅಂಥ ಧ್ವಜವನ್ನು ಇತರ ಬುಡಕಟ್ಟಿನವರು ಇಟ್ಟುಕೊಳ್ಳುವಂತಿಲ್ಲ.

ತ್ಯಾಗ ಬಲಿದಾನಗಳ ಹೂಗಳು ಅರಳಿ, ಫಲ ನೀಡಿದುದನ್ನು ನೋಡಿ ಸಿಖ್ ಜನರಷ್ಟು ಸಂತೋಷಪಟ್ಟವರು ಬೇರಾರೂ ಇರಲಿಕ್ಕಿಲ್ಲ. ಆದರೆ, ಒಂದು ವಿಷಯವನ್ನು ಹೇಳುವುದು ಅನಿವಾರ್ಯವಾಗಿದೆ. ಅದೇನೆಂದರೆ, ಹೂವಿನ ಜೊತೆಗೆ ಮುಳ್ಳುಗಳು ಯಾವಾಗಲೂ ಇರುತ್ತವೆ. ಈ ಸಂತೋಷದ ಸಂದರ್ಭದಲ್ಲಿ ದೇಶಕ್ಕಾಗಿ ತ್ಯಾಗಮಾಡುವ ಕಾಲದಲ್ಲಿ ನಮ್ಮ ಜೊತೆಗಿದ್ದ ನಮ್ಮ ಅನೇಕ ಸೋದರರು, ಈ ದಿನ ನಮ್ಮ ಸಂತೋಷವನ್ನು ಹಂಚಿಕೊಳ್ಳಲು ನಮ್ಮೊಂದಿಗೆ ಇಲ್ಲವೆಂಬ ನೋವು ನಮಗೆ ಇದೆ. ಕೆಲವೊಮ್ಮೆ, ಮುಳ್ಳುಗಳು, ಹೂವಿನ ಸೌಂದರ್ಯ ಹಾಗೂ ಆಕರ್ಷಣೆಯನ್ನು ಹೆಚ್ಚಿಸಲು ಉಪಯುಕ್ತವಾಗುವ ಸಂಭವ ಇರುತ್ತದೆ. ಈ ಧ್ವಜವು ಆಕಾಶದಲ್ಲಿ, ಎತ್ತರದಲ್ಲಿ ಹಾರಾಡುವುದನ್ನು ನೋಡುವುದಕ್ಕಾಗಿ ನಾವು ಎಷ್ಟೆಷ್ಟು ತ್ಯಾಗಗಳನ್ನು ಮಾಡಿದ್ದೇವೆ ಎಂಬುದು ನನ್ನ ಹೃದಯ ತುಂಬಿಕೊಂಡಿತ್ತು. ಅದನ್ನು ಅಭಿವ್ಯಕ್ತಗೊಳಿಸಲು ಮಾತ್ರ ಪ್ರಯತ್ನಿಸುತ್ತಿದ್ದೇನೆ.

ನಾವು ಈ ದಿನ ಧ್ವಜವನ್ನು ಎಲ್ಲಿ ಹಾರಿಸಬೇಕೆಂದು ಇಚ್ಛಿಸುತ್ತೇವೋ ಅಲ್ಲಿ ಹಾರಿಸಲು ಸಾಧ್ಯವಿರುವಂಥ ಸ್ಥಾನಕ್ಕೆ ತಲಪಿದ್ದೇವೆ. ಈಗ ಧ್ವಜದ ಘನತೆ ಗೌರವಗಳನ್ನು ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ. ಆದಾಗ್ಯೂ, ನಾವು ಸ್ವಾತಂತ್ರ್ಯ ಪಡೆಯುವುದಕ್ಕಾಗಿ ಮಾಡಿದಂಥ ತ್ಯಾಗವನ್ನೇ, ಅದರ ಘನತೆಯನ್ನು ಎತ್ತಿ ಹಿಡಿಯುವಾಗಲೂ ಮಾಡಬೇಕಾಗುತ್ತದೆ. ಆದ್ದರಿಂದ, ದೇಶದ ಸ್ವಾತಂತ್ರ್ಯಕ್ಕಾಗಿ ತೋರಿಸಿದ್ದ ಉತ್ಸಾಹ, ಧೈರ್ಯ ಹಾಗೂ ನಿರ್ಭಯತೆಗಳನ್ನು, ಈಗಲೂ ಸಿಖ್ಖರು ಧ್ವಜದ ಘನತೆ ಗೌರವಗಳನ್ನು ಎತ್ತಿ ಹಿಡಿಯುವಲ್ಲಿ ತೋರಿಸುತ್ತಾರೆಂದು, ನಾನು ಸಿಖ್ ಸಮುದಾಯದ ಪರವಾಗಿ ಭರವಸೆ ನೀಡುತ್ತೇನೆ. ಇಷ್ಟು ಮಾತುಗಳನ್ನು ಹೇಳಿ, ಪಂಡಿತ್‌ಜಿಯವರು ಮಂಡಿಸಿದ ನಿರ್ಣಯವನ್ನು ನಾನು ಸಮರ್ಥಿಸುತ್ತೇನೆ.]*

**ಶ್ರೀ ಎಚ್.ಜೆ. ಖಾಂಡೇಕರ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಅವರು ಮಂಡಿಸಿರುವ ಈ ಧ್ವಜಕ್ಕೆ ಸಂಬಂಧಿಸಿದ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ಈ ದೇಶದಲ್ಲಿ ಈ ಧ್ವಜದ ಗೌರವವನ್ನು ಕಾಪಾಡಲು ಮಾಡಿದ್ದ ಮಹಾತ್ಯಾಗದ ಬಗ್ಗೆ ಹಾಗೂ ಎಷ್ಟು ಜನರ ಮಕ್ಕಳನ್ನು, ಕಾಲಿನಿಂದ ತುಳಿದು ಕೊಲ್ಲಲಾಯಿತು ಎಂಬುದು ನಿಮಗೆ ಗೊತ್ತಿದೆ. ಬ್ರಿಟಿಷ್ ಸಾಮ್ರಾಜ್ಯವು, ಈ ಧ್ವಜವನ್ನು ಹಾಳುಮಾಡುವುದಕ್ಕಾಗಿ ಹೇಗೆ ತಮ್ಮೆಲ್ಲ ಅಧಿಕಾರವನ್ನು ಬಳಸಿಕೊಂಡಿತು. ಆದರೆ, ಈ ದೇಶದ ನಿವಾಸಿಗಳಾದ ನಾವು, ಯಾವ ಧ್ವಜದ ಅಡಿಯಲ್ಲಿ ಸ್ವತಂತ್ರ ಭಾರತವನ್ನು ಕಟ್ಟಿದೆವೋ ಹಾಗೂ ಸ್ವತಂತ್ರ ಭಾರತದಲ್ಲಿ ಹಾರಿಸಲು ಇಚ್ಛಿಸುತ್ತೇವೆಯೋ, ಆ ಧ್ವಜವನ್ನು ಯಾವಾಗಲೂ ರಕ್ಷಿಸಿ ಗೌರವಿಸಿದ್ದೇವೆ; ಅದೇ ಧ್ವಜವು ಈ ದಿನ ನಮಗೆ ಸ್ವತಂತ್ರರಾಗುವುದಕ್ಕೆ ಶಕ್ತಿಯನ್ನು ನೀಡಿದೆ.

ಈ ಧ್ವಜದಲ್ಲಿ ಮೂರು ಬಣ್ಣಗಳಿವೆ. ಇವುಗಳಲ್ಲಿ, ಒಂದಾದ ಕೇಸರಿ ಬಣ್ಣವು ನಮ್ಮ ಸಮುದಾಯಕ್ಕೆ ಸಂಬಂಧಪಟ್ಟಿದೆ. ನಾನು ತುಳಿತಕ್ಕೆ ಒಳಗಾದ ವರ್ಗಕ್ಕೆ ಸೇರಿದ್ದೇನೆ. ಶಿವಾಜಿಯು, ಅಧಿಕಾರದಲ್ಲಿದ್ದಾಗ ಹಿಂದೂ ರಾಜ್ಯದ ಸ್ಥಾಪನೆಗಾಗಿ, ನಮ್ಮ ಸಮುದಾಯಗಳ ಲಕ್ಷ ಲಕ್ಷ ಜನರು, ಇದೇ ಕೇಸರಿ ಧ್ವಜದ ಅಡಿಯಲ್ಲಿ ತ್ಯಾಗ ಬಲಿದಾನ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಕೊರೆಗಾಂವ್‌ನಲ್ಲಿರುವ ಸಿದ್ಧನಾಥ ಮಹಾರ್‌ನ ಕಬ್ಬಿಣದ ಸ್ತಂಭವು, ಆ ಕಾಲದಿಂದ ಇಂದಿನವರೆಗೆ ತ್ಯಾಗದ ಕತೆಯನ್ನು ನೆನಪಿಸುತ್ತದೆ.

ಇಲ್ಲಿರುವ ಧ್ವಜದಲ್ಲಿ ಮೂರು ಬಣ್ಣಗಳಿವೆ. ಮೊದಲನೆಯದು ನಮ್ಮ ಸಮುದಾಯಕ್ಕೆ ಸಂಬಂಧಪಟ್ಟಿದೆ. ಎರಡನೆಯ ಬಣ್ಣ ಬಿಳಿ, ಇದು ಶಾಂತಿ – ನೆಮ್ಮದಿಯನ್ನು ಸೂಚಿಸುತ್ತದೆ ಮತ್ತು ದೇಶದಲ್ಲಿರುವ ಎಲ್ಲ ಸಮುದಾಯಗಳ ನಡುವೆ ಒಗ್ಗಟ್ಟನ್ನು ಸೂಚಿಸುತ್ತದೆ ಹಾಗೂ ಈ ಕಾರಣಕ್ಕಾಗಿ ದೇಶದಲ್ಲಿರುವ ಪ್ರತಿಯೊಂದು ಧರ್ಮವನ್ನು ಮತ್ತು ಭಾಷೆಯನ್ನು ಸೂಚಿಸುತ್ತದೆ. ಅಖಿಲ ಭಾರತ ತುಳಿತಕ್ಕೆ ಒಳಗಾದ ಸಂಘದ ಅಧ್ಯಕ್ಷರು, 'ನನ್ನ ಸಮುದಾಯದವರು, ಈ ದಿನ ನಾವು ಅಂಗೀಕರಿಸುತ್ತಿರುವ ಧ್ವಜವನ್ನು ಯಾವಾಗಲೂ ಅನುಸರಿಸುತ್ತೇವೆ' ಎಂದು ಈ ಸದನಕ್ಕೆ ಭರವಸೆ ನೀಡುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಇಷ್ಟು ಮಾತುಗಳನ್ನು ಹೇಳಿ,

ನನ್ನ ಪರವಾಗಿ ಹಾಗೂ ಇಡೀ ಸಮುದಾಯದ ಪರವಾಗಿ ಧ್ವಜದ ಅಂಗೀಕಾರಕ್ಕೆ ಬೆಂಬಲ ನೀಡುತ್ತೇನೆ. ಧ್ವಜದ ಗೌರವವನ್ನು, ಈ ದಿನದವರೆಗೂ ನಾವು ಕಾಪಾಡಿದ್ದೇವೆ. ಎಂದಾದರೂ ಅದಕ್ಕೆ ಅಗೌರವ ಉಂಟಾದ ಸಂದರ್ಭದಲ್ಲಿ, ನನ್ನ ಸಮುದಾಯದ ಜನರು ಹಾಗೂ ದೇಶದ ಇತರ ನಿವಾಸಿಗಳು ಧ್ವಜದ ಗೌರವವನ್ನು ಉಳಿಸುವುದಕ್ಕೆ ಎಂಥ ತ್ಯಾಗಕ್ಕೂ ಸ್ವತಃ ಸಿದ್ಧರಾಗಿದ್ದೇವೆ. ಇಷ್ಟನ್ನು ಹೇಳಿ ನಿರ್ಣಯವನ್ನು ಬೆಂಬಲಿಸುವಂತೆ ವಿನಂತಿಸಿಕೊಳ್ಳುತ್ತೇನೆ.]*

**ಶ್ರೀ ಬಾಲಕೃಷ್ಣ ಶರ್ಮ :** *[ಮಾನ್ಯ ಸಭಾಧ್ಯಕ್ಷರೆ, ನಮ್ಮ ನೇತಾರರಾದ ಪಂಡಿತ್ ಜವಾಹರಲಾಲ್ ನೆಹರು, ಇಂದು ಈ ಸಂದರ್ಭದಲ್ಲಿ ಮಾಡಿದ ಮಹೋನ್ನತ ಭಾವನೆಗಳಿಂದ ಕೂಡಿದ ಇಂಥ ಅಭೂತಪೂರ್ವ ಭಾಷಣದ ಅನಂತರ ಬೇರೆ ಯಾವ ಭಾಷಣವನ್ನೂ ಮಾಡಬಾರದು ಎಂದು ನನಗೆ ಅನಿಸುತ್ತದೆ. ಆದರೆ, ರೀತಿ ನೀತಿಗಳಿಗೆ ಬೆಲೆ ಕೊಟ್ಟು, ಪ್ರತಿಯೊಂದು ಗುಂಪಿನ ಸದಸ್ಯರು ತಮ್ಮ ತಮ್ಮ ವಿಚಾರಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಹಿರಿಯ ಸದಸ್ಯರ ಸಲಹೆಯಂತೆ ಮಾತನಾಡುವುದಕ್ಕೆ ನನ್ನ ಹೆಸರನ್ನು ಸನ್ಮಾನ್ಯ ಅಧ್ಯಕ್ಷರಿಗೆ ಕೊಡಲಾಗಿದೆ ಹಾಗೂ ಈ ದಿನ ನಾನು ಸಂಕ್ಷಿಪ್ತವಾಗಿ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಪಂಡಿತ್ ಜವಾಹರಲಾಲ್ ನೆಹರು, ಈ ನಿರ್ಣಯವನ್ನು ಮಂಡಿಸಿರುವ ಈ ದಿನವು ದೇಶಕ್ಕೆ ಹಾಗೂ ಚರಿತ್ರೆಗೆ ಅಭಿವಂದನೆಗಳನ್ನು ಹೇಳುವ ದಿನವಾಗಿದೆ. ಪಂಡಿತ್ ಜವಾಹರಲಾಲ್ ನೆಹರು ಅವರ ಭಾಷಣವನ್ನು ಕೇಳುತ್ತಿರುವಾಗ, ನಾವು ನಮ್ಮ ಸ್ವಾತಂತ್ರ್ಯದ ಪಯಣದ ಒಂದು ಭಾಗವನ್ನು ಪೂರ್ಣಗೊಳಿಸಿ ಮುಂದಿನ ಪಯಣಕ್ಕೆ ಸಿದ್ಧರಾಗುತ್ತಿದ್ದೇವೆ ಎಂದು ನನಗೆ ಅನಿಸಿತು. ಈಗ ಈ ಪಯಣದ ಮೊದಲನೇ ಭಾಗವು ಮುಕ್ತಾಯದ ಹಂತಕ್ಕೆ ಬಂದಿದ್ದಾಗ, ನಾವು ನಡೆದು ಬಂದ ದಾರಿಯ ಕಡೆಗೆ, ಸಿಂಹಾವಲೋಕನಮಾಡಬೇಕಾಗಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ, ನಮ್ಮ ದೇಶದಲ್ಲಿಯೇ ಜನಿಸಿದ ಮಹಾನ್ ವ್ಯಕ್ತಿಯೊಬ್ಬರು, ನಮ್ಮ ಜೀವನ ಕ್ರಮವನ್ನು ಅತ್ಯಂತ ಸೌಮ್ಯದಿಂದ ಹಾಗೂ ಕಲಾತ್ಮಕವಾಗಿ ಸಾಮರಸ್ಯಗೊಳಿಸಿದ್ದಾರೆ. ಇವರಿಗೆ ನಾವು ತಲೆಬಾಗಿ ವಂದಿಸದಿದ್ದರೆ ಅದು ಕೃತಘ್ನತೆಯಾಗುತ್ತದೆ. ಇಷ್ಟು ಸ್ವಲ್ಪ ಕಾಲದಲ್ಲಿ ಆ ಎಲ್ಲ ಘಟನೆಗಳನ್ನು ವಿವರಿಸುವುದು ಸಾಧ್ಯವಿಲ್ಲ; ಮಹಾತ್ಮ ಗಾಂಧಿಯವರು ನಮಗೆ ನೀಡಿದುದೇನು ಹಾಗೂ ರಾಷ್ಟ್ರಕ್ಕೆ ಅದರ ಕೊಡುಗೆ ಏನು ಹಾಗೂ ಈಗಲೂ ಅವರು ನಮಗೆ ಏನನ್ನು ನೀಡುತ್ತಿದ್ದಾರೆ ಎಂಬುದನ್ನು ತಿಳಿಯಬೇಕು. ಆದರೆ, ನೀವು ಸ್ವಲ್ಪ ಶ್ರಮ ವಹಿಸಿ ೨೭-೨೮ ವರ್ಷಗಳ ಹಿಂದೆ ಇದ್ದ ಸಂದರ್ಭಗಳನ್ನು ನೆನಪಿಸಿಕೊಂಡರೆ, ವಿಶ್ವದ ಅತ್ಯಂತ ಮಹಾನ್ ನೇತಾರರೊಬ್ಬರ ಪ್ರಯತ್ನಗಳಿಂದಾಗಿ ನಮ್ಮ ದೇಶದಲ್ಲಾದ ಅದ್ಭುತ ಪ್ರಗತಿ ಎಂಥದ್ದು ಎಂಬುದು ಕಂಡು ಬರುತ್ತದೆ. ಒಂದು ಕಾಲದಲ್ಲಿ, ಕಾಂಗ್ರೆಸ್, ಕ್ರಿಸ್ಮಸ್ ಅವಧಿಯಲ್ಲಿ ಮೂರು ದಿನ ಸಭೆ ಸೇರುವುದು, ನಿರ್ಣಯಗಳನ್ನು ಅಂಗೀಕರಿಸುವುದು ಇಷ್ಟೇ ಕಾರ್ಯ ಮಾಡಿಬಿಡುತ್ತಿತ್ತು. ತನ್ನ ಕರ್ತವ್ಯ ಅಲ್ಲಿಗೆ ಮುಗಿಯಿತು ಎಂದು ಭಾವಿಸುತ್ತಿತ್ತು. ಆಗ ಮಹಾತ್ಮ ಗಾಂಧಿಯವರು ಕೇವಲ ನಿರ್ಣಯಗಳನ್ನು ಅಂಗೀಕರಿಸುವುದಷ್ಟರಿಂದಲೇ ಸ್ವಾತಂತ್ರ್ಯ ಸಿಗುವುದಿಲ್ಲವೆಂದು ಹೇಳಿದರು ಮತ್ತು ಅಧಿಕಾರ ಪಡೆಯಬೇಕಾದರೆ ಎಂಥ ಶಕ್ತಿ ಬೇಕಾಗುತ್ತದೆ ಎಂಬುದನ್ನು ಹೇಳಿದರು. ಇಡೀ ರಾಷ್ಟ್ರವೇ ಗಾಂಧಿಯವರ ಕಡೆ ವಿಸ್ಮಯದಿಂದ ನೋಡುತ್ತಿತ್ತು ಹಾಗೂ ಇವರೊಬ್ಬ ಅಪ್ರಬುದ್ಧ ವ್ಯಕ್ತಿಯಾಗಿರಬಹುದೆಂದೂ ಭಾವಿಸಿದ್ದರು. ರಾಷ್ಟ್ರಕ್ಕೆ ಯಾವುದೇ ಶಸ್ತ್ರಾಸ್ತ್ರಗಳಿಲ್ಲದೇ ಮಹಾನ್ ಶಕ್ತಿಯನ್ನು ಪಡೆದುಕೊಳ್ಳುವ ಈ ಸಂದೇಶವು, ಜಗತ್ತಿನ ಇತಿಹಾಸದಲ್ಲಿಯೇ ಭಾರತೀಯ ವಿಚಾರವಾಗಿದೆ. ರಾಷ್ಟ್ರೀಯವಾಗಿ ಅಧಿಕಾರಗಳನ್ನು ಪಡೆದುಕೊಳ್ಳುವುದಕ್ಕಾಗಿ, ಹಿಂಸಾಮಾರ್ಗವೊಂದೇ ಎಂದು ಇಡೀ ಜಗತ್ತೇ ಭಾವಿಸಿತ್ತು. ಅಹಿಂಸಾಮಾರ್ಗದ ಮೂಲಕ ಮಹಾತ್ಮ ಗಾಂಧಿಯವರು ನಡೆಸಿದ ದೇಶದಲ್ಲಿ ಸಮೂಹ ಪ್ರಜ್ಞೆ ಬೆಳೆಸಿದ್ದನ್ನು ನಾವು ಇಂದು ನೆನಪಿಸಿಕೊಳ್ಳಬಾರದೆ? ಇದು ಜನತೆಯ ಮನಸ್ಸಿಗೆ ನಾಟಿ ಸಮಗ್ರ ದೇಶ ಒಗ್ಗೂಡಿ ಹೋರಾಟ ನಡೆಸಿತು. ಕಾಂಗ್ರೆಸ್ ಅಂಗೀಕರಿಸಿದ ನಿರ್ಣಯದಿಂದಲೇ ಹೋರಾಟ ನಡೆಸುವ ಸಂಸ್ಥೆಯಾಗಿ ಕಾಂಗ್ರೆಸ್ ಬದಲಾಯಿಸುವುದಕ್ಕೆ ಮಹಾತ್ಮ ಗಾಂಧಿಯವರಂಥ ಮಹಾನ್ ನಾಯಕರ,

ಅಮೂಲ್ಯ ಕೊಡುಗೆ ಕಾರಣವೆಂದು ನಾನು ಭಾವಿಸುತ್ತೇನೆ. ಅವರ ಇನ್ನೊಂದು ಅಮೂಲ್ಯ ಕೊಡುಗೆ ಎಂದರೆ (ವರ್ಷದಲ್ಲಿ) ಮೂರು ದಿನಗಳ ಕಾಲ ಮಾತ್ರ ಕಾರ್ಯನಿರ್ವಹಿಸುತ್ತಿದ್ದ ಕಾಂಗ್ರೆಸ್ ಸಂಸ್ಥೆಯನ್ನು ಒಂದು ಖಾಯಂ ಸಂಸ್ಥೆಯನ್ನಾಗಿ ಬದಲಾಯಿಸಿದ್ದು, ಅವರ ಮೂರನೇ ಅಮೂಲ್ಯ ಕೊಡುಗೆ ರಾಷ್ಟ್ರೀಯ ಭಾಷೆ. ನಾವು ಈಗಲೂ ವಿದೇಶಿ ಭಾಷೆಯನ್ನೇ ಬಳಸುತ್ತಿದ್ದೇವೆ. ಮಹಾತ್ಮ ಗಾಂಧಿಯವರು ಹಿಂದಿಯನ್ನು ರಾಷ್ಟ್ರೀಯ ಭಾಷೆಯಾಗಿ ನಮಗೆ ಬಳಸುವಂತೆ ಮಾಡಿ ರಾಷ್ಟ್ರೀಯ ಭಾವನೆಯ ಅರಿವು ಮೂಡುವಂತೆ ಅವಕಾಶಮಾಡಿಕೊಟ್ಟರು. ಅವುಗಳಲ್ಲಿ ಒಂದಾದವರು ಎಂದರೆ, ಈ ದೇಶಕ್ಕೆ ಅವರು ನೀಡಿದ ಧ್ವಜ, ಹೀಗೆ ಈ ಧ್ವಜದ ರೂಪದಲ್ಲಿ ತಮ್ಮ ದೇಶದ ಸಾಮೂಹಿಕ ಶಕ್ತಿಯನ್ನು ಕೇಂದ್ರೀಕರಿಸಿ ನೀಡಿದ್ದಾರೆ. ತ್ಯಾಗದ ಪಥದಲ್ಲಿ ಮುನ್ನಡೆಯವುದಕ್ಕೆ ನಮಗೆ ಪ್ರೇರಣೆ ನೀಡಿದ್ದಾರೆ. ಈ ದಿನ ಎಲ್ಲರ ಪರವಾಗಿ, ನಾನು, ಈ ಮಹಾನ್ ವ್ಯಕ್ತಿಯ ಪಾದಗಳಲ್ಲಿ ಶ್ರದ್ಧಾಪೂರ್ವಕ ಗೌರವ ಸಲ್ಲಿಸುತ್ತೇನೆ.

ಪಂಡಿತ್ ಜವಾಹರಲಾಲ್ ನೆಹರು ನಮ್ಮನ್ನು ಉದ್ದೇಶಿಸಿ ಭಾಷಣಮಾಡುತ್ತಿದ್ದಾಗ, ನಾನು ಅವರನ್ನು ನೋಡಿ, ಈ ಮಹಾನ್ ವ್ಯಕ್ತಿಯು, ದೇಶಕ್ಕೆ ಏನೆಲ್ಲ ಮಾಡಿದ್ದಾರೆ ಎಂದು ಅನಿಸಿತು. ಅವರ ಮೂಲಕವಾಗಿ ಎಷ್ಟು ಆದರ್ಶಗಳನ್ನು ಕಾರ್ಯರೂಪಕ್ಕೆ ತರಲಾಗಿದೆ ಹಾಗೂ ಸೇವಾಮನೋಭಾವ ಎಷ್ಟರಮಟ್ಟಿಗೆ ಇದೆ ಹಾಗೂ ಅವರಲ್ಲಿ ಶ್ರದ್ಧೆ (ಸಮರ್ಪಣ ಭಾವ) ಎಷ್ಟಿದೆ? ನಿಮ್ಮೆಲ್ಲರ ಪರವಾಗಿ ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ಹಾಗೂ ಮಹಾತ್ಮಾಜೀಯವರಿಗೆ ನಾನು ಗೌರವ ಸಮರ್ಪಿಸುತ್ತೇವೆ. ನಾನು ಅವರ ಭಾಷಣಗಳನ್ನು ಕೇಳುತ್ತಿರುವಾಗ, ನಮ್ಮ ಪಯಣದ ಒಂದು ಭಾಗವು ಮುಕ್ತಾಯದ ಹಂತಕ್ಕೆ ಬಂದಿದೆ ಎಂದು ನನಗೆ ಅನಿಸಿತು. ನಾವು ಮುಂದೇನು ಮಾಡಬೇಕು ಎಂಬ ವಿಚಾರ ನನ್ನ ಮನಸ್ಸಿಗೆ ನುಸುಳಿತು. ಪಂಡಿತ್ ಜವಾಹರಲಾಲ್ ನೆಹರು, ಚಲನಶೀಲತೆಯ ಸಂಕೇತವಾಗಿ ಮಧ್ಯದಲ್ಲಿರುವ 'ಚಕ್ರ'ವನ್ನು ಕುರಿತು ವ್ಯಾಖ್ಯಾನಿಸಿದರು. ಆಗ ನನಗೆ 'ಬೃಹದಾರಣ್ಯಕ ಉಪನಿಷತ್ತಿ'ನಲ್ಲಿ ಓದಿದ್ದ ವಾಕ್ಯಗಳು ಎಂದರೆ, 'ಮಲಗಿಕೊಂಡಿರುವುದೇ ಕಲಿಯುಗ, ಕಣ್ಣು ತೆರೆಯುವುದೇ ದ್ವಾಪರ ಯುಗ, ಎದ್ದೇಳುವುದೇ ತ್ರೇತಾಯುಗ ಹಾಗೂ ಅತ್ತಿತ್ತ ಚಲಿಸುತ್ತಿರುವುದೇ ಸತ್ಯಯುಗ' ಎಂಬುದು ನೆನಪಿಗೆ ಬಂದವು. ಈ ದಿನ ಪಂಡಿತ್ ಜವಾಹರಲಾಲ್ ನೆಹರು, ಈ 'ಚಕ್ರ'ದ ರೂಪದಲ್ಲಿರುವ ಚಲನಶೀಲತೆಯ ಸಂದೇಶವನ್ನು ನಮಗೆ ನೀಡಿ, ನಮ್ಮನ್ನು ಸತ್ಯ ಯುಗಕ್ಕೆ ಕರೆದೊಯ್ದಿದ್ದಾರೆ. ಉಪನಿಷತ್‌ಕಾರರು, "ಚರೈವೇತ್ತಿ, ಚರೈವೇತ್ತಿ" ಎಂದು ಹೇಳಿದ್ದಾರೆ. ಭಗವಾನ್ ಬುದ್ಧನು ಸಹ ಸ್ವತಃ "ಚರೈವೇತ್ತಿ ಖಿಹವೇ, ಚರೈವೇತ್ತಿ" ಎಂದು ಹೇಳಿದ್ದಾನೆ. ನಿರಂತರವಾಗಿ ನಡೆಯುತ್ತಾ ಮುಂದೆ ಮುಂದೆ ಸಾಗುವ ಪ್ರಯತ್ನಮಾಡು, ಪುನಃ ಪುನಃ ಮುನ್ನಡೆಯುತ್ತಿರುವ, ವಿಶ್ರಮಿಸಲು ಅವಕಾಶವೇ ಇಲ್ಲ (ನಿಲ್ಲದೇ ಮುನ್ನಡೆಯುತ್ತಿರುವ) ಈ ದಿನ ಕಾಂಗ್ರೆಸಿನ ಪರವಾಗಿ, ನಮ್ಮ ನೇತಾರರಾದ ಪಂಡಿತ್ ಜವಾಹರಲಾಲ್ ನೆಹರು ಅವರಿಗೆ 'ಪ್ರಿಯ ಕ್ಯಾಪ್ಟನ್! ನಿಮ್ಮ ನೇತೃತ್ವದಲ್ಲಿ, ನಾವು ನಮ್ಮೆಲ್ಲ ಶಕ್ತಿಯೊಡನೆ, ನಿಮ್ಮನ್ನು ಅನುಸರಿಸಲು ಪ್ರಯತ್ನಿಸುತ್ತೇವೆ' ಎಂದು ಭರವಸೆ ನೀಡುತ್ತೇನೆ.

ಈ ದಿನ, ಈ ಸಂದರ್ಭದಲ್ಲಿ, ನಾನು ರಾಷ್ಟ್ರೀಯ ಧ್ವಜಕ್ಕೆ ಗೌರವ ಸಲ್ಲಿಸುತ್ತ ಈ ರಾಷ್ಟ್ರದ ಈ ಧ್ವಜದ ಅಡಿಯಲ್ಲಿ ಸಮಗ್ರ ಮಾನವ ಕುಲಕ್ಕೆ ಅನಂತ ಶಾಂತಿ ಸಂದೇಶ ನೀಡಲು ಸಮರ್ಥವಾದ ನವಯುಗದ ಉದಯವಾಗಲಿ, ಹೊಸ ಭೂಮಿ ಹಾಗೂ ಹೊಸ ದಿಗಂತ ರೂಪಗೊಳ್ಳಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.]*

**ಪಂಡಿತ್ ಗೋವಿಂದ ಮಾಳವೀಯ :** *[ಮಾನ್ಯ ಸಭಾಧ್ಯಕ್ಷರೆ, ಈ ದಿನ ನಾನು ಇಲ್ಲಿಗೆ ಬಂದಾಗ, ಈ ಧ್ವಜದ ಬಗ್ಗೆ ಮಾತನಾಡಬಹುದೆಂಬ ವಿಚಾರ ಇರಲಿಲ್ಲ. ಆದರೆ ದೇಶದ ಅತ್ಯಂತ ಪ್ರೀತಿಯ ನೇತಾರರಾದ ಪಂಡಿತ್ ಜವಾಹರಲಾಲ್ ನೆಹರು ಭಾಷಣಮಾಡಿದಾಗ, ನಮ್ಮ ಹೃದಯಲ್ಲಿ ಸಂತೋಷ–ಸಂಭ್ರಮದ ಅಲೆ ಎದ್ದಿತ್ತು ಹಾಗೂ ಈ ಪವಿತ್ರ ಹಾಗೂ ಸಂಭ್ರಮದ ದಿನದಂದು ರಾಷ್ಟ್ರಧ್ವಜಕ್ಕೆ ನಾವು ಗೌರವ ವಂದನೆಗಳನ್ನು ಸಮರ್ಪಿಸಬೇಕೆಂದು ನಮಗೆಲ್ಲರಿಗೂ ಅನಿಸಿತು. ಮಾನ್ಯರೆ, ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಲು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ರಾಷ್ಟ್ರಧ್ವಜದ ಮಹತ್ತು, ಅದರ ಬಣ್ಣಗಳನ್ನಾಗಲೀ, ಅದರ ಪಟ್ಟಿ (ಬ್ಯಾಂಡ್)ಗಳನ್ನಾಗಲೀ ಅಥವಾ ಇತರ ಭಾಗಗಳನ್ನಾಗಲೀ ಅವಲಂಬಿಸಿಲ್ಲ. ಇಡೀ ಧ್ವಜವೇ ಮಹತ್ತ್ವದ್ದು ಹಾಗೂ ಇತರ ವಿಷಯಗಳಾದ, ಅದರಲ್ಲಿರುವ ಬಣ್ಣ ಇತ್ಯಾದಿಗಳು, ಅಷ್ಟು ಮಹತ್ತ್ವದವುಗಳಲ್ಲ. ಧ್ವಜವು, ಮಹತ್ತ್ವದಲ್ಲದ ಯಾವುದೇ ವಸ್ತುವಿನಿಂದ ಮಾಡಿದ ಬಿಳಿಯ ಬಟ್ಟೆ ತುಂಡು ಆಗಿರಬಹುದು. ಆದರೆ, ಅದನ್ನು ರಾಷ್ಟ್ರಧ್ವಜವಾಗಿ ಅಂಗೀಕರಿಸಿದಾಗ, ಆತ್ಮಗೌರವವುಳ್ಳ ರಾಷ್ಟ್ರದ ಲಾಂಛನ ಆಗುತ್ತದೆ. ಅದು ರಾಷ್ಟ್ರದ ಸ್ವಾತಂತ್ರ್ಯ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸುವಂಥದ್ದು ಆಗುತ್ತದೆ. ಅದು ದೇಶದ ಅತ್ಯಂತ ಪ್ರೀತಿಯ ವಸ್ತುವಾಗುತ್ತದೆ. ಕಳೆದ ೨೭ ವರ್ಷಗಳಿಂದಲೂ, ಈ ತ್ರಿವರ್ಣಧ್ವಜವು, ನಮ್ಮ ವಿಚಾರಗಳಲ್ಲಿ ಮತ್ತು ಕಲ್ಪನೆಯಲ್ಲಿ ಅತ್ಯಂತ ಮೊದಲನೆಯದಾಗಿದೆ. ನಮ್ಮ ಕೈಯಲ್ಲಿ ಈ ಧ್ವಜವನ್ನು ಹಿಡಿದು ಸ್ವಾತಂತ್ರ್ಯಕ್ಕಾಗಿ ಮಾಡಿದ ತ್ಯಾಗಗಳಿಗೆ ಲೆಕ್ಕವೇ ಇಲ್ಲ. ನಾನು ಈಗಾಗಲೇ ಹೇಳಿರುವಂತೆ, ಒಂದು ಧ್ವಜವನ್ನಾಗಿ ಅಥವಾ ಯಾವುದೇ ವಸ್ತುವನ್ನಾಗಲೀ ಅದನ್ನು ರಾಷ್ಟ್ರದ ಚಿಹ್ನೆಯಾಗಿ ಒಪ್ಪಿಕೊಂಡ ಮೇಲೆ, ಅದು ರಾಷ್ಟ್ರದ ಅತ್ಯಂತ ಪ್ರೀತಿಯ ವಸ್ತುವಾಗುತ್ತದೆ ಹಾಗೂ ರಾಷ್ಟ್ರ ಜೀವನದಲ್ಲಿ ಹಾಗೂ ಚರಿತ್ರೆಯಲ್ಲಿ ಅದು ಅತ್ಯಂತ ಮಹತ್ತ್ವದ ಹಾಗೂ ಅತ್ಯುನ್ನತ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಈ ನಮ್ಮ ಧ್ವಜವು, ಕಳೆದ ೨೭ ವರ್ಷಗಳಿಂದಲೂ ನೂರಾರು ಲಕ್ಷ ಲಕ್ಷ ಜನರ ಆಶೋತ್ತರಗಳ ಹಾಗೂ ಕನಸುಗಳ ಚಿಹ್ನೆಯಾಗಿದೆ. ಈ ಧ್ವಜದ ಮೇಲಿನ ಗೌರವದಿಂದ, ಇದನ್ನು ಹಿಡಿದ ಲಕ್ಷ ಲಕ್ಷ ಜನರು ತಮ್ಮ ಜೀವಕ್ಕಿಂತ ಹೆಚ್ಚು ಪ್ರೀತಿಯಿಂದ ನೋಡಿದ್ದಾರೆ. ಇದಕ್ಕಾಗಿ ಎಂಥ ಎಂಥ ಭಯಂಕರ ಕಷ್ಟನಷ್ಟಗಳನ್ನಾದರೂ ಅನುಭವಿಸಿದ್ದಾರೆ. ಇದಕ್ಕಾಗಿ ಅಸಂಖ್ಯಾತ ಜನರು ಜೈಲು ಸೇರಿದಾಗ ಅವರ ಮಕ್ಕಳು ಉಪವಾಸ ಬೀಳುವ ಸ್ಥಿತಿ ಬಂದಿತು. ಈ ಧ್ವಜದ ಗೌರವವನ್ನು ಎತ್ತಿಹಿಡಿಯುವುದಕ್ಕಾಗಿ ಪೊಲೀಸರ ಹಾಗೂ ಸೈನಿಕರ ಲಾಠಿ ಏಟಿಗೆ ತಮ್ಮ ತಲೆಕೊಟ್ಟರು. ಮೂಳೆಗಳನ್ನು ಮುರಿದುಕೊಳ್ಳಬೇಕಾಯಿತು. ಈ ತಮ್ಮ ಧ್ವಜದ ಗೌರವವನ್ನು ಕಾಪಾಡುವುದಕ್ಕಾಗಿ ಈ ದೇಶದ ಯುವಕರು ಹಾಗೂ ವಿದ್ಯಾರ್ಥಿಗಳು, ಆಂಗ್ಲ ಸೈನಿಕರ ಹಾಗೂ ಪೊಲೀಸರ ಗುಂಡುಗಳಿಗೆ ಎದೆಯೊಡ್ಡಿ ನಿಂತರು. ಅನೇಕ ತಲೆಮಾರುಗಳಿಂದ ಇದು ನಮ್ಮ ಧ್ವಜವಾಗಿದೆ ಹಾಗೂ ನಾವು ಈ ಧ್ವಜದ ಬಗ್ಗೆ ನಮ್ಮ ಹೃದಯಗಳಲ್ಲಿ ಇಟ್ಟುಕೊಂಡಿರುವ ಉನ್ನತ ಭಾವನೆ, ಭಾವಪರವಶತೆ ಹಾಗೂ ಉತ್ಸಾಹ-ಇವುಗಳನ್ನು ಯಾರೂ ಶಬ್ದಗಳಲ್ಲಿ ವರ್ಣಿಸಲಾರರು. ನಾವು ಈ ಧ್ವಜಕ್ಕೆ ಗೌರವ ಸಲ್ಲಿಸಲು ಕಾತರರಾಗಿದ್ದೇವೆ.

ಮಾನ್ಯರೆ, ಈ ಯಾವ ಧ್ವಜಕ್ಕಾಗಿ, ತ್ಯಾಗ ಬಲಿದಾನ ಮಾಡಲಾಯಿತೋ ಹಾಗೂ ಯಾವುದನ್ನು ಕುರಿತು ದೇಶಭಕ್ತಿ ಗಾಥೆಗಳನ್ನು, ವೀರಗಾಥೆಗಳನ್ನು ಹಾಗೂ ತ್ಯಾಗ ಬಲಿದಾನಗಳ 'ಗಾಥೆ'ಗಳನ್ನು ರಚಿಸಲಾಗಿದೆಯೋ ಅವು ನಮ್ಮ ವಿಚಾರಗಳ ಕೇಂದ್ರ ಬಿಂದುಗಳಾಗಿವೆ. ಈ ಧ್ವಜದ ಬಗ್ಗೆ ನಮ್ಮ ದೇಶದಲ್ಲಿ ಅನೇಕ ಅಭಿಪ್ರಾಯಗಳಿವೆ. ಈ ಧ್ವಜದ ಬಗ್ಗೆ ಅನೇಕ ಸದಸ್ಯರು ಅನೇಕ ನಿರ್ಣಯಗಳಿಗಾಗಿ ಸೂಚನೆಗಳನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬ ಸದಸ್ಯನಿಗೂ, ನಿರ್ಣಯವನ್ನು ಮಂಡಿಸುವುದಕ್ಕೆ ತನ್ನದೇ ಆದ ವೈಯಕ್ತಿಕ ಹಾಗೂ ಮುಖ್ಯವಾದ ಕಾರಣಗಳಿವೆ ಎಂಬುದು ನನಗೆ ತಿಳಿದಿದೆ. ಅವರ ಸಲಹೆಗಳನ್ನು ಇಲ್ಲಿ ಒಪ್ಪಿಕೊಳ್ಳದಿದ್ದ ಸಂದರ್ಭದಲ್ಲಿ, ನಿರ್ದಿಷ್ಟವಾಗಿ ಯಾರೊಬ್ಬ ವ್ಯಕ್ತಿಯ ಅಥವಾ ವರ್ಗದ ವಿಚಾರಗಳನ್ನು ಗೌರವಿಸಿಲ್ಲ ಎಂದು ಅರ್ಥವಲ್ಲ. ಈ ಧ್ವಜದ ಸಂಬಂಧದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿದ್ದರೂ, ನಾವು ಅಂಥ ವಿಚಾರಗಳಿಗೆ ಅವಕಾಶ ಕೊಡುವುದಿಲ್ಲ. ಅವರು ಅದಕ್ಕಾಗಿ ಒತ್ತಾಯಿಸುವುದನ್ನು ಬಿಟ್ಟುಬಿಡಬೇಕಾಗುತ್ತದೆ. ಇದಕ್ಕೆ ಪ್ರತಿಯಾಗಿ ಹೇಳುವುದಾದರೆ, ನಮ್ಮ ವಿಚಾರಗಳಂತೆ ಅವರೂ ತಮ್ಮ ವಿಚಾರಗಳನ್ನು ಹೇಳುವುದಾದರೆ, ಅದಕ್ಕೆ ನಮ್ಮ ಒಪ್ಪಿಗೆಯೂ ಇದೆ. ಈ ಧ್ವಜವನ್ನು ಅಂಗೀಕರಿಸುವುದನ್ನು ವಿರೋಧಿಸಿದವರನ್ನು ಅಥವಾ ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ತಿದ್ದುಪಡಿಗಳನ್ನು ಮಂಡಿಸಿರುವವರನ್ನು ಉದ್ದೇಶಿಸಿ ನಾನು ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ ಹಾಗೂ ಈ ಧ್ವಜದ ಅಂಗೀಕಾರಕ್ಕೆ ಅನುಮೋದನೆ ನೀಡಿರುವ ಹಿಂದೂ ಸದಸ್ಯರಿಗೂ

ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಅವರಿಗೆ ತಮ್ಮ ದೂರುಗಳನ್ನು ಹೇಳಿಕೊಳ್ಳಲು ಕೆಲವು ಆಧಾರಗಳು ಇರಬಹುದು–ಆದರೆ, ಕಳೆದ ೨೭ ವರ್ಷಗಳಿಂದಲೂ ನಮ್ಮ ಉದಾತ್ತ ಆಶೋತ್ತರಗಳ ಹಾಗೂ ಉದಾರ ಭಾವನೆಗಳಿಗೆ ಈ ಧ್ವಜವು ಲಾಂಛನವಾಗಿದೆ ಎಂಬುದನ್ನು ಮರೆಯುವಂತಿಲ್ಲ. ೨೭ ವರ್ಷಗಳ ಹೋರಾಟದ ಹಾಗೂ ತ್ಯಾಗ ಬಲಿದಾನಗಳ ತರುವಾಯ, ಈ ಸದನದ ಮುಂದೆ ಅಂಗೀಕಾರಕ್ಕಾಗಿ ಇತರ ಯಾವುದೇ ಧ್ವಜವನ್ನು ಪ್ರದರ್ಶಿಸುವುದನ್ನೂ ಸಮರ್ಥಿಸಿಕೊಳ್ಳಬಹುದೇ? ಕಾಂಗ್ರೆಸ್ಸಿನಿಂದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಪ್ರಾರಂಭಿಸಿದ್ದುದು ಯಾವುದೇ ನಿರ್ದಿಷ್ಟ ಸಮುದಾಯದ ಅಥವಾ ವರ್ಗದ ಪರವಾಗಿ ಅಲ್ಲ. ಈ ಧ್ವಜದ ಅಡಿಯಲ್ಲಿ ಕಾಂಗ್ರೆಸ್ ಹಾಗೂ ಖಿಲಾಫತ್, ಹಿಂದೂಗಳು ಹಾಗೂ ಮುಸ್ಲಿಮರು, ಒಟ್ಟಾಗಿ ಈ ದೇಶದ ಜನರಲ್ಲಿ ಉತ್ಸಾಹದ ಚಿಲುಮೆಯನ್ನು ತುಂಬಿದರು ಮತ್ತು ಸಿಖ್ ಸಮುದಾಯದವರು ಅಸಂಖ್ಯಾತ ತ್ಯಾಗ–ಬಲಿದಾನ ಮಾಡಿದ್ದಾರೆ. ಭಾರತದ ಪ್ರತಿಯೊಂದು ಸಮುದಾಯದವರು ರಕ್ತದ ಕೋಡಿ ಹರಿಸಿದ್ದಾರೆ ಹಾಗೂ ಸರ್ವಸ್ವವನ್ನು ತ್ಯಾಗಮಾಡಿದ್ದಾರೆ. ಈ ಧ್ವಜವು ಯಾವುದೇ ನಿರ್ದಿಷ್ಟ ಸಮುದಾಯಕ್ಕೆ ಸೇರಿಲ್ಲ. ಇದು ನಮ್ಮೆಲ್ಲರಿಗೂ ಸೇರಿದ ವಿಷಯ. ಈ ಧ್ವಜದ ಮುಖ್ಯ ಲಕ್ಷಣಗಳೆಂದರೆ, ಇದು ಸಮಗ್ರ ದೇಶಕ್ಕೆ ಸೇರಿದ್ದರೂ, ಪ್ರತಿಯೊಬ್ಬ ವ್ಯಕ್ತಿಯು, ಅವನು ಹಿಂದೂ ಆಗಿರಲಿ ಮುಸ್ಲಿಮ್ ಆಗಿರಲಿ, ಅಥವಾ ಕ್ರೈಸ್ತರಾಗಿರಲಿ, ಅವನು ಈ ಧ್ವಜವನ್ನು ತನ್ನದೇ ಧ್ವಜ ಎಂದೇ ಹೇಳುತ್ತಾನೆ. ಅದರಿಂದ ಅವನಿಗೆ ಸಂತೋಷ ಹಾಗೂ ಅದಕ್ಕೆ ಅವನು ಗೌರವ ಸೂಚಿಸುತ್ತಾನೆ.

ಧ್ವಜದಲ್ಲಿರುವ ಹಸಿರು ಬಣ್ಣವು, ನಮ್ಮ ಮುಸ್ಲಿಮ್ ಬಾಂಧವರನ್ನು ಪ್ರತಿನಿಧಿಸಲು ತೆಗೆದುಕೊಳ್ಳಲಾಗಿದೆ ಹಾಗೂ ಬಿಳಿ ಬಣ್ಣವು ಕ್ರಿಶ್ಚಿಯನ್ನರನ್ನು ಹಾಗೂ ಇತರ ಸಮುದಾಯಗಳನ್ನು ಮತ್ತು ಕೇಸರಿ ಬಣ್ಣವು ಸಿಖ್ಖರನ್ನು ಪ್ರತಿನಿಧಿಸುತ್ತಿದೆ ಎಂದು ಹೇಳಬಹುದು. ಪ್ರತಿಯೊಂದು ಸಮುದಾಯದವರನ್ನು ಈ ಧ್ವಜವು ಪ್ರತಿನಿಧಿಸುತ್ತದೆ. ಆದರೆ, ಈ ಬಣ್ಣಗಳು, ಆ ಸಮುದಾಯಗಳನ್ನಷ್ಟೇ ಪ್ರತಿನಿಧಿಸುತ್ತವೆ ಎಂದು ಮತ್ತು ಅವುಗಳಿಗೆ ಬೇರೆ ಇತರ ಮಹತ್ತ್ವ ಇಲ್ಲವೆಂದು ಅರ್ಥವಲ್ಲ. ಈ ಬಣ್ಣಗಳಿಗೆ ಇತರ ಅರ್ಥವಿವರಣೆಗಳು ಸಹ ಇರಬಹುದು. ಅದೇ ರೀತಿ ಅವು ಹಿಂದೂಗಳನ್ನು ಸಹ ಪ್ರತಿನಿಧಿಸುತ್ತವೆ. ನಾನು ಈಗಾಗಲೇ ಹೇಳಿರುವಂತೆ, ಧ್ವಜದ ಗುಣಲಕ್ಷಣ, ಪ್ರತಿಯೊಬ್ಬರಿಗೂ ಅವರವರದೇ ವಿಚಾರಗಳನ್ನು ತಿಳಿಸಲು ಅವಕಾಶ ಕೊಡುತ್ತದೆ. ವೇದಗಳಲ್ಲಿ, "ರಾಷ್ಟ್ರದ" ಅರ್ಥ ವಿವರಿಸಲಾಗಿದೆ. ಆದರೆ, ಅದು ಮುಜುಗರ ತರುವಂಥದ್ದು ಮತ್ತು ಅದನ್ನು ಕವಿಗಳು ಮುಂತಾದವರು ಅತಿಶಯವಾಗಿ ಹೊಗಳಿದ್ದಾರೆ. ಆದರೆ, ಇದನ್ನು ಇನ್ನೊಂದು ವಸ್ತುವಿನೊಂದಿಗೆ ಯಾರೂ ಗುರುತಿಸುವುದಿಲ್ಲ.

ಅದೇ ರೀತಿಯಾಗಿ, ಮಾನವಕುಲದ ಉತ್ಕೃಷ್ಟ ಗುಣಗಳನ್ನು ಉದಾಹರಣೆಗೆ: ಸತ್ಯ, ಸೌಂದರ್ಯ, ಕರ್ತವ್ಯ, ಉಪಕಾರ, ದಯೆ ಮತ್ತು ಶ್ರದ್ಧೆ (ಭಕ್ತಿ)–ಇವುಗಳ ಬಗ್ಗೆ ಮಹಾಕವಿಗಳು ಅನೇಕ ವಿಚಾರಗಳನ್ನು ಅತ್ಯಂತ ಸುಂದರವಾಗಿ ವರ್ಣಿಸಿದ್ದಾರೆ. ಎಲ್ಲರೂ ಒಂದೇ ವಿಷಯ ಕುರಿತು ಕಾವ್ಯ ರಚಿಸಿದ್ದರೂ, ಅವರದೇ ಆದ ಶೈಲಿಯಲ್ಲಿ ರಚಿಸಿದ್ದಾರೆ. ಅವೇ ಸದ್ಗುಣಗಳ ಮೇಲೆ ಕೆಲವರು ಕೆಲವು ವಿಷಯ ವರ್ಣಿಸಿದ್ದಾರೆ. ಇನ್ನು ಕೆಲವರು ಇನ್ನು ಕೆಲವು ವಿಷಯಗಳನ್ನು ವರ್ಣಿಸಿದ್ದಾರೆ. ಅವರು ಬೇರೆ ಬೇರೆ ವಿಚಾರಗಳನ್ನು ಹಾಗೂ ಬೇರೆ ಬೇರೆ ಮನೋಭಾವನೆಗಳನ್ನು, ಬೇರೆ ಬೇರೆ ರೀತಿಯಲ್ಲಿಯೇ ವರ್ಣಿಸಿದ್ದಾರೆ. ಅದೇ ರೀತಿಯಾಗಿ ಈ ಧ್ವಜದ ವಿಚಾರದಲ್ಲಿಯೂ, ಪ್ರತಿಯೊಬ್ಬರೂ ತಮ್ಮ ತಮ್ಮ ಭಾವನೆಗಳಿಗೆ ತಕ್ಕಂತೆ ಧ್ವಜವನ್ನು ಸ್ತುತಿಸಿ, ತಮ್ಮದೇ ರಾಗದಲ್ಲಿ ಹಾಡಬಹುದು. ಪ್ರತಿಯೊಂದು ಸಮುದಾಯವು, ಈ ಧ್ವಜವು ತನ್ನದೇ ಧ್ವಜವೆಂದು ಭಾವಿಸಬಹುದು. ಕೆಲವು ಜನರು, ಪತ್ರಿಕಾ ಹೇಳಿಕೆ ನೀಡಿ, ಧ್ವಜದಲ್ಲಿ, ಹಿಂದೂಗಳ ಬಣ್ಣಗಳೇ ಬಹಳ ಪ್ರಧಾನವಾಗಿವೆ ಎಂದು ಮತ್ತು ಈಗ ಇರುವ ಧ್ವಜವನ್ನು ಬದಲಾಯಿಸಬೇಕು ಎಂದು ಆಕ್ಷೇಪಿಸಿದ್ದಾರೆ. ಇತರ ಸಮುದಾಯಗಳೊಂದಿಗೆ, ಹಿಂದೂಗಳು ಈ ಧ್ವಜಕ್ಕಾಗಿ ತಮ್ಮ ರಕ್ತ ಹರಿಸಿರಲಿಲ್ಲವೇ ಹಾಗೂ ತಮ್ಮ ಬಂಧುಗಳನ್ನು ಕಳೆದುಕೊಂಡಿಲ್ಲವೇ

ಎಂದು ಕೇಳಿದ್ದಾರೆ. ಯಾರು ಸ್ವಾತಂತ್ರ್ಯಕ್ಕಾಗಿ ನೋವುಗಳನ್ನು ಅನುಭವಿಸಿದ್ದಾರೋ ಮತ್ತು ಯಾರು ಸರ್ವಸ್ವ ತ್ಯಾಗಮಾಡಿದ್ದಾರೋ ಹಾಗೂ ಹೋರಾಟದಲ್ಲಿ ಹುತಾತ್ಮರಾದರೋ, ಆ ಹಿಂದೂಗಳ ಕರೆಯನ್ನು ನಾವು ಹೇಗೆ ಮರೆಯಲು ಸಾಧ್ಯ. ಈ ಅಸಂತುಷ್ಟ (ಹಿಂದೂಗಳು) ಸ್ವಾತಂತ್ರ್ಯದ ಉದಯವನ್ನು ಕಾಣಲು ಅವಕಾಶವಿಲ್ಲವೇ? ನಾವು, ಅವರಿಗೆ ಅಷ್ಟು ಕೃತಜ್ಞರಾಗಿರುವುದು ಬೇಡವೇ? ಅವರಿಗೆ ಸೂಕ್ತ ಗೌರವ ನೀಡುತ್ತಾ, ಅತ್ಯಂತ ಸಂಪ್ರದಾಯಸ್ಥನಾಗಿರುವ ಒಬ್ಬ ಹಿಂದೂ ಕೂಡಾ, ಹಿಂದೂ ಭಾವನೆಗಳನ್ನು ಸಾಕಷ್ಟು ಪ್ರತಿನಿಧಿಸುತ್ತಾನೆ. ಈ ಧ್ವಜವು, ಹಿಂದೂಗಳ ಮತ್ತು ಹಿಂದೂತ್ವದ ಭಾವನೆಗಳನ್ನು ನಿಜವಾಗಿ ಪ್ರತಿನಿಧಿಸುತ್ತದೆ. ಧ್ವಜದ ಬಣ್ಣವು ಕೆಂಪು ಇರಬೇಕೆಂದು ವೇದಗಳು ಹೇಳುತ್ತವೆ. ಆದ್ದರಿಂದ, ವೇದಗಳ ಪ್ರಕಾರ ಹಿಂದೂಗಳ ಧ್ವಜದ ಬಣ್ಣ ಕೆಂಪು, ಮೇಲ್ಭಾಗದಲ್ಲಿರುವ ಕೆಂಪುಬಣ್ಣವು ಅಗ್ನಿ ಮತ್ತು ಸೂರ್ಯನನ್ನು ಪ್ರತಿನಿಧಿಸುತ್ತದೆ. ಬಿಳಿ ಬಣ್ಣವು ಚಂದ್ರನನ್ನು ಪ್ರತಿನಿಧಿಸುತ್ತದೆ. ಹಿಂದೂ ಪುರಾಣಗಳ ಪ್ರಕಾರ ಸೃಷ್ಟಿಕರ್ತನು (ಬ್ರಹ್ಮನು) ಸೃಷ್ಟಿಸಿದ ಮೊದಲನೆಯದು ಸೂರ್ಯ ಮತ್ತು ಚಂದ್ರ. ಹಿಂದುಗಳು ಎಂದರೆ ಆರ್ಯರು, ಪ್ರಾರಂಭದಿಂದಲೂ ಸೂರ್ಯ, ಅಗ್ನಿ ಮತ್ತು ಚಂದ್ರರನ್ನು ಪೂಜಿಸುತ್ತಿದ್ದರು. ಸೂರ್ಯ ಮತ್ತು ಚಂದ್ರರು ಪೂಜಾರ್ಹ ದೇವತಾ ವಿಗ್ರಹಗಳು. ಈ ಧ್ವಜವು ಸೂರ್ಯ, ಚಂದ್ರ ಹಾಗೂ ಅಗ್ನಿ, ಈ ದೇವತೆಗಳನ್ನೇ ಪ್ರತಿನಿಧಿಸುತ್ತದೆ. ಧ್ವಜದ ಕೊನೆಯಲ್ಲಿರುವ ಹಸಿರು ಬಣ್ಣವು ನಮ್ಮ ಮುಸ್ಲಿಮ್ ಬಾಂಧವರನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಈಗಾಗಲೇ ನಾನು ಹೇಳಿದ್ದೇನೆ. ಆದರೆ, ಅದೇ ಕಾಲಕ್ಕೆ, ಈ ಬಣ್ಣವು ಹಿಂದೂಗಳನ್ನು ಅದೇ ರೀತಿ ಪ್ರತಿನಿಧಿಸುತ್ತದೆ. ನವಗ್ರಹಗಳ ಬಗ್ಗೆ ನಿಮಗೆಲ್ಲರಿಗೂ ತಿಳಿದಿದೆ. ಬುಧ ಗ್ರಹವು ಅತ್ಯಂತ ಮುಖ್ಯವಾದ ಗ್ರಹ. ಹಸಿರು ಬಣ್ಣವು ಬುಧ ಗ್ರಹವನ್ನು ಪ್ರತಿನಿಧಿಸುತ್ತದೆ. ಹಿಂದೂ ಪುರಾಣಗಳ ಪ್ರಕಾರ, ಸಂಪತ್ತಿನ ದೇವರು, ಬುಧನ ಬಣ್ಣವಾದ ಹಸಿರು ಬಣ್ಣವು, ಸಮಾಜದ ಸಮೃದ್ಧಿಯ ಹಾಗೂ ಸಂತೋಷದ ಸಂಕೇತವಾಗಿದೆ. ಆ ಬಣ್ಣವನ್ನೇ ಈ ಧ್ವಜದಲ್ಲಿಯೂ ಕೊಡಲಾಗಿದೆ. ಅಗ್ನಿ, ಸೂರ್ಯ, ಚಂದ್ರ ಮತ್ತು ಬುಧ ಇವರನ್ನು ಪ್ರತಿನಿಧಿಸುವ ಈಗಿನ ಧ್ವಜಕ್ಕಿಂತ ಉತ್ತಮವಾದುದು ಹಿಂದುಗಳಿಗೆ ಇನ್ನಾವುದಿದೆ. ಅಷ್ಟೇ ಅಲ್ಲದೇ, ಧ್ವಜದ ಮಧ್ಯದಲ್ಲಿ "ಚಕ್ರ" ಇದೆ. ಇದು ಅತ್ಯಂತ ಗಮನಾರ್ಹವಾದುದು. ಹಿಂದೂಗಳು "ಅವತಾರ"ಗಳಿಗೆ ಬಹಳ ಮಹತ್ತ್ವ ಕೊಟ್ಟಿದ್ದಾರೆ. ಪೃಥ್ವಿಯ ಮೇಲೆ ಪಾಪಕೃತ್ಯಗಳು, ನೋವುಗಳು ಹಾಗೂ ಗಲಭೆಗಳು ಹೆಚ್ಚಾದಾಗ, ಹಿಂದೂ ಪುರಾಣಗಳ ಪ್ರಕಾರ, ದೇವರು ಅವತರಿಸಿ, ಶಾಂತಿ ನೆಮ್ಮದಿಗಳನ್ನು ನೆಲೆಗೊಳಿಸಿ, ಸದ್ಗುಣಗಳ ಮಾರ್ಗದರ್ಶನ ಮಾಡಿಸುತ್ತಾರೆ. ಈ ದೇವತಾ ಸ್ವರೂಪವನ್ನು "ಅವತಾರ" ಎಂದು ಕರೆಯುತ್ತಾರೆ. ಭಗವಾನ್ ಕೃಷ್ಣನ ಅವತಾರ ದೇವರ ಅವತಾರ. ಅದೇ ರೀತಿ ಭಗವಾನ್ ಬುದ್ಧನೂ ಅವತಾರ ಪುರುಷ. ಸುದರ್ಶನ ಚಕ್ರವು ಭಗವಾನ್ ಕೃಷ್ಣನ ದೈವಿಕ ಆಯುಧ. ಪ್ರತಿಯೊಬ್ಬ ಹಿಂದೂವಿಗೂ 'ಸುದರ್ಶನ ಚಕ್ರ' ತಿಳಿದಿದೆ. ಆ ಚಕ್ರವನ್ನು ಧ್ವಜದಲ್ಲಿ ಅಳವಡಿಸಲಾಗಿದೆ. ಹಿಂದೂಗಳು ಭಗವಾನ್ ಬುದ್ಧನನ್ನು ಅವತಾರಪುರುಷನೆಂದು ಭಾವಿಸಿದ್ದಾರೆ ಮತ್ತು ಧ್ವಜದಲ್ಲಿರುವ ಚಕ್ರವು ಭಗವಾನ್ ಬುದ್ಧನನ್ನು ಸಹ ಪ್ರತಿನಿಧಿಸುತ್ತದೆ ಮತ್ತು ಹಿಂದೂಗಳ ನಂಬಿಕೆಗಳ ಪ್ರಕಾರ, ಅಂತಿಮ ಅವತಾರ ಆಗಿದ್ದಾರೆ ಅಥವಾ ದೇವ ಪುರುಷನು ಭೂಮಿಯ ಮೇಲೆ ಈಗಾಗಲೇ ಅವತರಿಸಿದ್ದರೆ, ಈಗಿರುವ ಭಯಂಕರ ಗಲಭೆಗಳಿಂದ ಹಾಗೂ ದುರ್ಗುಣಗಳಿಂದ ಭೂಮಿಯನ್ನು ಮುಕ್ತಗೊಳಿಸಿ, ಈ ಜಗತ್ತಿನಲ್ಲಿ ಶಾಂತಿ, ನ್ಯಾಯ ಹಾಗೂ ನೆಮ್ಮದಿ (ಸುವ್ಯವಸ್ಥೆ)ಯನ್ನು, ಪುನಃ ನೆಲೆಗೊಳಿಸುತ್ತಾನೆ. ಆ ದೈವೀ ಪುರುಷನು ನಮ್ಮ ನಡುವೇ ಇದ್ದಾನೆ. ಅವನು ಮತ್ತಾರೂ ಅಲ್ಲ. ಅವರೇ ಮಹಾತ್ಮ ಗಾಂಧಿ. ಈ ದಿನ, ನಾವು ಅವರನ್ನು ಒಪ್ಪದಿರಬಹುದು. ಆದರೆ ಕೆಲವು ಕಾಲದ ಅನಂತರ ಹಿಂದೂಗಳು ಅವರನ್ನು ಇತ್ತೀಚಿನ ಅವತಾರವೆಂದು ಪರಿಗಣಿಸಬಹುದು. ಅವರ ಚರಕದ ಗುರುತು ಧ್ವಜದಲ್ಲಿ ಪ್ರತಿಬಿಂಬಿಸಿದೆ. ಆದ್ದರಿಂದ, ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರೂ, ಅದರಲ್ಲೂ ಹಿಂದೂಗಳು ಧ್ವಜದಲ್ಲಿರುವ ಚಕ್ರದ ವಿಷಯದಲ್ಲಿ ಆನಂದ ಕಾಣುತ್ತಾರೆ ಎಂದು ನಾನು ಹೇಳುತ್ತೇನೆ. ನಾನು ಈಗಾಗಲೇ ಹೇಳಿರುವಂತೆ, ಧ್ವಜದ ಪ್ರತಿಯೊಂದು

ಭಾಗವು ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಸುಸಂಗತವಾಗಿದೆ. ಆದ್ದರಿಂದ, ಅದನ್ನು ವಿರೋಧಿಸುವುದನ್ನು ಬಿಟ್ಟು, ಹಿಂದೂಗಳು ಅದನ್ನು ಗೌರವಿಸಬೇಕು ಹಾಗೂ ಧ್ವಜದ ಗೌರವವನ್ನು ರಕ್ಷಿಸುವುದಕ್ಕಾಗಿ ಎಂಥ ತ್ಯಾಗಕ್ಕೂ ಸಿದ್ಧರಾಗಿರಬೇಕು. ನನಗಂತೂ ಪೂರ್ಣ ಸಂತೃಪ್ತಿಯಾಗಿದೆ. ಆದರೆ, ಅದರಲ್ಲಿ ಕೆಲವು ಜನ ಕೆಲವು ಸೇರ್ಪಡೆ ಮಾಡಬೇಕೆಂದು ಬಯಸುತ್ತಾರೆ. ಧ್ವಜದಲ್ಲಿ ಯಾವುದೇ ಬದಲಾವಣೆ ಮಾಡದೇ ಒಪ್ಪಿಕೊಳ್ಳಬೇಕೆಂಬುದು ಸೂಕ್ತವೆಂಬುದು ನನ್ನ ಅಭಿಪ್ರಾಯ ಮತ್ತು ಇದಕ್ಕಾಗಿ ನಾನು ಪ್ರಯತ್ನಮಾಡಿದ್ದೇನೆ. ಅವರ ಪ್ರಸ್ತಾವಗಳಿಗೆ ಹಾಗೂ ಭಾವನೆಗಳಿಗೆ ಸೂಕ್ತ ಮಾನ್ಯತೆ ನೀಡಲಾಗಿದೆ ಎಂಬ ಭರವಸೆ ನೀಡಲು ನಾನು ಇಚ್ಛಿಸುತ್ತೇನೆ. ಆದರೆ, ಯಾವ ಧ್ವಜದ ಅಡಿಯಲ್ಲಿ ಇಡೀ ದೇಶ ಹಾಗೂ ಈ ದಿನ ಇದನ್ನು ವಿರೋಧಿಸುತ್ತಿರುವವರು ಕೂಡಾ ಆ ಧ್ವಜದ ಅಡಿಯಲ್ಲಿಯೇ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದಾರೆ. ಆದ್ದರಿಂದಲೇ ಇದನ್ನು ರಾಷ್ಟ್ರಧ್ವಜ ಎಂಬುದಾಗಿ ಅಂಗೀಕರಿಸಬೇಕು. ಈ ಧ್ವಜದಲ್ಲಿ ಬದಲಾವಣೆ ಮಾಡಿದ್ದಾದ ಮೇಲೆ ಯಾರೊಬ್ಬ ಹಿಂದೂ, ಯಾವುದೇ ರೀತಿ ಅಸಮಾಧಾನ ಪಡುವುದಕ್ಕೆ ಯಾವುದೇ ಕಾರಣ ಇಲ್ಲ.

ಮಾನ್ಯರೆ, ಈ ದೇಶವೇ ಈ ಜಗತ್ತಿಗೆ ಯಾವಾಗಲೂ ಮಾರ್ಗದರ್ಶಕವಾಗಿದೆ. ಇದು ಜಗತ್ತನ್ನು ಕತ್ತಲೆಯಿಂದ ಬೆಳಕಿನ ಕಡೆಗೆ ಕೊಂಡೊಯ್ಯುತ್ತದೆ. ಕೆಲವು ವರ್ಷಗಳ ಹಿಂದೆ, ಈ ದೇಶವು ಸುದೈವವಶಾತ್, ಒಬ್ಬ ಮಹಾನ್ ವ್ಯಕ್ತಿಯನ್ನು ಈ ಜಗತ್ತಿಗೇ ನೀಡಿದೆ. ಇಡೀ ಜಗತ್ತನ್ನೇ ವಿನಾಶಗೊಳಿಸಿದ ಎರಡು ವಿಶ್ವ ಸಮರಗಳಿಂದಾಗಿ ಮಾನವ ಕುಲವೇ ಅನೇಕ ಕಷ್ಟ ನಷ್ಟಗಳಿಗೆ, ದುಃಖಗಳಿಗೆ ಗುರಿಯಾಗಿದೆ ಹಾಗೂ ಮೂರನೇ ವಿಶ್ವ ಸಮರದ ಕಾರ್ಮೋಡಗಳ ನೆರಳಿನಲ್ಲಿ ನಾವು ಇರುವಾಗ, ಆ ಮಹಾನ್ ವ್ಯಕ್ತಿಯ ಸಂದೇಶವೇ ಈ ಧ್ವಜ, ಅದು ಕಲ್ಲು ಬಂಡೆಯಂತೆ ಅಚಲವಾಗಿ ನಿಂತು, ಜಗತ್ತಿಗೇ ದಾರಿ ದೀಪವಾಗಿದೆ. ಅಂಥ ಯುದ್ಧಗಳ ಭ್ರಾಂತಿಯನ್ನು ಬಿಟ್ಟುಬಿಡಬೇಕೆಂದು ಸೂಚಿಸುತ್ತದೆ. ಈ ಜಗತ್ತು ಅವರನ್ನು ಅನುಸರಿಸಿ ಮುನ್ನಡೆದರೆ, ಶಾಂತಿ ಹಾಗೂ ಸಮೃದ್ಧಿಯಿಂದ ಇರಬಹುದು. ಅಂಥ ಧ್ವಜವೇ, ಮಹಾತ್ಮ ಗಾಂಧಿಯವರ ಪ್ರಿಯ ಲಾಂಛನವಾಗಿದೆ.

ನಮಗೆ ಹಾಗೂ ಇಡೀ ವಿಶ್ವದ ಜನತೆಗೆ ಭಗವಂತನು ಶಕ್ತಿ ಹಾಗೂ ಜ್ಞಾನವನ್ನು ನೀಡಿ, ತಲಪಬೇಕೆಂದಿರುವ ಗುರಿ ಮುಟ್ಟುವಂತೆ ಅನುಗ್ರಹಿಸಲಿ ಎಂದು ದೇವರಲ್ಲಿ ನಾನು ಪ್ರಾರ್ಥಿಸುತ್ತೇನೆ. ಭಾರತವು ಮಾತ್ರ ಜಗತ್ತು ಗುರಿಮುಟ್ಟುವಲ್ಲಿ ಅದಕ್ಕೆ ಮಾರ್ಗದರ್ಶನ ನೀಡಬಲ್ಲದು. ಭಾರತ ಜಗತ್ತಿಗೆ ಒಳಿತನ್ನು ಮಾಡಲು ಸಾಧ್ಯವೆಂದು ನಿರೀಕ್ಷಿಸಬಹುದು]*.

**ಶ್ರೀ ತಾಜಮಲ್ ಹುಸೇನ್** : ನಾನೂ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಪಟ್ಟಿಯಲ್ಲಿ ನನ್ನ ಹೆಸರು ಇರದಿದ್ದರೂ ಅವಕಾಶ ನೀಡಿದರೆ ಎರಡು ಮೂರು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ದಯವಿಟ್ಟು ಅವಕಾಶ ನೀಡುವಿರಾ?

**ಮಾನ್ಯ ಸಭಾಧ್ಯಕ್ಷರು** : ಇಲ್ಲ, ಭಾಷಣಕಾರರ ಪಟ್ಟಿಯಲ್ಲಿ ೨೫ಕ್ಕಿಂತ ಹೆಚ್ಚು ಹೆಸರುಗಳಿವೆ.

**ಶ್ರೀ ತಾಜಮಲ್ ಹುಸೇನ್** : ತರುವಾಯ ನನಗೆ ಅವಕಾಶ ಸಿಗಬಹುದೆಂದು ನಿರೀಕ್ಷಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇನ್ನು ನಮಗೆ ಕೇವಲ ನಲವತ್ತು ನಿಮಿಷಗಳ ಕಾಲಾವಕಾಶ ಇರುವುದರಿಂದ ಸದಸ್ಯರು ತಮ್ಮ ಭಾಷಣಗಳನ್ನು ಸಂಕ್ಷಿಪ್ತಗೊಳಿಸಬೇಕೆಂದು ಕೋರುತ್ತೇನೆ. ಹಾಗೆ ಮಾಡಿದರೆ ಮಾತ್ರ ಎಷ್ಟು ಜನ ಮಾತನಾಡಲು ಇಚ್ಛಿಸುತ್ತಾರೋ ಅವರಿಗೆ ಮಾತನಾಡಲು ಅವಕಾಶ ನೀಡಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಭಾಷಣಕಾರರಿಗೆ ಎರಡು ನಿಮಿಷಗಳ ಕಾಲ ಮಾತನಾಡಲು ಅವಕಾಶ ನೀಡುತ್ತೇನೆ.

**ಶ್ರೀ ಜೋಸೆಫ್ ಆಲ್ಬನ್ ಡಿ'ಸೋಜಾ** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ೨ ಅಥವಾ ೩ ನಿಮಿಷಗಳಿಗಿಂತ ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳುವುದಿಲ್ಲವೆಂದು ನಿಮಗೆ ಮತ್ತು ಸದನಕ್ಕೆ ಭರವಸೆ ನೀಡುತ್ತೇನೆ. ನಾನು ಈ ಸಭೆಯ ವೇದಿಕೆಯ ಮೇಲೆ, ಮೊದಲನೆಯದಾಗಿ ಒಬ್ಬ ಭಾರತೀಯನಾಗಿ

ಎರಡನೆಯದಾಗಿ ಭಾರತೀಯ ಕ್ರಿಶ್ಚಿಯನ್ ಆಗಿ ಮಾತನಾಡಲು ನಿಂತಿದ್ದೇನೆ. (ಕೇಳಿ, ಕೇಳಿ), ಏಕೆಂದರೆ, ಈ ದಿನ, ಎಂದರೆ ರಾಷ್ಟ್ರಧ್ವಜವನ್ನು ಅಂಗೀಕರಿಸುವ ಸೂಚನೆಯನ್ನು ಮಂಡಿಸಿರುವ ದಿನ, ರಾಷ್ಟ್ರದ ಎಲ್ಲೆಡೆ ಸಂತೋಷ ಸಂಭ್ರಮಗಳು ತುಂಬಿರುವ ದಿನ. ಮೊದಲನೆಯದಾಗಿ, ಪ್ರತಿಯೊಬ್ಬ ಭಾರತೀಯರ ಮನೆಗಳಲ್ಲಿ, ಜೊತೆಯಲ್ಲಿಯೇ ಪ್ರತಿಯೊಬ್ಬ ಭಾರತೀಯ ಕ್ರಿಶ್ಚಿಯನ್‌ರ ಮನೆಗಳಲ್ಲಿ ಸಂತೋಷ, ಸಂಭ್ರಮ ಇದೆ. ಮಾನ್ಯರೆ, ಇದು ನಿರ್ಣಯವಷ್ಟೇ ಅಲ್ಲ. ಈ ನಿರ್ಣಯವನ್ನು ಮಂಡಿಸಿದವರು ಮಹಾನ್ ನೇತಾರರಾದ ಪಂಡಿತ್ ಜವಾಹರಲಾಲ್ ನೆಹರು ಅವರು, ಈ ಧ್ವಜವು ಹೇಗೆ, ಪ್ರಾಚೀನ ಮಹಾನ್ ಪರಂಪರೆಯನ್ನು ಹಾಗೂ ಅದೇ ರೀತಿ ಪ್ರಾಚೀನ ಕಾಲದ ಐತಿಹಾಸಿಕ ವಸ್ತುಸ್ಥಿತಿಗಳನ್ನು ಪ್ರತಿನಿಧಿಸುತ್ತದೆ ಎಂಬುದನ್ನು ವಿದ್ವತ್ಪೂರ್ಣ ಮಾತುಗಳಲ್ಲಿ ನಿರೂಪಿಸಿದ್ದಾರೆ. ಮಾನ್ಯರೆ, ಆ ತರುವಾಯ ಧ್ವಜವು ಪ್ರಸ್ತುತವಾಗಿ ಏನನ್ನು ಪ್ರತಿನಿಧಿಸುತ್ತದೆ ಎಂಬುದನ್ನು ವಿವರಿಸಿದ್ದಾರೆ. ಪ್ರಸ್ತುತವಾಗಿ ಈ ಧ್ವಜವು, ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ನಡೆದ ಹೋರಾಟದ ಏಳು ಬೀಳುಗಳನ್ನು ಹಾಗೆಯೇ ಇದೆಲ್ಲಕ್ಕಿಂತ ಹೆಚ್ಚಾಗಿ, ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ವಿಜಯವನ್ನು ಪ್ರತಿನಿಧಿಸುತ್ತದೆ ಎಂಬುದನ್ನು ನಮಗೆ ಹೇಳಿದ್ದಾರೆ. ಮಾನ್ಯರೆ, ಈ ನಿರ್ಣಯವನ್ನು ಪಂಡಿತ್ ಜವಾಹರಲಾಲ್ ನೆಹರು ಅವರೇ ಏಕೆ ಮಂಡಿಸಿದರು. ಕೇವಲ ತೃಪ್ತಿಗಾಗಿಯೇ ಅಥವಾ ಇದು ಸೂಕ್ತವಾದುದೇ? ಏಕೆಂದರೆ ಅವರ ಮಹಾನ್ ವ್ಯಕ್ತಿತ್ವದಿಂದಾಗಿ ನಿರ್ಣಯವನ್ನು ಮಂಡಿಸಿದ್ದಾರೆ. ಮಾನ್ಯರೆ, ಅವರ ಮಹಾನ್ ವ್ಯಕ್ತಿತ್ವವೆಂದರೇನು? ಇದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಬೇಕೆಂದರೆ, ಅದಕ್ಕೆ ಉತ್ತರ ಅವರ ವ್ಯಕ್ತಿತ್ವ, ಮಾನ್ಯರೆ, ಈ ವ್ಯಕ್ತಿತ್ವಕ್ಕೆ, ತ್ಯಾಗ ಹಾಗೂ ನಿಸ್ವಾರ್ಥಗಳೇ ಕಾರಣ; ಅವರು ತಮ್ಮ ಸರ್ವಸ್ವವನ್ನು ತ್ಯಾಗಮಾಡಿದ್ದಾರೆ ಹಾಗೂ ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ್ದಾರೆ. ಅವರ ವ್ಯಕ್ತಿತ್ವ ಎಲ್ಲರಿಗೂ ಗೊತ್ತಿರುವಂಥದ್ದು, ಚಿರಪರಿಚಿತವಾಗಿರುವಂಥದ್ದು. ಎಲ್ಲ ಕಡೆಗಳಲ್ಲಿ ಅವರು ವಿಜಯಶಾಲಿಗಳು. ಈ ವಿಷಯದಲ್ಲಿ ಇನ್ನೊಂದು ಮಾತು ಹೇಳಬಯಸುತ್ತೇನೆ. ಮಾನ್ಯರೆ, ಈಗ ಹೇಳುತ್ತಿರುವುದು ಆವಶ್ಯಕವಲ್ಲದಿದ್ದರೂ, ಹೇಳಬಹುದು ಎನಿಸುತ್ತದೆ. ಅದೇನೆಂದರೆ, ಭಾರತ ಮಾತೆಯ ಈ ಮಹಾನ್ ಪುತ್ರನು ಭಾರತದಂಥ ರಾಷ್ಟ್ರದ ಅತ್ಯಂತ ಪವಿತ್ರ ದೇಶಕ್ಕೆ ತಮ್ಮನ್ನು ತಾವೇ ಸಮರ್ಪಿಸಿಕೊಂಡಿರುವುದೇ ಕಾರಣ. ನನಗೆ ಕೊಟ್ಟಿರುವ ಸಮಯ ಮುಕ್ತಾಯವಾಗುತ್ತಿದೆ. ಈ ದಿನ ನಾವು ಅಂಗೀಕರಿಸಿರುವ ಧ್ವಜದ ಅಭಯ ರಕ್ಷಣೆಯಲ್ಲಿ ಭಾರತವು ಪ್ರಗತಿಯನ್ನು ಸಾಧಿಸಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಈ ಸಂದರ್ಭದಲ್ಲಿ ಲ್ಯಾಟಿನ್ ಭಾಷೆಯ ಉಕ್ತಿಯನ್ನು ಹೇಳಬೇಕೆಂದೆನಿಸಿದೆ.

***Vivat, crescat, floreat India*** ಭಾರತವು ಅನಂತಕಾಲ ಸುಖ ಸಮೃದ್ಧಿಯಿಂದ ವಿಕಾಸ ಹೊಂದುತ್ತಿರಲಿ.

ಇದರ ಅರ್ಥ (ಆಂಗ್ಲಭಾಷೆಯ ಅನುವಾದ)–ಭಾರತದ ಈ ಧ್ವಜದ ಅಭಯ ರಕ್ಷಣೆಯಲ್ಲಿ, ಅನಂತಕಾಲ ಬೆಳೆಯುತ್ತಿರಲಿ ಹಾಗೂ ಪ್ರವೃದ್ಧಿಸಲಿ ಹಾಗೂ ಭಾರತದ ಕೋಟ್ಯಂತರ ನಾಗರಿಕರಷ್ಟೇ ಅಲ್ಲದೇ ವಿಶಾಲ ಜಗತ್ತಿನ ಸಮಸ್ತ ಜನರ ವೈಭವ ಹಾಗೂ ಅನುಕೂಲಗಳು ಅನಂತಕಾಲ ಇರಲಿ. ಮಾನ್ಯರೆ, ಇದು ವಿನಮ್ರ ಕ್ರಿಶ್ಚಿಯನ್‌ನ ಪ್ರಾರ್ಥನೆ (ಹರ್ಷೋದ್ಗಾರ).

**ಶ್ರೀ ಜೈನಾರಾಯಣ ವ್ಯಾಸ್** (ಜೋಧಪುರ್ ರಾಜ್ಯ) : *[ಮಾನ್ಯರೆ, ರಾಷ್ಟ್ರಧ್ವಜವನ್ನು ಕುರಿತು ನಾನು ಬಹಳಷ್ಟು ಸ್ತುತಿ ಮಾಡುವ ಅಗತ್ಯ ಇಲ್ಲ. ರಾಜಕೀಯವಾಗಿ ಹಿಂದುಳಿದ ರಾಜ್ಯಗಳ ಜನತೆಯ ಪರವಾಗಿ ಅವರ ಜೊತೆಗೂಡಿ ಧ್ವಜಕ್ಕೆ ಗೌರವ ಸಲ್ಲಿಸಲು ಇಚ್ಛಿಸುತ್ತೇನೆ. ಈ ಧ್ವಜದ ಅಡಿಯಲ್ಲಿ ಪ್ರಾಂತ್ಯಗಳ ಜನರಷ್ಟೇ ಅಲ್ಲದೇ, ದೇಶೀಯ ರಾಜ್ಯಗಳ (ಸಂಸ್ಥಾನಗಳ) ಜನರು ಸಹ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹಾಗೂ ವಿದೇಶಿಯರ ದಾಸ್ಯದಿಂದ ಸ್ವತಂತ್ರರಾಗುವುದಕ್ಕಾಗಿ ಹೋರಾಡಿದ್ದಾರೆ. ರಾಜ್ಯದಲ್ಲಿ ನಮ್ಮ ಹೋರಾಟವು, ಈ ಧ್ವಜಕ್ಕೆ ಸಂಬಂಧಿಸಿದ ಹಾಗೂ ಈ ಧ್ವಜಕ್ಕೆ ಸಂಬಂಧಿಸಿದಂತೆ ನಿರ್ಣಯವನ್ನು ಮಂಡಿಸಿರುವ, ಪಂಡಿತ್ ಜವಾಹಾರಲಾಲ್ ನೆಹರು ಅವರೊಂದಿಗೆ ಸಹ ಸಂಬಂಧಿಸಿದೆ. ಅವರ ಮಾರ್ಗದರ್ಶನವಿಲ್ಲದಿದ್ದರೆ, ರಾಜ್ಯಗಳ

ಜನತೆ ನಡೆಸಿದ್ದ ಚಳವಳಿಗಳು ಈಗ ಪಡೆದುಕೊಂಡಂಥ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತಿರಲಿಲ್ಲ. ಈ ದಿನ, ಪಂಡಿತ್ ನೆಹರು ಅವರ ಹೆಸರು, ಧ್ವಜಕ್ಕೆ ಸಂಬಂಧಿಸಿದ್ದುದಾಗಿದೆ. ಈ ಮೊದಲು ಧ್ವಜದಲ್ಲಿ, ಚರಕ ಚಿಹ್ನೆ ಇತ್ತು ಮತ್ತು ಈಗ ಚರಕದ ಬದಲು ಚಕ್ರ ಇದೆ. ಚಕ್ರವು ಕ್ರಿಯಾಶೀಲತೆಯ ಸಂಕೇತವಾಗಿದೆ. ಚಕ್ರ ಸಹಿತವಾದ ಧ್ವಜದ ಅಡಿಯಲ್ಲಿ, ಹತ್ತು ಪ್ರಾಂತ್ಯಗಳ ಜನರು ಈಗಾಗಲೇ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ. ಆದರೆ, ರಾಜ್ಯಗಳ (ಸಂಸ್ಥಾನಗಳ) ಜನರು ಇನ್ನೂ ಕೆಲವು ವಿಷಯಗಳಲ್ಲಿ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕಾಗಿದೆ. ಇದರ ಅರ್ಥ ರಾಜ್ಯಗಳಲ್ಲಿ ಹೊಣೆಗಾರಿಕೆಯುಳ್ಳ ಸರ್ಕಾರವನ್ನು ಪಡೆದುಕೊಳ್ಳಬೇಕಾಗಿದೆ. ಈಗ ಆಳುತ್ತಿರುವ ರಾಜರನ್ನು ತೆಗೆದುಹಾಕಬೇಕೆಂಬುದು ನಮ್ಮ ಮಾತಿನ ಅರ್ಥವಲ್ಲ. ಆದರೆ, ಅವರ ಅಧೀನದಲ್ಲಿ ನಾವು ಸಂಪೂರ್ಣ ಹೊಣೆಗಾರಿಕೆಯುಳ್ಳ ಸರ್ಕಾರ ಇರಬೇಕೆಂದು ಬಯಸುತ್ತೇವೆ. ನಾವು, ಈ ಧ್ವಜದ ಅಡಿಯಲ್ಲಿ ನಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳುತ್ತೇವೆ ಎಂಬುದರಲ್ಲಿ ಸಂಶಯವೇ ಇಲ್ಲ. ಇದು ನಮ್ಮ ರಾಷ್ಟ್ರಧ್ವಜ, ಇದು ಭಾರತದ ಎಲ್ಲ ಸಮುದಾಯಗಳಿಗೆ, ಎಂದರೆ, ಹಿಂದೂಗಳಿಗೆ, ಮುಸ್ಲಿಮರಿಗೆ, ಸಿಖ್ಖರಿಗೆ ಮತ್ತು ಪಾರಸಿಕರಿಗೆ ಸೇರಿದೆ. ಇದು ಭಾರತದ ಎಲ್ಲ ಕಡೆಗಳಲ್ಲಿ ಹಾರಾಡಲು ಮತ್ತು ವೈಸರಾಯ್ ವಸತಿಯ ಮೇಲೆ, ರೈತರ ಸಣ್ಣ ಗ್ರಾಮಗಳಲ್ಲಿ, ರಾಜರ ಅರಮನೆಗಳ ಮೇಲೆ ಈ ಧ್ವಜ ಹಾರಾಡಲಿ. ಇಷ್ಟು ಮಾತುಗಳನ್ನು ಹೇಳುತ್ತಾ ಈ ಧ್ವಜಕ್ಕೆ ಗೌರವ ಸಲ್ಲಿಸುತ್ತೇನೆ.]*

**ಶ್ರೀ ಎನ್. ನಾಗಪ್ಪ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾವು ಯಾವ ಧ್ವಜದ ಅಡಿಯಲ್ಲಿ ಅರವತ್ತು ವರ್ಷಗಳ ಕಾಲ ಹೋರಾಟ ನಡೆಸಿ, ಕೊನೆಯಲ್ಲಿ ವಿಜಯ ಗಳಿಸಿದ್ದೇವೆಯೋ ಆ ಧ್ವಜಕ್ಕೆ ಸಂಬಂಧಿಸಿದಂತೆ ನಮ್ಮ ಗೌರವಾನ್ವಿತ ನೇತಾರರಾದ ಪಂಡಿತ್ ಜವಾಹರಲಾಲ್ ನೆಹರು ಈ ಸದನದ ಮುಂದೆ ಮಂಡಿಸಿದ ನಿರ್ಣಯವನ್ನು ಬೆಂಬಲಿಸಲು ನಿಂತಿದ್ದೇನೆ. ಈ ಧ್ವಜದ ಬಗ್ಗೆ ನಮಗೆ ಹೆಮ್ಮೆ ಎನಿಸಿದೆ. ಇದರಲ್ಲಿ ಮೂರು ಬಣ್ಣಗಳಿವೆ ಮತ್ತು ಈ ಮೂರು ಬಣ್ಣಗಳು ಈ ದೇಶದ ಎಲ್ಲರೊಂದಿಗೆ ಒಡಗೂಡಿರುವ ಮೂರು ಸಮುದಾಯಗಳನ್ನು ಪ್ರತಿನಿಧಿಸುತ್ತವೆ. ಈ ಧ್ವಜವು, ದೇಶದ ಆಶೋತ್ತರಗಳು ಯಾವುವು ಎಂಬುದನ್ನು ಸೂಚಿಸುತ್ತದೆ. ನಾವು ಇತರ ದೇಶಗಳನ್ನು ಆಕ್ರಮಿಸಿ ವಶಪಡಿಸಿಕೊಳ್ಳಲು ಇಚ್ಛಿಸುವುದಿಲ್ಲ. ನಾವು ಸಾಮ್ರಾಜ್ಯಶಾಹಿಗಳಲ್ಲ, ಇತರ ದೇಶಗಳು ನಮಗೆ ತಲೆತಗ್ಗಿಸಬೇಕೆಂಬುದನ್ನು ನಾವು ನೋಡುವುದಿಲ್ಲ. ನಮ್ಮ ಧ್ವಜವು, ಇಡೀ ಜಗತ್ತಿನ ಎಲ್ಲೆಡೆಯಲ್ಲಿ, ಶಾಂತಿ, ಪ್ರಗತಿ ಮತ್ತು ಸಮೃದ್ಧಿಯ ಸಂಕೇತವಾಗಿ ಹಾರಾಡಬೇಕೆಂದು ನಾವು ಬಯಸುತ್ತೇವೆ.

ಮಹಾತ್ಮ ಗಾಂಧಿಯವರು, ಬಡ ಜನರ ಪ್ರತೀಕ ಎಂದರೆ, ಬಡಜನರು ಜೀವನೋಪಾಯವನ್ನು ಗಳಿಸುವ ಕೈಗಾರಿಕೆಯಾಗಿರುವ –'ಚರಕ'ವನ್ನು ಧ್ವಜದಲ್ಲಿ ಸೇರಿಸಿರುವುದು ಅಭಿನಂದನೀಯವಾಗಿದೆ. ಮಾನ್ಯರೆ, ನಾನು ಹರಿಜನ ಸಮುದಾಯದಿಂದ ಬಂದಿದ್ದೇನೆ. ಈ ಸಮುದಾಯವು ನೂಲು ತೆಗೆಯುವುದನ್ನು ಬಹಳಷ್ಟು ಅವಲಂಬಿಸಿದೆ ಹಾಗೂ ಮಹಾತ್ಮ ಗಾಂಧಿಯವರು ಚರಕವನ್ನು ಧ್ವಜದಲ್ಲಿ ಸೇರಿಸಿರುವುದು ಅತ್ಯಂತ ಸೂಕ್ತವಾಗಿದೆ. ಧ್ವಜದ ಲಾಂಛನವು ಒಂದು ಬದಿಯಲ್ಲಿ ಇರುವುದಕ್ಕಿಂತ ಇನ್ನೊಂದು ಬದಿಯಲ್ಲಿಯೂ ಇರಬೇಕೆಂದು, ಪಂಡಿತ್ ನೆಹರು ಅವರು ಹೇಳಿರುವುದು ಸಮಂಜಸವಾಗಿದೆ. ಆದರೆ, ಚಕ್ರವು ಚರಕವನ್ನಷ್ಟೇ ಪ್ರತಿನಿಧಿಸುತ್ತಿಲ್ಲ. ಆದರೆ, ಇದು ದೇಶದ ಪ್ರಗತಿಯನ್ನು ಸಂತೋಷದಿಂದ ಪ್ರತಿನಿಧಿಸುತ್ತದೆ. ಇದು ಉದಯಿಸುತ್ತಿರುವ ಸೂರ್ಯನನ್ನು ಪ್ರತಿನಿಧಿಸುತ್ತದೆ. ನಮ್ಮ ದೇಶದ ಸ್ವಾತಂತ್ರ್ಯ ಉದಯಿಸುತ್ತಿರುವ ಸೂರ್ಯ ಆಗಿದೆ. ನಾವು ಎರಡು ನೂರು ವರ್ಷಗಳವರೆಗೆ ದಾಸ್ಯದಲ್ಲಿದ್ದೆವು ಈಗ ನಾವು ನಮ್ಮ ದೇಶದಲ್ಲಿ ಸ್ವಾತಂತ್ರ್ಯದ ಸೂರ್ಯನನ್ನು ನೋಡುವಂತಾಗಿದೆ.

ಈ ಚಕ್ರವು, ಮಹಾನ್ ವಿಷ್ಣುವಿನ ಚಕ್ರ. ಇಡೀ ಜಗತ್ತನ್ನು ಶಾಂತಿ, ಪ್ರಗತಿ ಹಾಗೂ ಸಮೃದ್ಧಿಯ ಕಡೆಗೆ ತೆಗೆದುಕೊಂಡು ಹೋಗಲು ಸಮರ್ಥವಾದ ಚಕ್ರವನ್ನು ಪ್ರತಿನಿಧಿಸುತ್ತದೆ.

ಮಾನ್ಯರೆ, ನಮ್ಮಲ್ಲಿ ಒಂದು ಧ್ವಜ ಇಟ್ಟುಕೊಂಡಿರುವುದು, ಅದನ್ನು ಹಾರಿಸುವುದು ಹಾಗೂ ಅದು

ಕಟ್ಟಡಗಳ ಮೇಲೆ ಹಾರಾಡುವುದನ್ನು ನೋಡುವುದು ಸುಲಭ. ಆದರೆ, ಧ್ವಜದ ಗೌರವವನ್ನು ಹೇಗೆ ಕಾಪಾಡಬೇಕೆಂಬುದನ್ನು ತಿಳಿದಿರಲೇ ಬೇಕು. ಧ್ವಜದ ಗೌರವವನ್ನು ಕಾಪಾಡುವವನು ರಾಷ್ಟ್ರದ ಗೌರವವನ್ನು ಕಾಪಾಡುತ್ತಾನೆ. ಧ್ವಜವು ಮೇಲೆ ಮೇಲೆ ಹಾರಾಡಿದಷ್ಟು ರಾಷ್ಟ್ರದ ಗೌರವವೂ ಹೆಚ್ಚಾಗುತ್ತದೆ.

ಇಲ್ಲಿಯವರೆಗೆ, ಈ ಧ್ವಜವನ್ನು ಕಾಂಗ್ರೆಸ್ ಧ್ವಜವೆಂದು ಕರೆಯಲಾಗುತ್ತಿತ್ತು. ಇನ್ನು ಮುಂದೆ ಅದನ್ನು ರಾಷ್ಟ್ರಧ್ವಜವೆಂದು ಕರೆಯಲಾಗುವುದು. ಈ ದೇಶದ ಪ್ರತಿಯೊಬ್ಬನು ಅವನು ಹಿಂದೂ ಆಗಿರಲಿ, ಮುಸ್ಲಿಮನಾಗಿರಲಿ ಅಥವಾ ಕ್ರಿಶ್ಚಿಯನ್ ಆಗಿರಲಿ, ಇದೇ ಧ್ವಜವನ್ನೇ ತನ್ನದೆಂದು ಹೇಳಿಕೊಳ್ಳುತ್ತಾನೆ; ಅವನು ಅದನ್ನು ರಕ್ಷಿಸುತ್ತಾನೆ ಮತ್ತು ಆವಶ್ಯಕತೆ ಬಂದಾಗ, ತಾನೊಬ್ಬನೇ ಎಲ್ಲರಿಗಿಂತ ಮೊದಲಿಗನಾಗಿ ನಮ್ಮ ರಾಷ್ಟ್ರದ ಗೌರವವನ್ನು ಕಾಪಾಡುವುದಕ್ಕಾಗಿ ತನ್ನ ಜೀವವನ್ನಾದರೂ ಪಣಕ್ಕಿಟ್ಟು ರಕ್ಷಿಸುತ್ತಾರೆ.

**ಶ್ರೀ ಲಕ್ಷ್ಮೀನಾರಾಣ್ ಸಾಹು** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ಅತ್ಯಂತ ಸಮರ್ಥವಾಗಿ, ಆಶ್ಚರ್ಯಕರವಾಗಿ ಹಾಗೂ ಇನ್ನೂ ಹೇಳಬೇಕೆಂದರೆ, ಚಮತ್ಕಾರಿಕವಾಗಿ, ಪಂಡಿತ ಜವಾಹರಲಾಲ್ ನೆಹರು ಮಂಡಿಸಿದ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಈ ದಿನ ನಮಗೆ ನೀಡಿರುವ ಈ ಧ್ವಜವು, ನನ್ನ ಸ್ಥಳ ಒರಿಸ್ಸಾ ರಾಜ್ಯವನ್ನು ನೆನಪಿಸುತ್ತದೆ. ಒರಿಸ್ಸಾದಲ್ಲಿ ಜಗನ್ನಾಥ ದೇವಸ್ಥಾನವಿದೆ, ಸಹಸ್ರಾರು ವರ್ಷಗಳಿಂದ ಅದರ ಮೇಲೆ ಶ್ರದ್ಧಾಭಕ್ತಿಯ 'ನೀಲ ಚಕ್ರ' ನಿಂತಿದೆ ಮತ್ತು ಅದಕ್ಕೂ ಧ್ವಜಕ್ಕೂ 'ಪತಿತ ಪಾವನ ವಾನಾ' ಎಂಬುದರ ಸಂಬಂಧವಿದೆ. ಎಂದರೆ, ಧ್ವಜವು, ಬಡ ಜನತೆಯನ್ನು, ಅಸ್ಪೃಶ್ಯರನ್ನು ಪ್ರತಿನಿಧಿಸುತ್ತದೆ. ಈ ಸಂದರ್ಭದಲ್ಲಿ, ಈ ದಿನದವರೆಗೂ ಜಗನ್ನಾಥ ದೇವಸ್ಥಾನದಲ್ಲಿ ಪ್ರವೇಶಿಸಲು ನಿರಾಕರಿಸಲ್ಪಟ್ಟಿರುವ ಅಸ್ಪೃಶ್ಯರೆಂದು ಕರೆಯಲ್ಪಡುವ ಜನರಿಗೆ ಮುಕ್ತ ಪ್ರವೇಶಕ್ಕೆ ಅವಕಾಶ ಸಿಗುವಂತೆ ಪ್ರಯತ್ನಮಾಡಬೇಕೆಂದು ನಮ್ಮ ಮುಖಂಡರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಈ ಧ್ವಜದಲ್ಲಿರುವ ಚಕ್ರವು, ಕಳಿಂಗ ಮತ್ತು ಮಗಧಗಳಿಗೆ ಸಂಬಂಧಿಸಿದಂತೆ, ತರುವಾಯ ನಿಮಗೆ ಎಂದರೆ ಮಾನ್ಯ ಸಭಾಧ್ಯಕ್ಷರಿಗೆ ಸಂಬಂಧಿಸಿದಂತೆ ಒಡನಾಟ ಇರುವುದನ್ನು ನನಗೆ ನೆನಪಿಸುತ್ತದೆ. ಮಗಧದ ಅಶೋಕನು ಕಳಿಂಗ ರಾಜ್ಯದ ಮೇಲೆ ದಂಡೆತ್ತಿ ಹೋದನು. ಘನಘೋರ ಯುದ್ಧ ನಡೆಯಿತು. ಅಲ್ಲಿ ಆದ ಅಪಾರ ಜೀವಹಾನಿ ನೋಡಿದ ಅಶೋಕನು ಶಾಂತಿಪ್ರಿಯ ಅಶೋಕನಾದನು. ಈ ರೀತಿಯಾಗಿ ಅಶೋಕನು ಕಳಿಂಗ ರಾಜ್ಯವನ್ನು ಗೆದ್ದನು. ಇಲ್ಲಿ ನಾನು ಧ್ವಜವನ್ನು ನೋಡಿದ ಕೂಡಲೇ ಅಶೋಕ ಹಾಗೂ ಬುದ್ಧ ಇವರ ನಡುವಿನ ಸಂಬಂಧ ಕಾಣುತ್ತದೆ. ನಮ್ಮ ಕಳಿಂಗದ ಯುದ್ಧವು, ಅಶೋಕನಿಗೆ ಅಹಿಂಸೆಯ ದೊಡ್ಡ ಪಾಠವನ್ನೇ ಕಲಿಸಿದೆ ಎಂಬುದು ನೆನಪಾಗುತ್ತದೆ. ಈಗಲೂ ಅಶೋಕನ ಶಾಸನಗಳು ಈ ರಾಜ್ಯದ ಎರಡು ಸ್ಥಳಗಳಲ್ಲಿ ಇರುವುದನ್ನು ಕಾಣಬಹುದು. ಈ ಶಾಸನಗಳು, ನಾವು ಇಡೀ ಜಗತ್ತಿಗೆ, ಯಾವುದೇ ಜಾತಿ, ವರ್ಣ ಹಾಗೂ ಇವೇ ಮುಂತಾದ ಭೇದಭಾವಗಳಿಲ್ಲದೇ ಎಲ್ಲ ದೇಶಗಳ ಹಾಗೂ ಇಡೀ ಮಾನವಕುಲದ ಸೇವೆ ಮಾಡಬೇಕೆಂಬ ಮಹಾಸಂದೇಶವನ್ನು ಸಾರುತ್ತವೆ. ವಾಸ್ತವಿಕವಾಗಿ ಹೇಳುವುದಾದರೆ, ಈ ನಮ್ಮ ಧ್ವಜವು, ಕೇವಲ ರಾಷ್ಟ್ರಧ್ವಜವಾಗಿಲ್ಲ, ಆದರೆ ಇದಕ್ಕೆ ಅಂತಾರಾಷ್ಟ್ರೀಯ ವ್ಯಾಪ್ತಿ ಇದೆ. ಏಕೆಂದರೆ, ಚಕ್ರವು, ಅನಂತತೆಯ ತತ್ತ್ವವನ್ನು ಪ್ರತಿನಿಧಿಸುತ್ತದೆ. ಆದ್ದರಿಂದ, ನಾವೆಲ್ಲರೂ, ನಿನ್ನೆಯವರೆಗೂ ಕಾಂಗ್ರೆಸ್ಸಿಗರಾಗಿಲ್ಲದಿದ್ದರೂ, ಧ್ವಜಕ್ಕೆ ಗೌರವ ಸಲ್ಲಿಸಬೇಕು. ಈ ದಿನ ಈ ಧ್ವಜವು, ಇಡೀ ರಾಷ್ಟ್ರದಧ್ವಜ. ಸಂಪೂರ್ಣವಾಗಿ ರಾಷ್ಟ್ರೀಯ ಧ್ವಜ. ಈ ದಿನ ಪಂಡಿತ್ ಜವಾಹರಲಾಲ್ ನೆಹರು ರಾಷ್ಟ್ರಧ್ವಜವನ್ನು ಅಂಗೀಕರಿಸುವ ನಿರ್ಣಯವನ್ನು ಸಮರ್ಥವಾಗಿ ಮಂಡಿಸಿದ್ದಾರೆ.

ಈ ಧ್ವಜದಲ್ಲಿ ಮೂರು ಬಣ್ಣಗಳಿವೆ. ಜಗನ್ನಾಥನ ದೇವಸ್ಥಾನದ ಒಳಗೆ ಮೂರು ಮೂರ್ತಿಗಳು ಇರುವುದನ್ನು ನನಗೆ ನೆನಪಿಸುತ್ತದೆ. ಭಗವಾನ್ ಜಗನ್ನಾಥನು, ನೀಲಿ ಬಣ್ಣವನ್ನು ಪ್ರತಿನಿಧಿಸುತ್ತಾನೆ. ಬಲರಾಮನು ಬಿಳಿ ಬಣ್ಣವನ್ನು ಪ್ರತಿನಿಧಿಸುತ್ತಾನೆ ಮತ್ತು ಸುಭದ್ರೆಯು ಹಳದಿ ಬಣ್ಣವನ್ನು ಪ್ರತಿನಿಧಿಸುತ್ತಾಳೆ. ಭಗವಾನ್ ಜಗನ್ನಾಥನೊಡನೆ, ಒಂದು ಬದಿಯಲ್ಲಿ ಬಲರಾಮ ಮತ್ತೊಂದು ಬದಿಯಲ್ಲಿ ಸ್ತ್ರೀ ಸಮೂಹದ ಪ್ರತಿನಿಧಿ

ಸುಭದ್ರೆಯ ವಿಗ್ರಹಗಳಿವೆ. ಈ ಚಿಹ್ನೆಯನ್ನು ಪೂಜಿಸುತ್ತಿರುವುದು ಏಕೆಂದರೆ, ಯಾವ ರೀತಿಯಲ್ಲಿ ಇದು ನನ್ನ ದೇಶದ ಚಿಹ್ನೆಯಾಗಿದೆ (ಲಾಂಛನ) ಎಂದರೆ–ನಾನು ಯಾವ ಸ್ಥಳದಿಂದ ಇಲ್ಲಿ ಸದಸ್ಯನಾಗಿ ಈ ಸಂವಿಧಾನ ರಚನಾಸಭೆಯಲ್ಲಿ ಕುಳಿತಿದ್ದೇನೆಯೋ ಆ ಸ್ಥಳದ ಲಾಂಛನವಾಗಿದೆ.

ಆದ್ದರಿಂದ, ಪಂಡಿತ್ ಜವಾಹರಲಾಲ್ ನೆಹರು, ಸಮರ್ಥವಾಗಿ ಮಂಡಿಸಿರುವ ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ನಾನು ಬೆಂಬಲಿಸುತ್ತೇನೆ.

**ರೆವರೆಂಡ್ ಜೆರೋಮ್ ಡಿ'ಸೋಜಾ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಭಾರತವು, ಧರ್ಮ ಅಥವಾ ಜನಾಂಗ, ರಾಜ್ಯ ಪ್ರಾಂತ್ಯ ಅಥವಾ ವರ್ಗಗಳ ತಾರತಮ್ಯವಿಲ್ಲದೇ ಜಗತ್ತಿನ ರಾಷ್ಟ್ರಗಳ ಪಂಕ್ತಿಯಲ್ಲಿ ರಾಷ್ಟ್ರವನ್ನು ಪ್ರತಿನಿಧಿಸುವ ರಾಷ್ಟ್ರೀಯ ಲಾಂಛನವಾಗಿ ಒಪ್ಪಿಕೊಂಡಿರುವ ಈ ಅತ್ಯಂತ ಪವಿತ್ರ ದಿನದಂದು ಎಲ್ಲರೂ ಸಂತೋಷವನ್ನು ಅಭಿವ್ಯಕ್ತಗೊಳಿಸುತ್ತಿರುವಾಗ ನನಗೂ ಅವಕಾಶ ನೀಡಿದ ತಮಗೆ ಧನ್ಯವಾದಗಳು. ಮಾನ್ಯರೆ, ನಮ್ಮಲ್ಲಿ ಕೆಲವರು, ಸಾರ್ವಜನಿಕ ಪ್ರದರ್ಶನಗಳನ್ನು ನಡೆಸಿದ್ದಾರೆ ಹಾಗೂ ವಿದೇಶಗಳಲ್ಲಿ ಸಹ ಪ್ರದರ್ಶನಗಳನ್ನೂ ನಡೆಸಿದ್ದಾರೆ. ನಮ್ಮ ಮಾತೃಭೂಮಿಯನ್ನು ನೋಡಿದಾಗ, ವಿಶಾಲ ಜನ ಸಮೂಹ, ಅದರ ಪ್ರಾಚೀನ ಪರಂಪರೆ ಮತ್ತು ಸಂಸ್ಕೃತಿ ಹಾಗೂ ಅದರ ಅಸದೃಶ ಸೌಂದರ್ಯ ಇವುಗಳನ್ನು, ಈ ಪ್ರದರ್ಶನಗಳಲ್ಲಿ ಪ್ರತಿಬಿಂಬಿಸಿರಲಿಲ್ಲ, ಇದನ್ನು ನೋಡಿದಾಗ ಅವಮಾನ ಎನಿಸುತ್ತದೆ ಮತ್ತು ಈ ಅಪರಿಚಿತರು ನಮ್ಮನ್ನು ನೋಡಿದಾಗ, ಈ ದೇಶದಲ್ಲಿ ನಮಗೆ ಸ್ವತಂತ್ರ ಪ್ರಾತಿನಿಧ್ಯ ಇಲ್ಲವೆಂಬುದು ತಿಳಿದು ನಾವು ತಲೆ ತಗ್ಗಿಸುವಂತಾಯಿತು. ಮಾನ್ಯರೇ, ಇವತ್ತಿಗೆ ಈ ಅವಮಾನ ಕೊನೆಯಾಯಿತು ಮತ್ತು ಅಂಥ ಪ್ರದರ್ಶನಗಳು ನಡೆಯಬೇಕಾದರೆ ಅಲ್ಲಿರಬಹುದಾದ ಭಾರತದ ಮಕ್ಕಳು, ಇತರ ದೇಶಗಳ ಧ್ವಜ (ಚಿಹ್ನೆ)ಗಳು ಆಗಸದಲ್ಲಿ ಹಾರಾಡುತ್ತಿರುವುದನ್ನು ನೋಡಿ ಅವುಗಳಿಗೆ ಅಭಿವಂದಿಸಿ–ಗೌರವಿಸುವಾಗ, ಅವರ ಜೊತೆಗೆ ಹೆಮ್ಮೆ ಗೌರವಗಳಿಂದ ಪಾಲ್ಗೊಳ್ಳುತ್ತಾರೆ. ಹಾಗೂ ಧ್ವಜವು ಗಾಳಿಯಲ್ಲಿ ಹಾರಾಡುವಾಗೇಳುವ ಅಲೆಗಳಂತೆ ಸಂತೋಷದ ಅಲೆಗಳು ಅವರ ಹೃದಯಗಳಲ್ಲಿ ಏಳುತ್ತವೆ. ಮಾನ್ಯರೆ, ಇದೊಂದು ವಿಷಯವನ್ನು ನಿಮ್ಮ ಮುಂದಿಟ್ಟಿದ್ದೇನೆ. ನಮ್ಮೆಲ್ಲರ ಮನಸ್ಸಿನಲ್ಲಿ ಒಂದು ವಿಶಿಷ್ಟ ರೀತಿಯ ಸಂತೃಪ್ತಿ ಮನೆ ಮಾಡಿದೆ ಎಂದು ನನಗನ್ನಿಸುತ್ತದೆ.

ಸಾಂಕೇತಿಕಗೊಳಿಸುವುದು, ಧ್ವಜವನ್ನು ಹಾರಿಸುವುದರ ಮಹತ್ತ್ವ ರೂಢಿಗತ ಆಚರಣೆ ಇವುಗಳ ಅರ್ಥ ಹಾಗೂ ಅವು ಏತಕ್ಕಾಗಿ ಇವೆ ಎಂಬುದು ತಮಗೆಲ್ಲರಿಗೂ ಚೆನ್ನಾಗಿ ತಿಳಿದಿದೆ. ಹೀಗೆ ನಮ್ಮ ರೂಢಿಗತ ಆಚರಣೆಗಳ ಪ್ರತಿಯೊಂದು ಚಿಹ್ನೆಗಳು ಹಾಗೂ ಸಂಕೇತಗಳು ಅದರ ಸುತ್ತಲೂ ಆವರಿಸಿರುವ ಪ್ರತಿಭಾ ಸಂಪತ್ತು ಹೀಗೆ ಇದೆ. ನಮ್ಮ ಈ ಲಾಂಛನವು, ಬಹಳ ಸಂತೋಷವನ್ನುಂಟುಮಾಡುವಂಥದ್ದು ಹಾಗೂ ಒಂದೊಂದು ಕೂಡಾ ಅರ್ಥಪೂರ್ಣ ಸಂಕೇತಗಳಾಗಿದ್ದು, ಬಣ್ಣಗಳ ಸಾಮರಸ್ಯ ಹಾಗೂ ಮಧ್ಯದಲ್ಲಿರುವ ಚಕ್ರದ ಅನನ್ಯ ಆದರ್ಶಗಳು ಅದರ ಅರ್ಥ ಸಂಪತ್ತಿನ ಸಾಂದ್ರೀಕೃತ ರೂಪವಾಗಿದೆ. ಮಾನ್ಯರೆ, ಉಪಸ್ಥಿತರಿದ್ದವರಲ್ಲಿ ಅನೇಕರು, ನಾವು ಇಲ್ಲಿ ಸೇರಿರುವ ಅತ್ಯಂತ ಪ್ರಸಿದ್ಧ ಕಟ್ಟಡದ ಉದ್ಘಾಟನೆ ಮಾಡುವಾಗ ಒಂದು ಐತಿಹಾಸಿಕ ಸಂದರ್ಭವನ್ನು ನೆನಪಿಸಿಕೊಂಡರು. ಆ ದಿನ, ಆಗಿನ ವೈಸರಾಯ್ ಆಗಿದ್ದ ಲಾರ್ಡ್ ಇರ್ವಿನ್ ಅವರು, ಈ ಕಟ್ಟಡದ ನಿರ್ಮಾಣದ ಸಂಬಂಧದಲ್ಲಿ ಹೊರಡಿಸಿದ್ದ ಸುತ್ತೋಲೆಯನ್ನು ಉಲ್ಲೇಖಿಸಿದರು ಮತ್ತು ಉದಾತ್ತ ಕ್ರೈಸ್ತ ಇಂಗ್ಲಿಷ್ ಕವಿಗಳ ಮಾತುಗಳನ್ನು ಉದಾಹರಿಸಿದ್ದಾರೆ. ಅವರು 'ಅನಂತತೆಯು ಶ್ವೇತವರ್ಣದ ಬೆಳಕಿನ ಉಂಗುರದಂತೆ' ಎಂಬ ಮಾತುಗಳನ್ನು ಹೇಳಿದ್ದಾರೆ. ಮಾನ್ಯರೆ, ಉಂಗುರ ಎಂದರೆ, ಚಕ್ರ, ಇದು ಅನೇಕ ವಿಷಯಗಳನ್ನು ಪ್ರತಿನಿಧಿಸುತ್ತದೆ. ಕಾಲ ಘಟನೆಗಳು ಮತ್ತು ಅದಕ್ಕೆ ಒದಗಿದ ಪ್ರತೀಕಾರಗಳು, ಉದ್ಯೋಗಶೀಲತೆ ಕೈಗಾರಿಕೆ ಹಾಗೂ ಅದರ ಎಲ್ಲ ಸಾಧನೆಗಳು–ಸನಾತನ ಜೀವನದ ನಿತ್ಯತ್ವವನ್ನು ಮತ್ತು ಅದರ ಮೌಲ್ಯಗಳನ್ನು ನಮಗಾಗಿ ಪ್ರತಿನಿಧಿಸುತ್ತದೆ.

ಪಂಡಿತ್ ಜವಾಹರಲಾಲ್ ನೆಹರು, ಯಾವುದರಿಂದ ರಾಷ್ಟ್ರಜೀವನದ ಈ ಪಾರಮಾರ್ಥಿಕ ಮೌಲ್ಯಗಳನ್ನು ಮತ್ತು ಯಾವುದನ್ನು ಈ ಧ್ವಜವು ಪ್ರತಿನಿಧಿಸಬೇಕೋ ಅದನ್ನು ಉಲ್ಲೇಖಿಸಿದ್ದಾರೆ. ಈ ಪಾರಮಾರ್ಥಿಕ ಮೌಲ್ಯಗಳನ್ನು ಪ್ರತಿನಿಧಿಸುವುದಕ್ಕಾಗಿ ಈ ಚಕ್ರಕ್ಕಿಂತ ಬೇರೆ ಯಾವುದೂ ಸೂಕ್ತವಾದುದು ಇಲ್ಲ ಅಥವಾ ಇದಕ್ಕಿಂತ ಪ್ರಶಂಸನೀಯವಾದುದೂ ಇಲ್ಲ. ಇದೇ ಲಾಂಛನದ ಅಡಿಯಲ್ಲಿ ಭಾರತವು ತನ್ನ ಹೋರಾಟವನ್ನು ಮುಂದುವರಿಸುತ್ತದೆ. ಈ ಧ್ವಜವನ್ನು ನೋಡಿದ ಕೂಡಲೇ ಅತ್ಯಂತ ಉತ್ಸಾಹದಿಂದ ಮುನ್ನುಗ್ಗುವ ಸೈನಿಕರಂತೆ ಶಾಂತಿಗಾಗಿ ಭಾರತವು ತನ್ನ ಹೋರಾಟವನ್ನು ಮುಂದುವರಿಸುವುದೆಂದು ಮತ್ತು ಅನ್ಯಾಯದ ಮಾರ್ಗ ಹಿಡಿದಿರುವ ವೈರಿಗಳ ವಿರುದ್ಧ ನ್ಯಾಯೋಚಿತ ಹೋರಾಟ ನಡೆಸುವುದು; ಅದೇ ರೀತಿಯಾಗಿ ಈ ಧ್ವಜವು ನಮ್ಮ ಶಾಂತಿಪ್ರಿಯತೆಯನ್ನು ನೆನಪಿಸುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಹುದು. ಇದು, ಎಲ್ಲ ರೀತಿಯಿಂದಲೂ ನ್ಯಾಯೋಚಿತ ಮಾರ್ಗದಲ್ಲಿ ಮುಂದುವರಿಯುವುದಕ್ಕೆ ನಮಗೆ ಸಹಾಯಮಾಡುತ್ತದೆ ಹಾಗೂ ಎಲ್ಲ ಸಾಮಾಜಿಕ ದೋಷಗಳನ್ನು ದೂರ ಮಾಡಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ, ಭ್ರಾತೃತ್ವ ಭಾವನೆಗಳಿಗೆ ಹಾನಿಯುಂಟುಮಾಡುವಂಥ ಅಂತಃಕಲಹ ಸಂದರ್ಭಗಳಲ್ಲಿ, ಅನ್ಯಾಯ ನಡೆದ ಸಂದರ್ಭಗಳಲ್ಲಿ, ಕ್ರೋಧ ಹೆಚ್ಚಾದಾಗ, ಸಮುದಾಯದ ಶಾಂತಿ ಕದಡಿದಾಗ, ಈ ಧ್ವಜ ನೋಡಿದ ಕೂಡಲೇ, ಈ ಕಠೋರ ಹಾಗೂ ಕರ್ಕಶ ಧ್ವನಿಗಳು ಸಾಂತ್ವನಗೊಳ್ಳುತ್ತವೆ. ಈ ದಿನ ನಾವು ದ್ವೇಷಭಾವನೆ ಇಲ್ಲದೇ, ಸೋದರತ್ವದ ಭಾವನೆಗಳಿಂದ ನಮ್ಮ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸುವುದರಲ್ಲಿ ಸಂತೋಷವಿದೆ. ಗೌರವಿಸುವುದರಲ್ಲಿ ಸಂತೋಷವಿದೆ.

**ಮಾನ್ಯ ಸಭಾಧ್ಯಕ್ಷರು** : ಈ ಭಾಷಣಕಾರರ ಪಟ್ಟಿಯಲ್ಲಿ ಇನ್ನೂ ಅನೇಕ ಹೆಸರುಗಳಿದ್ದರೂ, ಶ್ರೀಮತಿ ಸರೋಜಿನಿ ನಾಯ್ಡು ಅವರನ್ನು ಭಾಷಣಮಾಡಲು ಕರೆಯುತ್ತೇನೆಂದು ಈ ಮೊದಲೇ ಮಾತು ಕೊಟ್ಟಿದ್ದೆ. ಆದ್ದರಿಂದ ಈ ಸದನವನ್ನು ಉದ್ದೇಶಿಸಿ ಮಾತನಾಡುವಂತೆ ನಾನು ಅವರನ್ನು ಕರೆಯುತ್ತೇನೆ.

**ಶ್ರೀಮತಿ ಸರೋಜಿನಿ ನಾಯ್ಡು** (ಬಿಹಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಭಾಷಣ ಮಾಡುವುದಿಲ್ಲವೆಂದು ನಾನು ಮತ್ತೆ ಮತ್ತೆ ಈ ದಿನ ಬೆಳಗ್ಗೆ ಸದನದಲ್ಲಿ ಹೇಳಿದ್ದೆ. ಜವಾಹರಲಾಲ್ ನೆಹರು ಅವರ ಭಾಷಣವು, ಉತ್ತಮ ಮಹಾಕಾವ್ಯದಂತೆ ಸೌಂದರ್ಯಪೂರ್ಣವಾಗಿದೆ. ಅತ್ಯಂತ ಗಂಭೀರವೂ ಹಾಗೂ ಔಚಿತ್ಯಪೂರ್ಣವಾದುದೂ ಆಗಿದೆ. ಈ ಸದನದ ಆಶೋತ್ತರಗಳನ್ನು, ಭಾವನೆಗಳನ್ನು ಹಾಗೂ ಆದರ್ಶಗಳನ್ನು ಅಭಿವ್ಯಕ್ತಿಗೊಳಿಸುತ್ತಿದೆ. ಆದರೆ, ವಿವಿಧ ಸಮುದಾಯಗಳ ಪ್ರತಿನಿಧಿಗಳಿಂದ ಕೂಡಿ ಆಗಿರುವ ಈ ಸದನದ ಪ್ರತಿನಿಧಿಗಳು, ಎದ್ದು ನಿಂತು ಈ ಧ್ವಜಕ್ಕೆ ಗೌರವ ಸಲ್ಲಿಸುತ್ತಿರುವುದನ್ನು ನೋಡಿ ನನಗೆ ಅತ್ಯಂತ ಸಂತೋಷವಾಗಿದೆ. ಈ ದಿನ, ಈ ಸದನವು ಸಂತೋಷ ಹಾಗೂ ಹೆಮ್ಮೆಯಿಂದ ಈ ಧ್ವಜವನ್ನು ಅಂಗೀಕರಿಸಿರುವುದನ್ನು ನಾನು ಹೇಳಲು ಮರೆತದ್ದಾದರೆ, ಇದು ನನ್ನ ಜೀವನದ ಮತ್ತು ಪ್ರಾಂತ್ಯದಲ್ಲಿರುವ ನನ್ನ ಸ್ಥಾನದ ಗೌರವದ ಪ್ರಶ್ನೆ ಎಂಬುದನ್ನು ಬಿಹಾರ ಪ್ರಾಂತ್ಯದಿಂದ ಬಂದಿರುವ ಹಾಗೂ ಹಿಂದೆ ಕುಳಿತಿರುವ ಜನರು ನನಗೆ ವಿಶೇಷವಾಗಿ ನೆನಪು ಮಾಡಿಕೊಡುತ್ತಿದ್ದಾರೆ. ಧ್ವಜದಲ್ಲಿರುವ ಚಕ್ರವು, ಯಾರನ್ನು ಬಿಹಾರಿ ಎಂದು ಹೇಳುತ್ತಾರೆಯೋ ಆ ಅಶೋಕನ 'ಧರ್ಮ ಚಕ್ರ' (ನನಗೆ ಚಾರಿತ್ರಿಕವಾಗಿ ಯಾವುದು ನಿಜವಾದುದು ಎಂಬುದು ಗೊತ್ತಿಲ್ಲ). ಆದರೆ, ನಾನು ಈ ದಿನ ಇಲ್ಲಿ ಮಾತನಾಡುತ್ತಿರುವುದು, ಯಾವುದೇ ಸಮುದಾಯದ ಪರವಾಗಿ ಅಲ್ಲ ಅಥವಾ ಯಾವುದೇ ಜನಾಂಗದ ಪರವಾಗಿ ಅಲ್ಲ ಅಥವಾ ಸ್ತ್ರೀಯರ ಅಥವಾ ಪುರುಷರ ಪರವಾಗಿ ಅಲ್ಲ, ಸದನದ ಮಹಿಳಾ ಸದಸ್ಯರ ಪರವಾಗಿ ಮಹಿಳೆಯೊಬ್ಬರು ಮಾತನಾಡಬೇಕೆಂದು ಒತ್ತಾಯಪಡಿಸಿದ್ದರೂ, ಆ ಕಾರಣಕ್ಕಾಗಿ ಅಲ್ಲ. ದೇಶದ ಸೇವೆಯಲ್ಲಿ ಯಾವಾಗ ಸ್ತ್ರೀ ಪುರುಷರೆಂಬ ಭಾವನೆ ಅಥವಾ ಸ್ತ್ರೀ ಪುರುಷರೆಂಬ ಪ್ರತ್ಯೇಕತೆ ಇರುವುದಿಲ್ಲವೋ, ಆಗ ವಿಶ್ವದ ನಾಗರಿಕತೆಯು ಬೆಳೆಯುವುದಕ್ಕೆ ಕಾಲ ಬಂದಿದೆ ಎಂದು ಹೇಳಬಹುದು. ಆದ್ದರಿಂದ, ಭಾರತಮಾತೆಯದು ತನ್ನದೇ ಅವಿಭಕ್ತ ಕುಟುಂಬ ಹಾಗೂ ತನ್ನದೇ ಚೇತನ, ತನ್ನ ಎಲ್ಲ ಮಕ್ಕಳಿಗೆ ಸಮಾನವಾಗಿ ತನ್ನ ಪ್ರೀತಿಯನ್ನು ನೀಡಿದ್ದಾಳೆ. ಆಯಾ

ಸಮುದಾಯಗಳು ಪೂಜಿಸುವ ಹಾಗೂ ಮಕ್ಕಳು ಯಾವುದೇ ಮೂಲೆಯಿಂದ ಯಾವ ದೇವಸ್ಥಾನಗಳಿಂದ ಅಥವಾ ಯಾವ ಮಸೀದಿಗಳಿಂದ ತನ್ನ ಮಕ್ಕಳು ಬಂದಿರಲಿ, ಅವರು ಯಾವುದೇ ಭಾಷೆಯನ್ನು ಮಾತನಾಡುತ್ತಿರಲಿ ಅಥವಾ ಅವರು ಯಾವುದೇ ಸಂಸ್ಕೃತಿಯವರಾಗಿರಲಿ ಅದು ಮುಖ್ಯವಲ್ಲ. ಅಂಥ ಸನಾತನ ಮಾತೆಯೊಬ್ಬಳು ಪುನರ್ಜನ್ಮ ತಳೆದು ಬಂದಿದ್ದಾಳೆ. ಆಕೆಯನ್ನು ಕುರಿತು ಮಾತನಾಡುತ್ತೇನೆ.

ನನ್ನ ಜೀವನದ ಸುದೀರ್ಘ ಪ್ರಯಾಣದ ಕಾಲದಲ್ಲಿ, ವಿದೇಶ ಪ್ರವಾಸದಲ್ಲಿದ್ದಾಗ–ಸ್ವಭಾವ ಹಾಗೂ ಅದೃಷ್ಟದ ಅಲೆಮಾರಿಯಾಗಿದ್ದೆನು–ಸ್ವತಂತ್ರ ರಾಷ್ಟ್ರಗಳಲ್ಲಿ ನೋವಿನ ಭಯಂಕರ ಕ್ಷಣಗಳನ್ನು ಅನುಭವಿಸಬೇಕಾಯಿತು. ಏಕೆಂದರೆ, ಭಾರತಕ್ಕೆ ಅದರದೇ ಆದ ಧ್ವಜ ಇರಲಿಲ್ಲ. ಆ ಕ್ಷಣಗಳಲ್ಲಿ ಕೆಲವು ಕ್ಷಣಗಳನ್ನು ನೆನಪಿಸಿಕೊಂಡು ಹೇಳಬಯಸುತ್ತೇನೆ.

ಕಳೆದ ಮಹಾಯುದ್ಧದ ಅನಂತರ ವರ್ಸೈನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ದಿನದಂದು ನಾನು ಪ್ಯಾರಿಸ್ಸಿನಲ್ಲಿದ್ದೆ. ಎಲ್ಲ ಕಡೆ ಸಂತೋಷ, ಸಂಭ್ರಮಗಳ ಆಚರಣೆ ನಡೆದಿತ್ತು ಮತ್ತು ಒಪೆರಾ ಹೌಸ್‌ನಲ್ಲಿ ಎಲ್ಲ ರಾಷ್ಟ್ರಗಳ ಧ್ವಜಗಳನ್ನು ಸಿಂಗರಿಸಲಾಗಿತ್ತು. ಆಗ ಅಲ್ಲಿಗೆ ಸುಮಧುರ ಕಂಠದ ಪ್ರಸಿದ್ಧ ನಟಿ ವೇದಿಕೆಗೆ ಬಂದರು. ಆಕೆ ಫ್ರಾನ್ಸ್‌ನ ಧ್ವಜವನ್ನು ಸುತ್ತಿಕೊಂಡು ಬಂದಾಗ, ಆಕೆಗಾಗಿ ಸಭಾನಡವಳಿಗಳನ್ನು ನಿಲ್ಲಿಸಲಾಯಿತು. ಇಡೀ ಪ್ರೇಕ್ಷಕ ಸಮೂಹ ಒಕ್ಕೊರಲಿನಿಂದ ಆಕೆಯ ಧ್ವನಿಗೆ ಧ್ವನಿಗೂಡಿಸಿ ಫ್ರಾನ್ಸ್ ರಾಷ್ಟ್ರಗೀತೆಯನ್ನು ಹಾಡಿದರು. ನನ್ನ ಪಕ್ಕದಲ್ಲಿ ನಿಂತಿದ್ದ ಭಾರತೀಯರೊಬ್ಬರು ಕಣ್ತುಂಬಿ ನೀರು ತುಂಬಿಕೊಂಡು ನನ್ನತ್ತ ನೋಡಿ 'ನಾವು ನಮ್ಮದೇ ಧ್ವಜವನ್ನು ಎಂದು ಪಡೆದುಕೊಳ್ಳುತ್ತೇವೆ?', ಎಂದಾಗ 'ಆ ಸಮಯ ಬೇಗನೇ ಬರುತ್ತದೆ' ಎಂದು ನಾನು ಉತ್ತರಿಸಿದೆ. 'ಆಗ ನಾವು, ನಮ್ಮದೇ ಧ್ವಜ ಹಾಗೂ ನಮ್ಮದೇ ರಾಷ್ಟ್ರಗೀತೆ ಹೊಂದುತ್ತೇವೆ.'

ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಕೂಡಲೇ, ನಾನು ನ್ಯೂಯಾರ್ಕ್‌ನಲ್ಲಿ, ಶಾಂತಿ ಸಮ್ಮೇಳನದಲ್ಲಿ ಭಾಷಣಮಾಡಬೇಕೆಂದು ಕೇಳಲಾಯಿತು. ಯಾವ ಸಭಾಂಗಣದಲ್ಲಿ ಸಭೆ ನಡೆಯುತ್ತಿತ್ತೋ, ಆ ಸಭಾಂಗಣದಲ್ಲಿ ನಲವತ್ತು ನಾಲ್ಕು ರಾಷ್ಟ್ರಗಳ ರಾಷ್ಟ್ರಧ್ವಜಗಳು ಹಾರಾಡುತ್ತಿದ್ದವು. ನಾನು ಆ ಎಲ್ಲ ರಾಷ್ಟ್ರಗಳ ರಾಷ್ಟ್ರಧ್ವಜಗಳನ್ನು ನೋಡಿದೆನು ಹಾಗೂ ನಾನು ಮಾತನಾಡಿದಾಗ ನಾನು ಅತ್ತುಬಿಟ್ಟೆ. ಈ ಮಹಾನ್ ಸಭೆಯಲ್ಲಿ, ಸ್ವತಂತ್ರ ರಾಷ್ಟ್ರಗಳ ಧ್ವಜಗಳ ಸಾಲಿನಲ್ಲಿ ನಮ್ಮ ಸ್ವತಂತ್ರ ಭಾರತದ ರಾಷ್ಟ್ರಧ್ವಜವೂ ಹಾರಾಡುವಂತಾಗಲಿ, ಶೀಘ್ರದಲ್ಲಿಯೇ, ವಿಶ್ವದಲ್ಲೇ ಅತ್ಯಂತ ಐತಿಹಾಸಿಕ ಧ್ವಜವಾಗಲಿ ಎಂದು ಹಾರೈಸಿದೆನು.

ಬರ್ಲಿನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ನಲವತ್ತೆರಡು ರಾಷ್ಟ್ರಗಳು ಮಹಿಳಾ ಸದಸ್ಯರನ್ನು ಕಳುಹಿಸಿಕೊಟ್ಟಿದ್ದ ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಅಂಥ ನೋವನ್ನು ಅನುಭವಿಸಬೇಕಾಯಿತು. ಒಂದು ದಿನ ಬೆಳಗ್ಗೆ, ರಾಷ್ಟ್ರಧ್ವಜ ಪರೇಡ್ ಮಾಡಬೇಕೆಂದು ಅವರು ಯೋಜಿಸಿದ್ದರು. ಭಾರತಕ್ಕೆ ಅಧಿಕೃತ ಧ್ವಜ ಇರಲಿಲ್ಲ. ನಮ್ಮ ದೇಶಕ್ಕೆ ರಾಷ್ಟ್ರಧ್ವಜ ಇಲ್ಲವೆಂಬ ಅವಮಾನ ಆಗದಿರಲಿ ಎಂಬ ಉದ್ದೇಶದಿಂದ ನನ್ನ ಸಲಹೆಯಂತೆ, ಭಾರತದ ಕೆಲವು ಮಹಿಳಾ ಪ್ರತಿನಿಧಿಗಳು, ತಮ್ಮ ಸೀರೆಗಳ ಪಟ್ಟಿಯನ್ನು ಹರಿದು ತ್ರಿವರ್ಣ ಧ್ವಜವನ್ನು ಮಾಡಿ, ಬೆಳಗಿನ ಕೆಲವು ಗಂಟೆಗಳ ಕಾಲ ಸಂತೋಷದಿಂದ ಹಾಗೂ ಉತ್ಸಾಹದಿಂದ ಕಾಲ ಕಳೆದರು.

ಆದರೆ, ಕೆಲವು ತಿಂಗಳುಗಳ ಹಿಂದೆ, ಜವಾಹರಲಾಲ್ ನೆಹರು ಅವರ ಪ್ರೇರಣೆಯಿಂದ, ಏಷ್ಯಾದ ರಾಷ್ಟ್ರಗಳು, ದೆಹಲಿಯಲ್ಲಿ ಸಭೆ ಸೇರಿ ಏಷ್ಯಾದಲ್ಲಿ ಒಗ್ಗಟ್ಟು ತರುವುದನ್ನು ಒತ್ತಾಯಪಡಿಸುವುದಕ್ಕಾಗಿ ಪ್ರಯತ್ನಿಸಿದ್ದ ಸಂದರ್ಭದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ನೋವು ಉಂಟಾಗಿದ್ದ ಕ್ಷಣವಾಗಿದೆ. ವೇದಿಕೆಯ ಹಿಂದಿರುವ ಗೋಡೆಯ ಮೇಲೆ ಏಷ್ಯಾದ ಪ್ರತಿಯೊಂದು ರಾಷ್ಟ್ರದ ಧ್ವಜಗಳನ್ನು ಹಾರಿಸಲಾಗಿತ್ತು. ದೊಡ್ಡ ರಾಷ್ಟ್ರಗಳು ಹಾಗೂ ಸಣ್ಣ ರಾಷ್ಟ್ರಗಳೆಲ್ಲವೂ ತಮ್ಮ ಧ್ವಜಗಳನ್ನು ಪ್ರದರ್ಶಿಸಿದ್ದವು. ಆದರೆ, ನಾವೇ ಸ್ವಯಂ–ನಿರಾಕರಣೆ ಕಾಯಿದೆಯನ್ನು ಕಾರ್ಯಾಚರಣೆಗೆ ತಂದಿದ್ದರಿಂದ ಸಮ್ಮೇಳನದಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ಅತ್ಯಂತ ನಿಷ್ಠೆಯನ್ನು

ಪ್ರದರ್ಶಿಸುವುದಕ್ಕೆ ಅಥವಾ ವಾಗ್ದಾನಮಾಡುವುದಕ್ಕೆ ಅವಕಾಶ ಇಲ್ಲದಂತಾಗಿತ್ತು. ಏಷ್ಯಾದ ಸಮ್ಮೇಳನದಿಂದ ಕಾಂಗ್ರೆಸ್ಸಿನ ತ್ರಿವರ್ಣಧ್ವಜವನ್ನು ದೂರ ಇಡುವ ತೀರ್ಮಾನದಿಂದಾಗಿ ನನಗೆ ಆದ ನೋವನ್ನು ನೀವು ಅರ್ಥಮಾಡಿಕೊಳ್ಳಬಲ್ಲಿರಾ ಮತ್ತು ಅದರಲ್ಲಿ ನೀವೂ ಭಾಗಿಗಳಾಗುವಿರಾ? ಆದರೆ, ಈ ದಿನ ಇಲ್ಲಿ, ಆ ದುಃಖದ ಹಾಗೂ ಆ ನಾಚಿಕೆಯ ಸಂದರ್ಭವು ನಮ್ಮ ನೆನಪಿಗೆ ಬರುತ್ತದೆ; ನಾವು ನಮ್ಮದೇ ಧ್ವಜವನ್ನು ಪಡೆದುಕೊಂಡಿದ್ದೇವೆ. ಈ ದಿನ, ಯಾವ ಧ್ವಜದ ಅಡಿಯಲ್ಲಿ ಸಾವಿರ ಸಾವಿರ ಜನರು ಹೋರಾಡಿದರೋ ಹಾಗೂ ಕಷ್ಟ ನಷ್ಟಗಳನ್ನು ಅನುಭವಿಸಿದರೋ ಆ ಧ್ವಜಕ್ಕೆ ನಮ್ಮ ಬೆಂಬಲ, ಸಮರ್ಥನೆ, ನಮ್ಮ ಗೌರವ ಪೂರ್ವಕ ಅಭಿನಂದನೆಗಳು. ಸ್ತ್ರೀಯರು ಹಾಗೂ ಪುರುಷರು, ವೃದ್ಧರು ಹಾಗೂ ಯುವಕರು, ರಾಜರು ಹಾಗೂ ರೈತರು, ಹಿಂದೂಗಳು ಹಾಗೂ ಮುಸ್ಲಿಮರು, ಸಿಖ್ಖರು, ಜೈನರು, ಕ್ರಿಶ್ಚಿಯನ್ನರು, ಝೋರಾಷ್ಟ್ರೀಯನ್‌ಗಳು– ಇವರೆಲ್ಲರೂ ಇದೇ ಧ್ವಜದ ಅಡಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ನನ್ನ ಸ್ನೇಹಿತರಾದ, ಖಲಿಖುಜ್ಜಮಾನ್ ಅವರು ಮಾತನಾಡುತ್ತಾ, 'ನನಗಿಂತ ಮೊದಲು, ಮಹಾನ್ ದೇಶಭಕ್ತರಾದ ನನ್ನ ಸ್ನೇಹಿತರು ಮತ್ತು ಮುಸ್ಲಿಮ್ ಸಮುದಾಯದ ಬಾಂಧವರು (ಕಾಮ್ರೆಡ್) ಈ ಧ್ವಜದ ಅಡಿಯಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಿದ್ದಾರೆ. ಮೊಹಮ್ಮದ್ ಆಲಿ, ಶೌಕತ್ ಆಲಿ, ಅನ್ಸಾರಿ ಮತ್ತು ಅಜಮಲ್ ಖಾನ್– ಇವರ ಬಗ್ಗೆ ಹೇಳುತ್ತಾರೆ ಎಂದು ಭಾವಿಸಿದ್ದೇನೆ. ಭಾರತದಲ್ಲಿರುವ ಅತ್ಯಂತ ಚಿಕ್ಕ ಸಮುದಾಯವೆಂದರೆ ಪಾರ್ಸಿ ಸಮುದಾಯದ ವಯೋವೃದ್ಧರಾದ ಶ್ರೀ ದಾದಾಬಾಯಿ ನವರೋಜಿ ಅವರ ಮೊಮ್ಮಗಳೂ ಕೂಡ ಇವರ ಜೊತೆಯಲ್ಲಿ ಜೈಲು ಶಿಕ್ಷೆಯನ್ನು ಅನುಭವಿಸಿದ್ದಾರೆ ಹಾಗೂ ಭಾರತದ ಸ್ವಾತಂತ್ರ್ಯಕ್ಕಾಗಿ ತ್ಯಾಗಮಾಡಿದ್ದಾರೆ. ಪೂರ್ವಗ್ರಹಪೀಡಿತರಾದ ಒಬ್ಬರು ನನ್ನನ್ನು ಹೀಗೆ ಕೇಳಿದ್ದರು "ನೀವು ಈ ಧ್ವಜವನ್ನು ಭಾರತದ ಧ್ವಜವೆಂದು ಹೇಗೆ ಹೇಳುತ್ತೀರಿ" ಭಾರತವು ವಿಭಜಿತವಾಗಿದೆ. ಆಗ ಅವರಿಗೆ ನಾನು 'ಇದು ಕೇವಲ ತಾತ್ಕಾಲಿಕವಾದ ಭೌಗೋಳಿಕ ವಿಭಜನೆ, ಆದರೆ, ಭಾರತೀಯರ ಹೃದಯಗಳಲ್ಲಿರುವ ಶ್ರದ್ಧೆಯ ವಿಭಜನೆ ಆಗಿಲ್ಲ' ಎಂದು ಹೇಳಿದೆ (ಕೇಳಿ, ಕೇಳಿ).ಈ ದಿನ, ಎಲ್ಲರೂ ಈ ಧ್ವಜವನ್ನು ಗೌರವಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ಚಕ್ರವು, ಏನನ್ನು ಪ್ರತಿನಿಧಿಸುತ್ತದೆ? ಇದು, ಇಡೀ ವಿಶ್ವಕ್ಕೆ ಶಾಂತಿ ಹಾಗೂ ಭ್ರಾತೃತ್ವದ ಸಂದೇಶವನ್ನು ನೀಡಿದ ಮಹಾನ್ ಚಕ್ರವರ್ತಿ ಅಶೋಕನ ಧರ್ಮಚಕ್ರವನ್ನು ಪ್ರತಿನಿಧಿಸುತ್ತದೆ. ಅನ್ಯೋನ್ಯತೆ ಹಾಗೂ ಭ್ರಾತೃತ್ವ ಮತ್ತು ಸಹಕಾರಗಳಂಥ ಆಧುನಿಕ ಆದರ್ಶಗಳನ್ನು ಅವನು ನಿರೀಕ್ಷಿಸಿದ್ದನೆ? ಆ ಚಕ್ರವು, ಪ್ರತಿಯೊಬ್ಬರ ರಾಷ್ಟ್ರೀಯ ಹಿತವನ್ನು ಹಾಗೂ ರಾಷ್ಟ್ರೀಯ ಚಟುವಟಿಕೆಗಳ ಲಾಂಛನವಾಗಿಲ್ಲವೇ? ಈ ಚಕ್ರವು ಪ್ರಖ್ಯಾತ ಮತ್ತು ಪ್ರೀತಿಯ ನಾಯಕರಾದ ಮಹಾತ್ಮ ಗಾಂಧಿಯವರನ್ನು ಪ್ರತಿನಿಧಿಸುವುದಿಲ್ಲವೇ? ಮತ್ತು ಹಿಂಜರಿಕೆ ಇಲ್ಲದೆ ಹಾಗೂ ನಿಲುಗಡೆ ಇಲ್ಲದೆ, ನಿರಂತರವಾಗಿ ಮುನ್ನಡೆಯುತ್ತಲೇ ಇರಬೇಕು ಎಂಬುದನ್ನು ಸೂಚಿಸುವ ಸೂರ್ಯಕಿರಣಗಳನ್ನು ಅದು ಪ್ರತಿನಿಧಿಸುತ್ತಿಲ್ಲವೇ? ಆ ಧ್ವಜವಿಲ್ಲದೇ ಸಾಮಾನ್ಯವಾಗಿ ಭಾರತದ ಬಗ್ಗೆ ವಿಚಾರವನ್ನು ಮಾಡಲು ಆಗುವುದೇ ಇಲ್ಲ. ಯಾರು ತಾನೇ ಅದರ ಕಾರ್ಯವ್ಯಾಪ್ತಿಯನ್ನು ಸೀಮಿತಗೊಳಿಸಲು ಸಾಧ್ಯ? ಯಾರು ತಾನೆ ಅದರ ಉತ್ತರದಾಯಿತ್ವವನ್ನು ಸೀಮಿತಗೊಳಿಸಲು ಸಾಧ್ಯ? ಇದು ಯಾರಿಗೆ ಸೇರಿದ್ದು? ಇದು ಭಾರತಕ್ಕೆ ಸೇರಿದ್ದು. ಇದು ಭಾರತಕ್ಕೆ ಸೇರಿದ್ದು, ಪಂಡಿತ್ ಜವಾಹರಲಾಲ್ ನೆಹರು, ಭಾರತವು ಎಂದೂ ಪ್ರತ್ಯೇಕವಾಗಿ ಉಳಿದಿಲ್ಲ ಎಂದು ಹೇಳಿದ್ದಾರೆ. ಅದರ ಜೊತೆಗೆ "ಭಾರತವು, ಸ್ನೇಹಿತರಿಂದಲೂ ಅದೇ ರೀತಿ ಶತ್ರುಗಳಿಂದಲೂ ಜ್ಞಾನವನ್ನು ಸ್ವಾಗತಿಸುತ್ತದೆ" ಎಂದು ಹೇಳಿದ್ದಾರೆ. ಅದು ಭಾರತಮಾತೆಯ ಗುಣವಲ್ಲವೇ? ಭಾರತಮಾತೆಯ ಸಂಸ್ಕೃತಿಯ ಮಹಾ ಸಾಗರವು, ವಿಶ್ವದ ಎಲ್ಲ ಸಂಸ್ಕೃತಿಗಳ ಸಂಗಮವಾಗಿದೆಯಲ್ಲವೇ? ಇಸ್ಲಾಮ್ ಧರ್ಮವು, ಪ್ರಜಾಪ್ರಭುತ್ವ–ಭ್ರಾತೃತ್ವದ ಆದರ್ಶಗಳನ್ನು ತಂದಿಲ್ಲವೇ. ಇರಾನ್‌ದಿಂದ ಬಂದಿರುವಂಥ ಹಾಗೂ ಅಗ್ನಿ ಆರಾಧನಾ ಮಂದಿರದಿಂದ ಪ್ರಜ್ವಲಿಸುವ ಅಗ್ನಿಯನ್ನು ತಂದಿರುವಂಥ ಝೋರಾಷ್ಟ್ರೀಯನ್‌ರ ಅಚಲ ಧೈರ್ಯವು, ಈ ಸಾವಿರಾರು ವರ್ಷಗಳ ಉದ್ದಕ್ಕೂ ಉಳಿದಿಲ್ಲವೇ? ಕ್ರಿಶ್ಚಿಯನ್‌ರು ಈ ಭೂಮಿಯ ದೀನದಲಿತರಿಗೆ

ಸೇವಾಮನೋಭಾವದ ಪಾಠವನ್ನು ಕಲಿಸಿಲ್ಲವೇ? ಅವಿಸ್ಮರಣೀಯರಾದ ಹಿಂದೂ ಜನಾಂಗವು, ಸಾರ್ವಕಾಲಿಕ ಮಾನವೀಯ ಪ್ರೀತಿಯನ್ನು ನಮಗೆ ಕಲಿಸಿಕೊಟ್ಟಿದೆ ಹಾಗೂ ಸಂಕುಚಿತದೃಷ್ಟಿಯಿಂದ ಯಾವುದನ್ನೂ ತೀರ್ಮಾನಿಸುವಂತಿಲ್ಲವೆಂಬುದನ್ನು ಕಲಿಸಿಕೊಟ್ಟಿದೆ. ಆದರೆ, ಮಾನವೀಯತೆಯ ಸಾರ್ವಕಾಲಿಕ ಮಟ್ಟದಿಂದ ಯಾವುದನ್ನು ತೀರ್ಮಾನಿಸಬೇಕು ಎಂಬುದನ್ನು ಕಲಿಸಿಕೊಟ್ಟಿದೆ.

ನನ್ನ ಅನೇಕ ಸ್ನೇಹಿತರು, ಈ ಧ್ವಜವನ್ನು ಕುರಿತು ತುಂಬುಹೃದಯದಿಂದ ಕಾವ್ಯಮಯವಾಗಿ ಮಾತನಾಡಿದ್ದಾರೆ. ಭಾರತದ ಒಗ್ಗಟ್ಟಿಗಾಗಿ ನಾವು ಮಹಿಳೆಯರೂ ಎದ್ದು ನಿಲ್ಲಬೇಕಾಗಿದೆ ಎಂದು ಹೇಳುವಾಗ ನಾನೂ ಒಬ್ಬ ಕವಯಿತ್ರಿಯಾಗಿ ಹಾಗೂ ಒಬ್ಬ ಮಹಿಳೆಯಾಗಿ ಎಲ್ಲ ವಿಷಯವನ್ನು ಗದ್ಯದಲ್ಲಿಯೇ ಹೇಳಿದ್ದೇನೆ. ಈ ಧ್ವಜದ ಅಡಿಯಲ್ಲಿ ಇರುವವರು ರಾಜನಾಗಿರಲಿ ಅಥವಾ ರೈತನಾಗಿರಲಿ ಮತ್ತು ಬಡವನಾಗಿರಲಿ, ಬಲ್ಲಿದನಾಗಿರಲಿ, ಭೇದವಿಲ್ಲವೆಂಬುದನ್ನು ನೆನಪಿನಲ್ಲಿಡಿ. ಯಾರಿಗೂ ಯಾವುದೇ ವಿಶೇಷ ಸವಲತ್ತುಗಳಿಲ್ಲ, ಕೇವಲ ಕರ್ತವ್ಯ ಮತ್ತು ಹೊಣೆಗಾರಿಕೆ ಮತ್ತು ತ್ಯಾಗಕ್ಕೆ ಮಾತ್ರ ಅವಕಾಶ ಇದೆ. ನಾವು ಹಿಂದೂಗಳಾಗಿರಲಿ ಅಥವಾ ಮುಸ್ಲಿಮರಾಗಿರಲಿ, ಕ್ರೈಸ್ತರಾಗಿರಲಿ, ಜೈನರಾಗಿರಲಿ, ಸಿಖ್ಖರಾಗಿರಲಿ ಅಥವಾ ಝೋರಾಸ್ಟ್ರೀಯನ್‌ರಾಗಿರಲಿ ಮತ್ತು ಇತರ ಯಾರೇ ಆಗಿರಲಿ, ನಮ್ಮ ಮಾತೃಭೂಮಿ, ಭಾರತವು ಒಂದೇ ರಾಷ್ಟ್ರ, ಅವಿಭಕ್ತ ಕುಟುಂಬ ಮತ್ತು ಒಂದೇ ಅವಿಭಾಜ್ಯ ಚೇತನ ಶಕ್ತಿ. ಯಾರೇ ಸ್ತ್ರೀಯಾಗಲೀ ಪುರುಷರಾಗಲಿ ಪುನರ್ಜನ್ಮ ಪಡೆದಾದರೂ ಭಾರತದಲ್ಲಿ ಜನಿಸಿ; ಸ್ತ್ರೀ ಪುರುಷರೇ ಎದ್ದೇಳಿ. ಈ ಧ್ವಜಕ್ಕೆ ಗೌರವ ವಂದನೆಗಳನ್ನು ಸಮರ್ಪಿಸಿ, ನೀವೆಲ್ಲ ಎದ್ದು ನಿಂತು ಧ್ವಜಕ್ಕೆ ಗೌರವ ವಂದನೆಗಳನ್ನು ಸಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ (ಜೋರಾಗಿ ಹರ್ಷೋದ್ಗಾರ).

**ಮಾನ್ಯ ಸಭಾಧ್ಯಕ್ಷರು** : ನಿಮ್ಮ ಮುಂದೆ ಮಂಡಿಸಿರುವ ನಿರ್ಣಯಕ್ಕೆ ಒಪ್ಪಿಗೆ ತಿಳಿಸಬೇಕೆಂದು ಮತ್ತು ಎಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ಎದ್ದು ನಿಂತು ಅರ್ಧ ನಿಮಿಷ ಧ್ವಜಕ್ಕೆ ಗೌರವ ವಂದನೆ ಸಲ್ಲಿಸಬೇಕೆಂದು ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಇಡೀ ಸಭೆಯು ಎದ್ದು ನಿಂತಿತು ಹಾಗೂ ಪ್ರಸ್ತಾವವನ್ನು ಅಂಗೀಕರಿಸಿತು.

**ಮಾನ್ಯ ಸಭಾಧ್ಯಕ್ಷರು** : ಸಭೆಯನ್ನು ಮುಂದೂಡುವುದಕ್ಕೆ ಮುಂಚೆ, ಒಂದು ಘೋಷಣೆ ಮಾಡಬೇಕಾಗಿದೆ. ಇನ್ನು ಮುಂದಿನ ಕಾರ್ಯಕ್ರಮ ಯಾವುದು ಎಂಬ ಪ್ರಶ್ನೆಯನ್ನು ನಿನ್ನೆ ನನಗೆ ಕೇಳಲಾಗಿತ್ತು. ನಾನು ಕೆಲವು ಸದಸ್ಯರೊಂದಿಗೆ ಮತ್ತು ಸಂವಿಧಾನ ರಚನಾಸಭೆಯ ಸಿಬ್ಬಂದಿಯೊಂದಿಗೆ ಸಮಾಲೋಚಿಸಿದ್ದೇನೆ. ಈ ತಿಂಗಳೊಳಗೆ ಕೇಂದ್ರ ಸಂವಿಧಾನಸಮಿತಿಯ ವರದಿಯ ಚರ್ಚೆಯನ್ನು ಪೂರ್ಣಗೊಳಿಸಬೇಕಾಗಿದೆ ಎಂದು ಹೇಳಬೇಕಾಗಿದೆ. ನಾವು ಈ ತಿಂಗಳ ೩೦ ಅಥವಾ ೩೧ನೇ ದಿನಾಂಕದೊಳಗೆ ಪೂರ್ಣಗೊಳಿಸಿದರೆ ಅಧಿವೇಶನವನ್ನು ಮುಂದೂಡಬಹುದು. ನಾವು ಮುಂದಿನ ತಿಂಗಳಿನ ೧೫ನೇ ದಿನಾಂಕದಂದು ಪುನಃ ಇಲ್ಲಿ ಸಭೆ ಸೇರಿದಾಗ, ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳಿಂದ, ಜನತೆಯ ಪ್ರತಿನಿಧಿಗಳಿಗೆ ವಾಸ್ತವಿಕವಾಗಿ ಅಧಿಕಾರ ವರ್ಗಾವಣೆಯಾಗಿರುತ್ತದೆ. ಸದಸ್ಯರು ಸಮಾರಂಭಕ್ಕೆ ಇಲ್ಲಿಗೆ ಆಗಮಿಸಿದಾಗ ನಾವು ಅಧಿವೇಶನಗಳನ್ನು ಮುಂದುವರಿಸಬಹುದೆಂದು ಸೂಚಿಸುತ್ತೇನೆ ಹಾಗೂ ಕೇಂದ್ರ ಅಧಿಕಾರ ಸಮಿತಿಯ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು. ಇದನ್ನು ಸದನವು ಒಪ್ಪಿಕೊಳ್ಳಬಹುದಾಗಿದೆ (ಮಾನ್ಯ ಸದಸ್ಯರು, 'ಹೌದು' ಎಂದು ಹೇಳಿದರು). ಅಲ್ಪಸಂಖ್ಯಾತರ ಸಮಿತಿಯ ವರದಿಯನ್ನು ಸಹ ಪರಿಶೀಲನೆಗೆ ತೆಗೆದುಕೊಳ್ಳಬಹುದಾಗಿದೆ ಮತ್ತು ಮುಂದಿನ ಅಧಿವೇಶನದಲ್ಲಿ ಅದನ್ನು ವಿಲೇ ಮಾಡಬಹುದೆಂದು ನಾನು ನಿರೀಕ್ಷಿಸಿದ್ದೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಮಾನ್ಯ ಸಭಾಧ್ಯಕ್ಷರೆ, ಈ ದಿನ ಬೆಳಗ್ಗೆ ಪ್ರದರ್ಶಿಸಿದ ಎರಡೂ ಧ್ವಜಗಳನ್ನು, ವಿಶೇಷವಾಗಿ ಸಂರಕ್ಷಿಸಿಡಬೇಕೆಂದು ಮತ್ತು ಆ ತರುವಾಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ಇಡಬೇಕೆಂದು ಗೌರವಪೂರ್ವಕ ಸಲಹೆ ಮಾಡುತ್ತೇನೆ (ಚಪ್ಪಾಳೆ).

**ಮಾನ್ಯ ಸಭಾಧ್ಯಕ್ಷರು** : ಆ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಮಹಾತ್ಮ ಗಾಂಧಿಯವರಿಗೆ ಗೌರವ ಸಲ್ಲಿಸಬೇಕೆಂದು ಸದನದ ಪರವಾಗಿ ವಿನಂತಿಸಿಕೊಳ್ಳುತ್ತೇನೆ ಹಾಗೂ ನಾವು ಆ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತೇವೆಂದು ಅವರಿಗೆ ತಿಳಿಸಬೇಕೆಂದು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ಅತ್ಯಂತ ಸಂತೋಷದಿಂದ ಹಾಗೆ ಮಾಡುತ್ತೇನೆ.

ಆ ತರುವಾಯ ಸಭೆಯನ್ನು ೧೯೪೭ರ ಜುಲೈ ೨೩ರ ಬುಧವಾರ ಬೆಳಗ್ಗೆ ಹತ್ತು ಗಂಟೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಅನುವಾದ]*